# ಅಖಿಲ ಭಾರತ ಪತ್ರಿಕೆ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ಹೆಗಡೆ-ಕುಮಟಾ – 581 330
ಫೋನ್: 94487 74920

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಸನಾತನ ಧರ್ಮ"

*ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು*

**ಅನು: ಡಾ॥ ಬಿ.ಆರ್. ಭೀಡ**
ಸನಾತನ ಧರ್ಮ ಮತ್ತು ಹಿಂದೂ ಧರ್ಮ 3

**ಅನು: ಡಾ॥ ಬಿ.ಆರ್. ಭೀಡ**
ಸನಾತನ ಧರ್ಮ ಗ್ರಂಥಗಳು 16

**ಅನು: ಡಾ॥ ಬಿ.ಆರ್. ಭೀಡ**
ಸನಾತನ ಧರ್ಮ ಮತ್ತು ಯೋಗ 24

**ಅನು: ಶ್ರೀ ಪುರುಷೋತ್ತಮ ಗಲಗಲಿ**
ಸನಾತನ ಧರ್ಮದ ಆಧಾರಭೂತ ಸತ್ಯಗಳು 29

**ಅನು: ಶ್ರೀ ಪುಟ್ಟು ಕುಲಕರ್ಣಿ**
ಸನಾತನ ಧರ್ಮ ಮತ್ತು ಮಾನವೀಯತೆ 43

**ಅನು: ಶ್ರೀ ಪುರುಷೋತ್ತಮ ಗಲಗಲಿ**
ಶ್ರೀ ಅರವಿಂದರು,
ಭಾರತ ಮತ್ತು ಸನಾತನ ಧರ್ಮ 55

**ವಾರ್ತಾಪತ್ರ** 68

## (All India Magazine)ದ ಸಂಪಾದಕರ ಟಿಪ್ಪಣಿ:

ಸನಾತನ ಧರ್ಮವನ್ನರಿತುಕೊಳ್ಳದೇ ಭಾರತವನ್ನು ವಿಶಾಲವಾದ ಹಾಗೂ ಆಳವಾದ ಅರ್ಥದಲ್ಲಿ ತಿಳಿದುಕೊಳ್ಳಲಾಗದು. ಒಂದು ಅರ್ಥದಲ್ಲಿ ಭಾರತವು ಸನಾತನ ಧರ್ಮದೊಂದಿಗೇ ಹುಟ್ಟಿದೆ, ಅದರೊಂದಿಗೇ ಬದುಕುತ್ತದೆ ಹಾಗೂ ಸನಾತನ ಧರ್ಮವು ತನ್ನ ಸಾಮೂಹಿಕ ಅಂತರಾತ್ಮದ ಜೊತೆ ಏಳು ಬೀಳುಗಳನ್ನು ಹೊಂದಿದಾಗ ಭಾರತವು ಕೂಡ ಏಳು ಬೀಳುಗಳನ್ನು ಕಾಣುತ್ತದೆ. ಆದರೆ ನಿಜವಾಗಿ ಸನಾತನ ಧರ್ಮವೆಂದರೇನು? ಅದು ಕೇವಲ ಒಂದು ದಿವ್ಯದರ್ಶನ ಅಥವಾ ಧರ್ಮಸಂಸ್ಥಾಪಕನ ಗ್ರಂಥದ ಮೇಲೆ ಆಧಾರಿತವಾಗಿರುವ ನಂಬಿಕೆಯ ವ್ಯವಸ್ಥೆಯೇ? ಅಥವಾ ಬದುಕನ್ನು ನಿಯಂತ್ರಿಸುವ ಕೆಲ ನಿಯಮಾವಳಿಗಳ ಸಮೂಹವೇ? ಅಥವಾ ಅದು ಹಿರಿದಾದ ಮತ್ತು ಉನ್ನತವಾದ ಸತ್ತೆಯೆಡೆಗಿನ ಅಭೀಪ್ಸೆಯೇ? ಅಥವಾ ಬಹಳ ಜನ ಭಾವಿಸಿರುವಂತೆ ಅದು ಕೇವಲ ಒಂದು ಜೀವನ ಪದ್ಧತಿಯೇ? ಉಳಿದ ಧರ್ಮಗಳಂತೆ ಅದೂ ಕೂಡ ಒಂದು ಕೇವಲ ಧರ್ಮವೇ? ಅಥವಾ ಮಾನವನ ಅಜ್ಞಾನದ ಕತ್ತಲನ್ನು ಬೆಳಗಿಸುವ ಆಧ್ಯಾತ್ಮಿಕ ಅಗ್ನಿಯೇ? ಶ್ರೀ ಅರವಿಂದರಿಗಿಂತ ಬೇರಿನ್ನಾರು ನಮಗೆ ಸಮರ್ಪಕವಾದ ಉತ್ತರವನ್ನು ಕೊಡಬಲ್ಲರು! ಅವರಿಗೆ ಸನಾತನ ಧರ್ಮವೊಂದು ಜೀವಂತ ಸತ್ಯವಾಗಿತ್ತು, ಅದೊಂದು ಜಡ್ಡುಗಟ್ಟಿದ ವಿದ್ವದ್ ಜ್ಞಾನವಾಗಿರಲಿಲ್ಲ ಅಥವಾ ಎಲ್ಲವನ್ನೂ ಒಳಗೊಳ್ಳಬಲ್ಲ ದಿವ್ಯ ಸತ್ಯದ ಒಕ್ಕಣ್ಣಿನ ದೃಷ್ಟಿಯಾಗಿರಲಿಲ್ಲ. ಅವರ ದರ್ಶನವು ನಮಗೆ ಬರೀ ಸನಾತನ ಧರ್ಮವೆಂದರೆ ಏನು, ಅದೇನಾಗಿತ್ತು ಎಂಬುದನ್ನು ಮಾತ್ರ ತಿಳಿಸದೇ ಮುಂದೆ ಏನಾಗಲಿದೆ ಎಂಬುದನ್ನೂ ತಿಳಿಸುತ್ತದೆ. ಏಕೆಂದರೆ ಎಲ್ಲಕ್ಕಿಂತ ಹೆಚ್ಚಾಗಿ ಸನಾತನ ಧರ್ಮವು ಜೀವಂತ ಮತ್ತು ಕ್ರಿಯಾಶೀಲ ಸತ್ಯವಾಗಿದೆ, ಅದು ಕಾಲ ಪಥದಲ್ಲಿ ತನ್ನನ್ನು ಅನಾವರಣಗೊಳಿಸಿಕೊಳ್ಳುತ್ತ ಹೋಗುತ್ತದೆ. ಈ ಸಂಚಿಕೆಯಲ್ಲಿನ ವಿಷಯ ಇದೇ ಆಗಿದ್ದು ಶ್ರೀ ಅರವಿಂದರ ಮಹಾ ಬೆಳಕಿನಲ್ಲಿ ನಾವು ಇದನ್ನು ಕಾಣಲಿದ್ದೇವೆ.

*



# ಸನಾತನ ಧರ್ಮ ಮತ್ತು ಹಿಂದೂ ಧರ್ಮ

## ಹಿಂದೂ ಧರ್ಮವೆಂದರೆ ಯಾವುದು?

ನಾವು ಸನಾತನವೆಂದು, ಶಾಶ್ವತವೆಂದು ಕರೆಯುವ ಧರ್ಮ ಯಾವುದು? ಅದು ಹಿಂದೂ ಧರ್ಮ ಮಾತ್ರ, ಏಕೆಂದರೆ ಹಿಂದೂ ರಾಷ್ಟ್ರ ಅದನ್ನು ಪಾಲಿಸಿಕೊಂಡು ಬಂದಿದೆ, ಈ ದ್ವೀಪಕಲ್ಪದಲ್ಲಿ, ಸುತ್ತಲೂ ಸಮುದ್ರ ಹಾಗೂ ಹಿಮಾಲಯಗಳಿಂದ ಪರಿವೃತವಾಗಿರುವ ಏಕಾಂತ ಪ್ರದೇಶದಲ್ಲಿ ಅದು ಬೆಳೆದು ಬಂದಿದೆ, ಈ ಪವಿತ್ರ ನೆಲದಲ್ಲಿನ ಆರ್ಯ ಜನಾಂಗಕ್ಕೆ ಈ ದರ್ಮವನ್ನು ಯುಗಯುಗಾಂತರಗಳಲ್ಲಿ ಕಾಪಾಡಿಕೊಂಡು ಪೋಷಿಸಿಕೊಂಡು ಬರಲು ಹೊಣೆಗಾರಿಕೆಯನ್ನು ವಹಿಸಿಕೊಡಲಾಗಿದ್ದಿತು. ಆದರೆ ಅದು ಈ ಒಂದೇ ರಾಷ್ಟ್ರದ ಸೀಮೆಗೆ ಸೀಮಿತವಾಗಿಲ್ಲ. ಅದು ಎಂದಿಗೂ ಈ ಜಗತ್ತಿನ ಯಾವುದೇ ಒಂದು ನಿರ್ದಿಷ್ಟ ಭಾಗಕ್ಕೆ ಅಂಟಿಕೊಂಡಿಲ್ಲ. ನಾವು ಯಾವುದನ್ನು ಹಿಂದೂ ಧರ್ಮ ಎಂದು ಕರೆಯುತ್ತೇವೆಯೋ ಅದು ನಿಜವಾಗಿಯೂ ಶಾಶ್ವತ ಧರ್ಮವಾಗಿದೆ. ಏಕೆಂದರೆ, ಅದು ವಿಶ್ವವ್ಯಾಪಿಯಾಗಿದೆ, ಎಲ್ಲವನ್ನೂ ತನ್ನೊಳಗೆ ಸಮಾಹಿತ–ಗೊಳಿಸಿಕೊಳ್ಳುತ್ತದೆ. ಯಾವುದೇ ಧರ್ಮವಿರಲಿ, ಅದು ವಿಶ್ವವ್ಯಾಪಿಯಾಗಿರದಿದ್ದರೆ ಅದು ಶಾಶ್ವತವಾಗಿ ಉಳಿಯಲಾರದು. ಸಂಕುಚಿತವಾದ, ನಿರ್ದಿಷ್ಟ ಮತ ಅಥವಾ ಪಂಥಕ್ಕೆ ಸೀಮಿತವಾದ, ಉಳಿದೆಲ್ಲವನ್ನೂ ನಿರಾಕರಿಸುವ ಧರ್ಮವು ಕೇವಲ ಒಂದು ಸೀಮಿತ ಅವಧಿಯವರೆಗೆ ಮಾತ್ರ ಉಳಿಯಬಲ್ಲದು, ಸೀಮಿತ ಗುರಿ ಸಾಧನೆಯನ್ನು ಮಾತ್ರ ಮಾಡಬಲ್ಲದು. ಆದರೆ ಹಿಂದೂ ಧರ್ಮವು ಮಾತ್ರ ಭೌತಿಕವಾದದ ಮೇಲೆ ವಿಜಯ ಸಾಧಿಸಬಲ್ಲದು, ಏಕೆಂದರೆ ಅದು ಎಲ್ಲ ವೈಜ್ಞಾನಿಕ ಆವಿಷ್ಕಾರಗಳನ್ನು, ತತ್ವ ಶಾಸ್ತ್ರದ ಚಿಂತನೆಗಳನ್ನು ಮುಂದಾಗಿ ಊಹಿಸಿ, ತನ್ನೊಳಗೆ ಸೇರಿಸಿಕೊಳ್ಳುತ್ತದೆ. ಕೇವಲ ಈ ಹಿಂದೂ ಧರ್ಮವೊಂದೇ ಮನುಕುಲದ ಮೇಲೆ ಭಗವಂತನ ಆತ್ಮೀಯತೆಯ ಮುದ್ರೆಯನ್ನು ಒತ್ತುತ್ತದೆ ಹಾಗೂ ಮಾನವನು ಭಗವಂತನನ್ನು ಸಮೀಪಿಸಬಹುದಾದ ಎಲ್ಲ ಸಾಧನೆಗಳನ್ನು, ಮಾರ್ಗಗಳನ್ನು ತನ್ನೊಳಗೆ ಸಮಾಹಿತಗೊಳಿಸಿಕೊಳ್ಳುತ್ತದೆ. ಈ ಧರ್ಮವೊಂದೇ ಸದಾ ಸತ್ಯದ ಮೇಲೆ, – ಎಲ್ಲ ಧರ್ಮಗಳೂ ಒಡಂಬಡುವಂತೆ ಭಗವಂತನು ಎಲ್ಲರಲ್ಲೂ ಇದ್ದಾನೆ, ಎಲ್ಲದರಲ್ಲೂ ಇದ್ದಾನೆ, ನಾವು ಅವನೊಳಗೇ ಚಲಿಸುತ್ತೇವೆ,

ನಮ್ಮ ಅಸ್ತಿತ್ವವೆಲ್ಲವೂ ಅವನೊಳಗೇ ಇದೆ – ಎಂಬ ಸತ್ಯದ ಮೇಲೆ ಪ್ರತಿಕ್ಷಣ ಒತ್ತು ಕೊಡುತ್ತದೆ. ಹಿಂದೂ ಧರ್ಮವು ನಮಗೆ ಈ ಸತ್ಯವನ್ನು ಸುಮ್ಮನೆ ಒಪ್ಪಿಕೊಳ್ಳಲು, ನಂಬಲು ಅಥವಾ ತಿಳಿದುಕೊಳ್ಳಲು ಕಲಿಸುವದಿಲ್ಲ. ಬದಲಾಗಿ ಆ ಸತ್ಯವನ್ನು ನಮ್ಮ ಅಸ್ತಿತ್ವದ ಎಲ್ಲ ಭಾಗಗಳ ಮೂಲಕ ಸಾಕ್ಷಾತ್ಕರಿಸಿಕೊಳ್ಳಲು ಸಮರ್ಥರನ್ನಾಗಿ ಮಾಡುತ್ತದೆ. ಜಗತ್ತು ಅಂದರೆ ಏನೆಂಬ ಸತ್ಯವನ್ನು ಅದು ಜಗತ್ತಿಗೆ ಅರಿವು ಮಾಡಿಕೊಡುತ್ತದೆ. ಎಲ್ಲವೂ ವಾಸುದೇವನ ಲೀಲೆ ಎಂಬ ಸತ್ಯವನ್ನು ತಿಳಿಸಿಕೊಡುತ್ತದೆ, ಸ್ಪಷ್ಟಪಡಿಸಿಕೊಡುತ್ತದೆ. ಆ ಲೀಲೆಯಲ್ಲಿ ನಮ್ಮ ಪಾತ್ರವನ್ನು ಎಷ್ಟು ಚೊಕ್ಕಟವಾಗಿ ಮಾಡಬಲ್ಲೆವು, ಅದರ ಸೂಕ್ಷ್ಮ ವಿವರಗಳನ್ನು, ಉದಾತ್ತ ನಿಯಮಗಳನ್ನು ಚೆನ್ನಾಗಿ ತಿಳಿಸಿಕೊಡುತ್ತದೆ. ಕೇವಲ ಇದೊಂದೇ ಧರ್ಮವು ಜೀವನವನ್ನು, ಅದರ ಸೂಕ್ಷ್ಮಾತಿಸೂಕ್ಷ್ಮ ವಿವರಗಳಿಂದ ಕ್ಷಣಕಾಲ ಕೂಡ ಬೇರ್ಪಡಿಸುವುದಿಲ್ಲ. ಈ ಧರ್ಮಕ್ಕೆ ಅಮರತ್ವವೆಂದರೇನೆಂಬುದು ಗೊತ್ತು, ಮತ್ತು ನಮ್ಮಿಂದ ಇದು ಮೃತ್ಯುವಿನ ಸತ್ಯವನ್ನು ಸಂಪೂರ್ಣವಾಗಿ ಬೇರ್ಪಡಿಸಿದೆ.

**CWSA 8: 11-12**

*

**ಹಿಂದೂ ಧರ್ಮದಲ್ಲಿ ಎರಡು ಪ್ರಕಾರಗಳಿವೆ**

ಹಿಂದೂ ಧರ್ಮದಲ್ಲಿ ಎರಡು ಪ್ರಕಾರಗಳಿವೆ; ಒಂದು ಅಡುಗೆ ಮನೆಯ ಮೇಲೆ ತನ್ನ ನಿಲುವು ತೆಗೆದುಕೊಳ್ಳುತ್ತದೆ, ಶರೀರವನ್ನು ಸ್ವಚ್ಛಗೊಳಿಸುವುದರ ಮೂಲಕ ಸ್ವರ್ಗ ಪ್ರಾಪ್ತಿಗಾಗಿ ಪ್ರಯತ್ನಿಸುತ್ತದೆ. ಇನ್ನೊಂದು, ಭಗವಂತನಿಗಾಗಿಯೇ ಪ್ರಯತ್ನ ಪಡುತ್ತದೆ, ಆದರೆ ಅಡುಗೆ ಪಾತ್ರೆಯ ಮೂಲಕ ಅಲ್ಲ ಮತ್ತು ಸಾಮಾಜಿಕ ಸಂಪ್ರದಾಯಗಳ ಮೂಲಕವೂ ಅಲ್ಲ. ಈ ಎರಡನೆಯದು ಕೂಡ ಹಿಂದೂ ಧರ್ಮವೇ, ಮತ್ತು ಇದು ಅತಿ ಪುರಾತನವಾದದ್ದು ಕೂಡ, ಮತ್ತು ಮೊದಲಿನ–ದ್ದಕ್ಕಿಂತ ಹೆಚ್ಚು ಕಾಲ ಬಾಳುವಂಥದು. ಭೀಷ್ಮ, ಕೃಷ್ಣ, ಶಂಕರಾಚಾರ್ಯ, ಚೈತನ್ಯ ಇವರೆಲ್ಲರ ಧರ್ಮ ಇದೇ, ಈ ಹಿಂದೂ ಧರ್ಮ ಹಿಂದೂಸ್ಥಾನವನ್ನು ಮೀರಿ ನಿಲ್ಲುತ್ತದೆ. ಇದು ಅತಿ ಪುರಾತನ ಕಾಲದಿಂದಲೂ ಇದೆ ಮತ್ತು ಸದಾ ಕಾಲ ಇರುತ್ತದೆ, ಏಕೆಂದರೆ ಇದು ಯುಗ ಯುಗಾಂತರಗಳಲ್ಲೂ ಸದಾ ಬೆಳೆಯುತ್ತ ಹೋಗುವಂಥದಾಗಿದೆ ಇದರ ಧ್ಯೇಯ ವಾಕ್ಯ "ಕ್ರಿಯೆ" ಅಲ್ಲ ಬದಲಾಗಿ



"ಕರ್ಮ", "ಶಾಸ್ತ್ರ"ವಲ್ಲ ಬದಲಾಗಿ "ಜ್ಞಾನ", "ಆಚಾರ"ವಲ್ಲ ಬದಲಾಗಿ "ಭಕ್ತಿ"ಯಾಗಿದೆ. ಹೀಗಿದ್ದರೂ ಇದು ಕ್ರಿಯೆ, ಶಾಸ್ತ್ರ, ಆಚಾರಗಳನ್ನು ನಿರಾಕರಿಸುವುದಿಲ್ಲ, ಅವುಗಳನ್ನು ಒಪ್ಪಿಕೊಳ್ಳುತ್ತದೆ. ಅವು ಅತ್ಯಂತ ಧ್ಯೇಯಗಳಲ್ಲ, ಅವುಗಳನ್ನು ಅತ್ಯಂತಿಕವಾಗಿ ಅನುಸರಿಸುತ್ತ ಕೊಡುವುದಿಲ್ಲ, ಬದಲಾಗಿ ಅವುಗಳನ್ನು ಕರ್ಮ, ಜ್ಞಾನ, ಭಕ್ತಿಗಳನ್ನು ಪರಿಪೂರ್ಣಗೊಳಿಸಲು ಅನುಸರಿಸುವ ಮಾರ್ಗಗಳೆಂದು ಮನ್ನಿಸುತ್ತದೆ. "ಕ್ರಿಯೆ" ಅಂದರೆ ಶಬ್ದಕೋಶದ ಪ್ರಕಾರ ಹಿರಿದಾದ ಜ್ಞಾನ ಸಂಪಾದಿಸಲು ಸಹಾಯ ಮಾಡುವ ಪ್ರತಿಯೊಂದು ಸಾಧನ. ಉದಾ. ಉಸಿರಾಟದ ಮೇಲೆ ಪ್ರಭುತ್ವ, ಮಂತ್ರ ಪುರಶ್ಚರಣ, ಜಪ, ನಿರ್ದಿಷ್ಟ ಪರಿಕಲ್ಪನೆಯೊಂದರ ಮೇಲೆ ಧ್ಯಾನ ಇತ್ಯಾದಿ. "ಶಾಸ್ತ್ರ" ಅಂದರೆ ಕರ್ಮವನ್ನು ವ್ಯವಸ್ಥಿತಗೊಳಿಸಬಲ್ಲ ಜ್ಞಾನ, ಕರ್ತವ್ಯ, ಅಕರ್ತವ್ಯಗಳನ್ನು ನಿರ್ಣಯಿಸುವ ಅರಿವು; ಇದು ಜ್ಞಾನದ ಎರಡು ಮೂಲಗಳನ್ನು ಗುರುತಿಸುತ್ತದೆ, ತಾತ್ಕಾಲಿಕ ನಿಷೇಧಗಳನ್ನು ಹೇರುವ ಧರ್ಮಕ್ಕಿಂತ ಭಿನ್ನವಾದ ನಮ್ಮ ಪುರಾತನ ಗ್ರಂಥಗಳಲ್ಲಿ ಬರೆದಿರುವ ಅಪೌರುಷೇಯ ವೇದಗಳ ಶಾಶ್ವತ ಜ್ಞಾನ. "ಆಚಾರ" ಅಂದರೆ ಹೃದಯವನ್ನು ಶುದ್ಧಗೊಳಿಸಿ ದೈವೀ ಪ್ರೇಮಕ್ಕೆ ಯೋಗ್ಯವಾದ ಪಾತ್ರೆಯನ್ನಾಗಿ ಮಾಡುವ ನೈತಿಕ ಶಿಸ್ತು ಎಂದು ಅರ್ಥ. ಕೆಲವೊಂದು ಕ್ರಿಯೆಗಳು, ಶಾಸ್ತ್ರದ ಕೆಲವೊಂದು ನಿಯಮಗಳು, ಆಚಾರದ ಕೆಲವೊಂದು ಸೂಕ್ಷ್ಮ ವಿವರಗಳು ಸಾರ್ವಕಾಲಿಕ–ವಾಗಿರುತ್ತವೆ ಮತ್ತು ನಿರಂತರ ಅನುಷ್ಠಾನಕ್ಕಾಗಿ ಇರುತ್ತವೆ. ಕೆಲವೊಂದು ತಾತ್ಕಾಲಿಕವೂ ಆಗಿರುತ್ತವೆ, ದೇಶ–ಕಾಲ–ಪಾತ್ರ–ಸಮಯ–ಸ್ಥಳ ಮತ್ತು ಮನುಕುಲದ ಅಗತ್ಯಕ್ಕೆ ತಕ್ಕಂತೆ ಬದಲಾಗುವಂಥವುಗಳೂ ಇರುತ್ತವೆ. ಈ ತಾತ್ಕಾಲಿಕ ನಿಯಮಗಳ ಸಂಬಂಧವಾಗಿ ಅಡುಗೆ ಪಾತ್ರೆ, ಯೋಗ–ಹೋಮ ಮುಂತಾದವುಗಳ ಪಾತ್ರ ಇದ್ದಿತು. ಆದರೆ ಅವು ಎಲ್ಲರಿಗಾಗಿ ಅಲ್ಲ ಮತ್ತು ಎಲ್ಲ ಕಾಲಕ್ಕೂ ಅಲ್ಲ. ಅತಿ ವಿಪತ್ತಿನ ಸಮಯದಲ್ಲಿ, ಬಾಹ್ಯ ಒತ್ತಡದ ತೀವ್ರತೆಯ ಸಮಯದಲ್ಲಿ ಹಿಂದೂ ಧರ್ಮವು ಅಂತರ್ದೇಗುಲದಿಂದ ಪಲಾಯನಗೈದು ಅಡುಗೆ ಮನೆಯಲ್ಲಿ ಅಡಗಿ ಕುಳಿತುಕೊಂಡಿತ್ತು.

**CWSA 1: 551**

*



ಪ್ರಚಲಿತದಲ್ಲಿ ಇರುವ ಪಾಶ್ಚಾತ್ಯ ಬುದ್ಧಿಮತ್ತೆಗೆ ತಿಳಿದಿರುವ ಯಾವುದೇ ವ್ಯಾಖ್ಯೆಗಳಿಂದ "ಭಾರತೀಯ ಧರ್ಮ"ವನ್ನು ವಿವರಿಸಲು ಶಕ್ಯವಾಗುವದಿಲ್ಲ. ಅದು ಅದರದೇ ಆದ ಒಟ್ಟಂದದಲ್ಲಿ(Totality) ಒಂದು ಮುಕ್ತ ಮತ್ತು ಸಹನಶೀಲತೆಯ ಸಂಯೋಜನಾ ವ್ಯವಸ್ಥೆಯ ದೈವೀ ಆರಾಧನೆಯನ್ನು ಮತ್ತು ಅನುವಭವಗಳನ್ನು ಒಳಗೊಂಡಿದೆ. ಏಕೈಕ ಪರಮ ಸತ್ಯವನ್ನೇ ಹಲವು ಆಯಾಮಗಳಲ್ಲಿ ಪರಿಶೀಲಿಸುವದರ ಮೂಲಕ, ಅದು ಏನನ್ನೂ ಹುದುಗಿಸಿ ಇಡುತ್ತಿಲ್ಲ. ತನ್ನದೇ ಆದ ನಿಗದಿತ ನಾಮವನ್ನೂ ಸಹಿತ ಅದು ರೂಪಿಸಿಕೊಂಡಿಲ್ಲ. ಅದಕ್ಕಿಂತ ಹೆಚ್ಚಾಗಿ ಬಂಧನಗಳ ವ್ಯಾಪ್ತಿಯಲ್ಲಿಯೇ ಅದು ನಿರ್ಬಂಧಗೊಂಡಿಲ್ಲ. ಇಲ್ಲಿ ತನ್ನೊಳಗೇ ಸೃಷ್ಟಿಗೊಂಡು ಸಂಯೋಜನೆ ಹೊಂದಿದ ಪಂಥಗಳು ಮತ್ತು ವಿಭಾಗಗಳಿವೆ. ಅವುಗಳಿಗೆ ತಮ್ಮದೇ ಆದ ಸ್ಥಾನಮಾನಗಳಿಗೂ ಅವಕಾಶವನ್ನು ಒದಗಿಸಿ ಕೊಟ್ಟರೂ ಸಹಿತ, ತಾನು ಮಾತ್ರ ನಾಮರಾಹಿತ್ಯವಾಗಿ, ರೂಪರಾಹಿತ್ಯವಾಗಿ, ವೈಶ್ವಿಕವಾಗಿ, ಅನಂತವಾಗಿ ಪ್ರಾಚೀನ ಕಾಲದಿಂದಲೂ ಒಪ್ಪಿತವಾಗಿರುವ ಬ್ರಹ್ಮನಂತೆಯೇ ಸ್ಥಿತವಾಗಿದೆ.

ಆದರೂ ಸಹಿತವಾಗಿ, ಅಚ್ಚರಿದಾಯಕ ಸಂಗತಿ ಎನ್ನುವಂತೆ, ಇನ್ನುಳಿದ ವರ್ಣಗಳ ಪಾರಂಪರಿಕ ಧರ್ಮಗ್ರಂಥಗಳಿಂದ, ಪಂಥಗಳಿಂದ ಮತ್ತು ಸಂಕೇತಗಳಿಂದ ತಾನು ಸೂಕ್ತವಾದ ಅಂತರವನ್ನು ಕಾಯ್ದುಕೊಂಡಿದೆ. ಇನ್ನುಳಿದ ಧರ್ಮಗಳಿಗಿರುವ ಹಾಗೆ ಋಜುವಾತುಗೊಳಿಸಿಕೊಳ್ಳಲೇಬೇಕಾದ ಅತ್ಯಾವಶ್ಯಕವಾದ ಸಂಗತಿಗಳನ್ನು ಹೊಂದದೇ ಇದ್ದರೂ ಸಹಿತವಾಗಿ, ಇದು ಸಂಪೂರ್ಣವಾಗಿ



ವ್ಯಾಪ್ತತ್ವವನ್ನು ಹೊಂದಿದ, ಹಲವು ಆಯಾಮವುಳ್ಳ, ಯಾವಾಗಲೂ ಐಕ್ಯತಾ ಮನೋಭಾವದಲ್ಲಿರುವ ಮತ್ತು ಉತ್ತರೋತ್ತರವಾಗುತ್ತಿರುವ ಜೊತೆಗೆ ವಿಸ್ತಾರವಾದ ವ್ಯವಸ್ಥೆ ಹೊಂದಿರುವ ಆಧ್ಯಾತ್ಮಿಕ ಸಂಸ್ಕೃತಿಯಾಗಿದೆ.

**CWSA 20: 193** **- ಶ್ರೀ ಅರವಿಂದರು**

*

**ಉನ್ನತವಾದ ಮತ್ತು ನಿಜವಾದ ಹಿಂದೂ ಧರ್ಮ**

ಉನ್ನತವಾದ ಮತ್ತು ನಿಜವಾದ ಹಿಂದೂ ಧರ್ಮ ಕೂಡ ಎರಡು ಪ್ರಕಾರದ್ದಿದೆ – ನಿರ್ದಿಷ್ಟ ಪಂಥಾಭಿಮಾನಿ ಹಾಗೂ ಪಂಥಾಭಿಮಾನ ರಹಿತವಾದದ್ದು, ಒಂದು ವಿಘಟನಕಾರಿ, ಒಡೆಯುವಂಥದು, ಇನ್ನೊಂದು ಸಂಯೋಜಿಸುವಂಥದು, ಒಂದು ನಿರ್ದಿಷ್ಟ ಜಾತಿ, ಪಂಥ, ಮತದಲ್ಲೇ ಸಂಕುಚಿತ–ವಾಗಿರುವಂಥದು, ಇನ್ನೊಂದು ಎಲ್ಲವನ್ನೂ ಒಳಗೊಳ್ಳಲು ಯತ್ನಿಸುವಂಥದು. ಮೊದಲನೆಯದು ರಾಜಸಿಕ ಮನೋಭಾವದಿಂದ ಹುಟ್ಟಿರುತ್ತದೆ ಅಥವಾ ಒಂದು ಪರಿಕಲ್ಪನೆಗೆ, ಸಿದ್ಧಾಂತಕ್ಕೆ ಬಲವಾಗಿ ತಾಮಸಿಕವಾಗಿ ಅಂಟಿಕೊಂಡಿರುತ್ತದೆ, ನಿರ್ದಿಷ್ಟ ಅನುಭವ, ಅಭಿಪ್ರಾಯ, ಅಥವಾ ಅಭಿಪ್ರಾಯಗಳ ಸಮೂಹ, ನಿರ್ದಿಷ್ಟ ಮನೋಭಾವ, ಮನಃಸ್ಥಿತಿ, ನಿರ್ದಿಷ್ಟ ಗುರು ಅಥವಾ ಆಯ್ದ ಅವತಾರಗಳಿಗೆ ಕಟ್ಟುಬಿದ್ದಿರುತ್ತದೆ. ಇಂಥ ಅಭಿಮಾನವು ಅಸಹಿಷ್ಣುವಾಗಿರುತ್ತದೆ, ಹಠವಾದಿ–ಯಾಗಿರುತ್ತದೆ, ಅಲ್ಪ ಜ್ಞಾನದಿಂದ ಗರ್ವಿಷ್ಠವಾಗಿರುತ್ತದೆ, ತನ್ನದಲ್ಲದ ಬೇರೆ ಸಿದ್ಧಾಂತವನ್ನು ಬಲವಾಗಿ ಖಂಡಿಸುವಂತದಾಗಿರುತ್ತದೆ. ಅದು ಯಾವಾಗಲೂ ಬೇರೆಯವರ ಕುಸಂಸ್ಕಾರ, ಮೂಢನಂಬಿಕೆಗಳ ಕುರಿತೇ ಮಾತನಾಡುತ್ತಿರುತ್ತದೆ, ಆದರೆ ತನ್ನದಕ್ಕೆ ಮಾತ್ರ ಕುರುಡಾಗಿರುತ್ತದೆ. ಅದು ಹೇಳುತ್ತಿರುವುದೇನೆಂದರೆ, "ನನ್ನ ಗುರು ಮಾತ್ರ ನಿಜವಾದ ಏಕೈಕ ಗುರು, ಉಳಿದವರೆಲ್ಲ ಢೋಂಗಿ, ಕಡಿಮೆ ದರ್ಜೆಯವರು"; ಅಥವಾ "ನನ್ನ ಮನಃಸ್ವಭಾವ ಅಥವಾ ಸ್ಥಿತಿ ಮಾತ್ರ ಸರಿಯಾದದ್ದು, ಯಾರು ನನ್ನ ಮಾರ್ಗವನ್ನು ಅನುಸರಿಸುವುದಿಲ್ಲವೋ ಅವರು ಮೂರ್ಖರೋ, ವಿದ್ಯಾ ಮದದಿಂದ ಕೂಡಿದವರೋ ಅಥವಾ ಶ್ರದ್ಧಾ ವಿಹೀನರೋ ಆಗಿರುತ್ತಾರೆ"; ಅಥವಾ "ನನ್ನ ಅವತಾರವೊಂದೇ ಭಗವಂತನ ನಿಜವಾದ ಅವತಾರ, ಅವನ ಸ್ವರೂಪ, ಉಳಿದವುಗಳೆಲ್ಲ ಅದಕ್ಕಿಂತ ಕೆಳಗಿನವುಗಳು"; ನನ್ನ ಇಷ್ಟ ದೇವತೆಯೇ ನಿಜವಾದ ಭಗವಂತ, ಉಳಿದವುಗಳೆಲ್ಲ ಅವನ ಭಾಗಶಃ, ಆಂಶಿಕ ಅಥವಾ ಅಪೂರ್ಣ ಪ್ರಕಟಣೆಗಳು", ಆತ್ಮವು ಉನ್ನತ ಸ್ತರಕ್ಕೆ ಏರಿದಾಗಲೂ

ಸಹ, ತನ್ನ ಆಯ್ಕೆ, ತನ್ನದೇ ಆದ ಸಿದ್ಧಾಂತ, ಅನುಭವ, ಅಭಿಪ್ರಾಯ, ಮನಃಸ್ವಭಾವ, ಗುರು ಅಥವಾ ಇಷ್ಟ ದೇವತೆಯನ್ನೇ ಅನುಸರಿಸಿಕೊಂಡು ಹೋಗುತ್ತದಾದರೋ ಉಳಿದವುಗಳೆಡೆಗೆ ನಿರ್ಲಕ್ಷ್ಯ ತೋರುವುದಿಲ್ಲ. ಆ ಧರ್ಮ ಹೇಳುತ್ತದೆ, "ಅನೇಕ ಮತ, ಪಂಥಗಳಿವೆ, ಎಲ್ಲವೂ ಸಮನಾಗಿಯೇ ಆ ಭಗವಂತನೆಡೆಗೆ ಕೊಂಡೊಯ್ಯುತ್ತವೆ. ಎಲ್ಲ ಜನರು, ಪಾಪಿಷ್ಠರು, ದೈವ ನಿಂದಕರು ಕೂಡ ಸಾಧನೆಯಲ್ಲಿ ನನಗೆ ಬಂಧುಗಳೇ. ಏಕೈಕನಾದ ಭಗವಂತನು ಎಲ್ಲರಿಗೂ ಪ್ರಿಯನಾಗಿದ್ದು ಎಲ್ಲರನ್ನೂ ತನ್ನೆಡೆಗೆ ಸದಾ ಸೆಳೆಯುತ್ತಿರುತ್ತಾನೆ." ಆದರೆ ಸಂಪೂರ್ಣ ಜ್ಞಾನವಾದಾಗ, ಎಲ್ಲ ಅನುಭವಗಳನ್ನೂ ನಾನು ಸ್ವೀಕರಿಸುತ್ತೇನೆ, ನನಗೆ ಗೊತ್ತು ಎಲ್ಲ ಸಿದ್ಧಾಂತಗಳೂ ಸತ್ಯವಾಗಿವೆ, ಎಲ್ಲ ಅಭಿಪ್ರಾಯಗಳೂ ಉಪಯುಕ್ತವಾಗಿವೆ, ಎಲ್ಲ ಅನುಭವಗಳು ಮತ್ತು ಮನಃ ಸ್ಥಿತಿಗಳು ವಿಶ್ವಾತ್ಮಕ ಅನುಭವ ಮತ್ತು ಪೂರ್ಣತೆಯನ್ನು ಪಡೆಯಲು ಸಾಧನಗಳಾಗಿವೆ, ಹಂತಗಳಾಗಿವೆ. ಎಲ್ಲ ಗುರುಗಳು ಅಪರಿಪೂರ್ಣ ಮಾಧ್ಯಮ ಅಥವಾ ಏಕಮೇವಾದ್ವಿತೀಯನಾದ ಭಗವಂತನ ಅವತಾರಗಳೇ, ಮತ್ತು ಎಲ್ಲರೂ ಶಿಕ್ಷಕರೇ, ಎಲ್ಲ ಇಷ್ಟ ದೇವತೆಗಳು, ಅವತಾರಗಳು ಕೂಡ ಸಾಕ್ಷಾತ್ ಆ ಭಗವಂತನೇ ...

ನಮ್ಮೆಲ್ಲ ಬಂಧನಗಳನ್ನು ತೊಡೆದು ಹಾಕಬೇಕು, ಸ್ವಾತಂತ್ರ್ಯದ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು, ನಮ್ಮ ಬೇಡಿಗಳನ್ನು, ಸಂಕೋಲೆಗಳನ್ನು ತುಂಡರಿಸಬೇಕು – ಇದು ನಮ್ಮ ಭವಿಷ್ಯದ ಪ್ರಥಮ ಅವಶ್ಯಕತೆ. ರಾಮಕೃಷ್ಣರು ಮುಕ್ತಿಯನ್ನು ನೀಡಲೆಂದು ಬಂದರೇ ಹೊರತು ಹೊಸ ಬಂಧನವನ್ನು ಹೇರಲು ಬರಲಿಲ್ಲ. ಅಂತೆಯೇ ಅದ್ವೈತದ ದೇವದೂತನಾಗಿ, ಪ್ರಚಾರಕನಾಗಿ ಬಂದ ವಿವೇಕಾನಂದ ಸರ್ವಥಾ ಸ್ವಾತಂತ್ರ್ಯವನ್ನೇ ಪ್ರತಿಪಾದಿಸಿದರು. ಹಿಂದೂ ಧರ್ಮವು ಅಯೋಗ್ಯ ಚೌಕಟ್ಟಿನೊಳಗೆ ಸೊರಗಿ ಹೋಗುತ್ತಲಿದೆ, ಆದರೆ ಚೌಕಟ್ಟನ್ನು ಒಡೆದು ಹಾಕಿ ಹೋಗುತ್ತಲಿದೆ, ಅಂದರೆ ಅದರ ಆತ್ಮ ಬಾಳುತ್ತದೆ. ದೇಹಾತ್ಮಕ ಬುದ್ಧಿಯನ್ನು ನಾಶಮಾಡಲು, ಆತ್ಮವನ್ನು ನಶ್ವರವಾದ ದೇಹದ ಜೊತೆ ಗುರುತಿಸುವ ಕುರುಡುತನವನ್ನು ಹೊಡೆದು ಹಾಕಲು ಯೋಗವು ಮೊದಲ ಪಾಠದಲ್ಲೇ ಕಲಿಸುವುದಲ್ಲವೇ? ಶರೀರವು ತರುಣವಾಗಿದ್ದರೆ, ಗಟ್ಟಿಯಾಗಿದ್ದರೆ, ಹೊಂದಾಣಿಕೆ ಮಾಡಿಕೊಳ್ಳಬಲ್ಲದಾಗಿದ್ದರೆ, ಮುಕ್ತವಾದ ಆತ್ಮವು ಅದನ್ನು ಉಪಯೋಗಿಸಿಕೊಳ್ಳಬಲ್ಲದು. ಆದರೆ ಅದೀಗ ಜರಾಗ್ರಸ್ತವಾಗಿದೆ, ವ್ಯಾಧಿಗ್ರಸ್ತವಾಗಿದೆ, ಆಶುದ್ಧವಾಗಿದೆ. ಅದನ್ನೀಗ ಬದಲಾಯಿಸಲೇ ಬೇಕಾಗಿದೆ. ಅಂದರೆ ಪಾಶ್ಚಾತ್ಯರ



ಮೂರ್ತಿಭಂಜಕ ರೀತಿಯಂತಲ್ಲ, ಅದು ಶರೀರದ ಜೊತೆಗೆ ಅದರ ಆತ್ಮವನ್ನೂ ನಾಶಮಾಡುತ್ತದೆ, ಬದಲಾಗಿ ರಾಷ್ಟ್ರೀಯ ಯೋಗವನ್ನಾಗಿ ಮಾಡಬೇಕಾಗಿದೆ.

**CWSA 1: 551-53**

*

## ಸನಾತನ ಧರ್ಮದ ಬಗೆಗಿನ ಅಜ್ಞಾನ ಮತ್ತು ತಪ್ಪು ತಿಳುವಳಿಕೆ

ಧರ್ಮ ಗ್ರಂಥಗಳನ್ನು ಅಧ್ಯಯನ ಮಾಡದೇ, ಅವುಗಳನ್ನರಿಯದೇ ಕೇವಲ ಗೌರವಿಸುವುದು ಮತ್ತು ಸಂಪ್ರದಾಯಗಳನ್ನು ಪಾಲಿಸುವುದು; ಎಲ್ಲ ಬ್ರಾಹ್ಮಣರನ್ನೂ ಗೌರವಿಸುವುದು, ಅವರು ಪೂಜ್ಯರಾಗಿದ್ದರೂ ಸರಿಯೇ ತಿರಸ್ಕರಣೀಯರಾಗಿದ್ದರೂ ಸರಿಯೇ; ಸಾಮಾಜಿಕವಾಗಿ ಕೆಳವರ್ಗದ ಜನರು ಬೇಯಿಸಿದ ಅಡುಗೆಯನ್ನು ಉಣ್ಣದಿರುವುದು; ಯೌವನಾವಸ್ಥೆಗೆ ತಲುಪುವ ಮೊದಲೇ ಕನ್ಯೆಯನ್ನು ಲಗ್ನವಾಗುವುದು ಹಾಗೂ ಯೌವನಾವಸ್ಥೆಗೆ ಬರುತ್ತಲೇ ಮಗನಿಗೆ – ಹುಡುಗನಿಗೆ ಲಗ್ನ ಮಾಡಿಬಿಡುವುದು; ಹೆಣ್ಣು ಮಕ್ಕಳನ್ನು ಅನಕ್ಷರರನ್ನಾಗಿ, ಅಜ್ಞಾನಿಗಳನ್ನಾಗಿ ಮಾಡುವುದು ಹಾಗೂ ಮನೆಗೆಲಸಕ್ಕಾಗಿ ಮಾತ್ರ ಬಳಸುವುದು ಅಥವಾ ಉಪಯೋಗಿಸಿಕೊಳ್ಳುವುದು; ಮೇಲಿಂದ ಮೇಲೆ ಸ್ನಾನ ಮಾಡುತ್ತ ದೇವರಿಗೆ ಅರ್ಘ್ಯ ಕೊಡುತ್ತಲೇ ಇರುವುದು; ನೆಲದ ಮೇಲೆ ಕುಳಿತೇ ಊಟ ಮಾಡುವುದು, ಟೇಬಲ್ಲಿನ ಮೇಲೆ ಊಟ ಮಾಡದಿರುವುದು; ಅರ್ಥ, ಗೊತ್ತು, ಗುರಿ ತಿಳಿಯದೇ ದಿನಕ್ಕೆ ಎರಡು ಸಲ ತಪ್ಪದೇ ದೇವರ ಪೂಜೆ ಮಾಡುವುದು; ದೈನಂದಿನ ಆಚರಣೆಯಲ್ಲಿ ಅರ್ಥವಿಲ್ಲದ ಏನೇನೋ ಕಂದಾಚಾರಗಳನ್ನು ಮಾಡುತ್ತ ಹೋಗುವುದು; ವಿಗ್ರಹವೊಂದನ್ನು ತಂದು ಪ್ರತಿಷ್ಠಾಪನೆ ಮಾಡಿ ಆನಂತರ ನೀರಲ್ಲಿ ಬೀಸಾಕಿ ಬಿಡುವುದು ಮತ್ತು ಆ ದಿನಗಳಲ್ಲಿ ರಜೆ ಆಚರಿಸುವುದು, – ಇದನ್ನೇ ಭಾರತದಲ್ಲಿ ಧರ್ಮದ ಕನಿಷ್ಠ ಆಚರಣೆ ಎಂದು ತಿಳಿಯಲಾಗುತ್ತದೆ. ಇದನ್ನೇ ಹಿಂದೂ ಧರ್ಮ ಎಂದು, ಸನಾತನ ಧರ್ಮ ಎಂದು ವೈಭವೀಕರಿಸಲಾಗುವುದು. ಇದರ ಜೊತೆಗೆ, ಆ ವ್ಯಕ್ತಿಗೆ ಭಾವನಾತ್ಮಕ ಅಥವಾ ಅತಿ ಧಾರ್ಮಿಕ ನಿಷ್ಠೆ ಇದ್ದರೆ ಮುಗಿಯಿತು, ಅವನೇ ಭಕ್ತ; ವೇದ–ಉಪನಿಷತ್ತು–ದರ್ಶನಗಳು, ಪುರಾಣಗಳು ಇವುಗಳ ಬಗ್ಗೆ ನಿರರ್ಗಳವಾಗಿ ಮಾತನಾಡಲು ಬರುತ್ತಿದ್ದರೆ ಅವನೇ ಜ್ಞಾನಿ; ಕಾವಿ ಬಟ್ಟೆ ಧರಿಸಿದರೆ ಆಯಿತು ಅವನು ಏನೂ ಮಾಡದಿದ್ದರೂ ಸಂನ್ಯಾಸಿಯೇ, ತ್ಯಾಗಿಯೇ. ಬೇರೆ ಏನೂ ಮಾಡದಿದ್ದರೂ ಅಡ್ಡಿಯಿಲ್ಲ, ಅವನಿಗೆ ಧರ್ಮದ ಕಟ್ಟಳೆಗಳಿಲ್ಲ, ಅವನು ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದರೆ ಆಯಿತು.

ಏನೇ ಮಾಡಲಿ, ಎಲ್ಲವನ್ನೂ ಪದ್ಧತಿಯ ಪ್ರಕಾರ, ಬ್ರಾಹ್ಮಣ ಪದ್ಧತಿಯ ಪ್ರಕಾರ ಮಾಡಬೇಕು. ಭಾರತದ ಸಾಮಾನ್ಯ ಧರ್ಮದ ಪ್ರಕಾರ ಅತಿ ಶ್ರೇಷ್ಠವಾದು–ದೇನೆಂದರೆ ನಿಜವಾದ ಭಕ್ತನಿಗೆ ಎಲ್ಲ ರೀತಿಯ ಗೌರವವನ್ನು, ಸನ್ಮಾನವನ್ನು ನೀಡುವುದು, ಸನ್ಯಾಸಿಯು ಅತಿ ವಿಚಿತ್ರ ವೇಷಧಾರಿಯಾಗಿ ಅಥವಾ ಕ್ರಾಂತಿಕಾರಿ ರೂಪದಲ್ಲಿ ಬರದೇ ಹೋದರೆ ಅತ್ಯಂತ ಗೌರವ ನೀಡುವುದು. ಯುರೋಪ ಜನರು ಅಂಥವನನ್ನು ಢೋಂಗಿ ಎಂದೂ, ವೃತ್ತಿಪರ ಧಾರ್ಮಿಕನೆಂದೂ, ಸೋಮಾರಿ ಮೈಗಳ್ಳನೆಂದೂ, ಅಥವಾ ಧಾರ್ಮಿಕ ಹುಚ್ಚನೆಂದೂ ತಳ್ಳಿ ಹಾಕುತ್ತಾರೆ.

**CWSA 1: 492-93**

*

**ವಿಚಾರ ಅಥವಾ ವೈಚಾರಿಕ ಮನಸ್ಸಿನ ಅವಶ್ಯಕತೆ**

ಪರಿವರ್ತನೆಯ ಕಾಲದಲ್ಲಿ ವಿಚಾರದ ಅವಶ್ಯಕತೆ ಅತ್ಯಂತ ತೀವ್ರವಾಗಿರುತ್ತದೆ. ಕ್ರಾಂತಿ ಕಾಲವು ಎರಡು ತೆರನಾದ ಮನಸ್ಸನ್ನು ಸೃಷ್ಟಿಸುತ್ತದೆ – ಅವಿಚಾರಿ, ಇಲ್ಲಿ ತಿಳುವಳಿಕೆ, ಜ್ಞಾನ ಇರುವುದಿಲ್ಲ, ಮತ್ತು ಉದ್ದೇಶ ಕೂಡ ಇರುವುದಿಲ್ಲ. ಮನಸ್ಸು ಹಳೆಯದಕ್ಕೇ ಗಟ್ಟಿಯಾಗಿ ಅಂಟಿಕೊಳ್ಳಲು ಕಾರಣವೇನೆಂದರೆ ಅದು ಹಳೆಯದು ಎಂಬುದೇ, ಹಾಗೆಯೇ ಹೊಸದನ್ನು ಕೂಡ ಮನಸ್ಸು ಬೆನ್ನು ಹತ್ತುತ್ತದೆ ಏಕೆಂದರೆ ಹೊಸದು ಎಂಬ ಏಕೈಕ ಕಾರಣಕ್ಕೆ. ಇವೆರಡರ ನಡುವೆ ಸ್ವಯಂಘೋಷಿತ ಸಮಚಿತ್ತದ ವ್ಯಕ್ತಿ ಬಂದು ಹೇಳುತ್ತಾನೆ, "ಕೆಲವೊಂದು ಹಳೆಯ ಅಂಶ ಇರಲಿ, ಕೆಲವೊಂದು ಹೊಸ ಅಂಶಗಳೂ ಇರಲಿ, ಎರಡನ್ನೂ ಸೇರಿಸೋಣ". ಈ ವ್ಯಕ್ತಿ ಕೂಡ ಅತಿರೇಕದ ಮನುಷ್ಯರಿಗಿಂತ ತುಸು ಅವಿಚಾರಿಯೇ. ಸಮತೆ ಅಥವಾ ಸಮಾನತೆ ಎನ್ನುವ ಸೂತ್ರ ಹಿಡಿದುಕೊಂಡು ಕಾಡು ಜನರಂತೆ ಸರ್ವದೇವ ಪೂಜಾ ಪದ್ಧತಿಯನ್ನು ಹೇಳುತ್ತ ಅಸಾಧ್ಯವಾದ ಮರುಏಕೀಕರಣದ ಬೆನ್ನು ಹತ್ತಲೆಳಸುತ್ತಾನೆ. ಈ ತೆರನಾದ ವಿಚಾರ ಧಾರೆಯನ್ನು ಹಿಡಿದುಕೊಂಡೇ ಏಸುಕ್ರಿಸ್ತನು "ನೀವು ಹಳೆಯ ಮದ್ಯ ಪಾತ್ರೆಯಲ್ಲಿ ಹೊಸದನ್ನು ಹಾಕಲಾರಿರಿ" ಎಂದು ಹೇಳಿದನು. ವಿಚಾರವು ಎಂದಿಗೂ ಒಂದು ಸೂತ್ರವನ್ನು ನಿರ್ಮಿಸುವುದಿಲ್ಲ, ಪೂರ್ವ ನಿರ್ಣಯ ಮಾಡುವುದಿಲ್ಲ. ಅದು ಎಲ್ಲವನ್ನೂ ಪ್ರಶ್ನಿಸುತ್ತದೆ, ಎಲ್ಲವನ್ನೂ ತೂಗಿ ನೋಡುತ್ತದೆ. "ನಿಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳಿ, ಸಂಬುದ್ಧ ಯುರೋಪದನ್ವಯ ನಿಮ್ಮ ರೂಢಿಗಳನ್ನು ಮಾರ್ಪಡಿಸಿಕೊಳ್ಳಿ" ಎಂದು ಯಾರಾದರೂ ಹೇಳಿದರೆ, ವಿಚಾರವು ಹೀಗೆ ಉತ್ತರ



ನೀಡುತ್ತದೆ "ನೋಡೋಣ, ಮೊದಲು ಯುರೋಪನ್ನು ಸಂಬುದ್ಧ ಎಂದು ನಾನೇಕೆ ಭಾವಿಸಲಿ? ಭಾರತ ಅಸಂಸ್ಕೃತವೆಂದೇಕೆ ಗ್ರಹಿಸಲಿ? ಯುರೋಪ ಜನರೇ ನಿಜವಾಗಿ ಅಸಂಸ್ಕೃತರಾಗಿದ್ದು ಭಾರತದ ಜ್ಞಾನವೇ ನಿಜವಾದ ಸಂಬುದ್ಧತೆಯಾಗಿರುವ ಸಾಧ್ಯತೆ ಇದೆ. ಇದನ್ನು ಕುರಿತು ವಿಚಾರ ಮಾಡೋಣ." ಹಾಗೆಯೇ ಬೇರೊಬ್ಬರು "ಭಾರತೀಯನಾಗಿರು, ಭಾರತೀಯರಂತೆ ವರ್ತಿಸು" ಎಂದು ಹೇಳಿದರೂ ಕೂಡ ವಿಚಾರವು ಉತ್ತರಿಸುತ್ತದೆ, "ಭಾರತೀಯನಾಗಿರ–ಬೇಕಾದರೆ ಭಾರತೀಯರಂತೆಯೇ ನಡೆಯಬೇಕೆಂದು ನಾನು ಸಂಪೂರ್ಣವಾಗಿ ನಂಬುವುದಿಲ್ಲ. ಈ ದೇಶದ ಸದ್ಯದ ವರ್ತಮಾನದ ಜನರು, ಭಾರತೀಯರು ತಾವು ಹೇಗಿರಬಾರದೆಂದು ಬಯಸಿದ್ದರೋ ಹಾಗೆ ಇರುವ ಸಾಧ್ಯತೆಯೂ ಇದೆ. ನಮ್ಮ ನಾಗರೀಕತೆಯ ವಿವಿಧ ಹಂತಗಳಲ್ಲಿ ಭಾರತೀಯರು ನಿಜವಾಗಿ ಹೇಗಿದ್ದರು ಎಂಬುದನ್ನು ನಾನು ಕಂಡುಕೊಳ್ಳಬೇಕು, ಈ ನಾಗರೀಕತೆಯಲ್ಲಿ ಯಾವುದು ಶಾಶ್ವತವಾದುದು, ಯಾವುದು ತಾತ್ಕಾಲಿಕವಾದುದು ಎಂಬುದನ್ನು ಮೊದಲು ಗುರುತಿಸಬೇಕು. ನಾವು ಯಾವುದನ್ನು ಕಳೆದುಕೊಂಡಿದ್ದೇವೆಯೋ ಅಂಥ ನಿಜವಾದ ಭಾರತೀಯ ಅಂಶಗಳನ್ನು ಯುರೋಪಿನವರು ಪಡೆದಿರುವ ಸಾಧ್ಯತೆಯೂ ಇದೆ; ಭಾರತೀಯನಾಗಿರುವುದು ಒಳ್ಳೆಯದೇ, ಆದರೆ ಜ್ಞಾನಕ್ಕಾಗಿ ಮಾತ್ರ ಹೊರತು ಪೂರ್ವಾಗ್ರಹಕ್ಕಾಗಿ ಅಲ್ಲ.

**CWSA 1: 499-500**

*

**ಜ್ಞಾನ**

ಭಾರತದ ಜ್ಞಾನ ಪದ್ಧತಿಯಲ್ಲಿ ನಾಲ್ಕು ಬಗೆಯ ಪ್ರಕ್ರಿಯೆ ಅಥವಾ ಕಾರ್ಯಾಚರಣೆಗಳಿವೆ. ಮೊದಲನೆಯದಾಗಿ, ತನ್ನ ಉತ್ಸಾಹ, ಭಾವೋತ್ಕಟತೆ, ಭಾವಾವೇಶ, ಪೂರ್ವನಿರ್ಣಯ, ಹಳೆಯ ಸಂಸ್ಕಾರಗಳು ಹಾಗೂ ಸಹವಾಸ ಎಲ್ಲವನ್ನೂ ಶಾಂತಗೊಳಿಸುವುದರ ಮೂಲಕ ಜಿಜ್ಞಾಸುವು ತನ್ನ ಬುದ್ಧಿಯನ್ನು ಪರಿಶುದ್ಧಗೊಳಿಸುತ್ತಾನೆ. ಎರಡನೆಯದಾಗಿ, ತನಗೆ ಲಭಿಸಿದ ಜ್ಞಾನವನ್ನು ಎಲ್ಲವನ್ನೂ ಪ್ರಶ್ನಿಸಬಲ್ಲ ವಿಚಾರದ ಕಠಿಣ ಪರೀಕ್ಷೆಗೆ ಒಡ್ಡಿ, ಅಭಿಪ್ರಾಯಗಳನ್ನು ಸಿದ್ಧ ಸತ್ಯದಿಂದ ಹಾಗೂ ಕೇವಲ ನಿರ್ಣಯವನ್ನು ವಾಸ್ತವ ಸಂಗತಿಗಳಿಂದ ಬೇರ್ಪಡಿಸುತ್ತಾನೆ. ವಾಸ್ತವ ಸಂಗತಿಗಳನ್ನು ಕೂಡ ಅವನು ಕೇವಲ ತಾತ್ಕಾಲಿಕ ಸತ್ಯಗಳೆಂದು ಪರಿಗಣಿಸುತ್ತಾನೆ ಹಾಗೂ ತನ್ನೆಲ್ಲ ಜ್ಞಾನವನ್ನು ತಪ್ಪೆಂದೂ, ತಪ್ಪು ಗ್ರಹಿಕೆ ಎಂದೂ, ಅರೆ ಸತ್ಯವೆಂದೂ ಒಪ್ಪಿಕೊಳ್ಳಲೂ ಸಹ ಸಿದ್ಧನಾಗಿರುತ್ತಾನೆ.

ಮೂರನೆಯದಾಗಿ, ಉಪಲಬ್ಧಿಗಾಗಿ ಅಂದರೆ ತನ್ನ ವೈಯಕ್ತಿಕ ಅನುಭವಕ್ಕಾಗಿ ಅದನ್ನು ಪ್ರಯೋಗ ಮಾಡುತ್ತಾನೆ. ನಾಲ್ಕನೆಯದಾಗಿ, ಪುನಃ ವಿಚಾರ–ವಿಮರ್ಶೆ ಮಾಡಿಕೊಳ್ಳುತ್ತಾನೆ, ತನ್ನ ಅನುಭವ ತನ್ನನ್ನು ಎಲ್ಲಿಯವರೆಗೆ ನಿಜವಾಗಿ ಕರೆದೊಯ್ಯುವುದು ಹಾಗೂ ಅದರ ಒರಗಲ್ಲಿನ ಮೇಲೆ ತಾನು ಅದನ್ನು ಸಮರ್ಥಿಸಬಲ್ಲೆನೇ ಅಥವಾ ಇಲ್ಲವೇ ಎಂಬುದನ್ನು ಮರು ವಿಮರ್ಶೆಗೊಳ–ಪಡಿಸುತ್ತಾನೆ. ಕೊನೆಯದಾಗಿ, ಈ ವಿಷಯದ ಮೇಲೆ ವಿಶುದ್ಧ ಬುದ್ಧಿಯ ಬೆಳಕು ಚೆಲ್ಲುತ್ತಾನೆ ಹಾಗೂ ಅಂತಃಪ್ರೇರಣೆಯ ಸಾರಾಸಾರ ವಿವೇಚನೆಯ ಮೂಲಕ ಜ್ಞಾನವನ್ನು ಗ್ರಹಿಸುತ್ತಾನೆ. ವಿವೇಕದ ತೀರ್ಮಾನವನ್ನು ಅವನು ಶಂಕಿಸುವುದಿಲ್ಲ, ಪ್ರಶ್ನಿಸುವುದಿಲ್ಲ, ಏಕೆಂದರೆ ಅದನ್ನು ಅನುಭವದ ಮೂಲಕ ಗ್ರಹಿಸುತ್ತಾನೆ ಮತ್ತು ಅದು ಸೂಕ್ಷ್ಮವಾದ ಮತ್ತು ಕರಾರು ವಾಕ್ಕಾಗಿರುವ ಉಪಕರಣವೆಂದು ಅವನಿಗೆ ಗೊತ್ತಿದೆ. ಆದರೆ ಇಷ್ಟೇ, ವಿಚಾರವನ್ನೇ ವಿವೇಕವೆಂದು ಗ್ರಹಿಸಬಾರದೆಂದು ಸಾಕಷ್ಟು ಎಚ್ಚರಿಕೆ ವಹಿಸುತ್ತಾನೆ ಹಾಗೂ ತನ್ನ ತೀರ್ಮಾನವನ್ನು ಸರಿದೂಗಿಸಲು, ಹೆಚ್ಚು ಬಲಿಷ್ಠಗೊಳಿಸಲು ಸದಾ ಸಿದ್ಧನಿರುತ್ತಾನೆ. ತಾನಿದುವರೆಗೆ ಗಮನಹರಿಸಿರದ ಹೊಸ ಹೊಸ ಸತ್ಯಗಳನ್ನು ಒಪ್ಪಿಕೊಳ್ಳಲು ಹಾಗೂ ತನಗೆ ಪರಿಚಿತವಾಗಿದ್ದ ಸತ್ಯವೊಂದೇ ಸತ್ಯವಲ್ಲ, ಅದಕ್ಕೆ ಇನ್ನೊಂದು ಬದಿಯೂ ಇದೆ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧನಿರುತ್ತಾನೆ. ಯುರೋಪಿನ ಹಳೆಯ ವಿಜ್ಞಾನಿಗಳಂತೆ ಕೇವಲ ಪುರಾತನ ಸಿದ್ಧಾಂತಗಳಿಗೇ ಅಂಟಿಕೊಂಡಿರುವುದಿಲ್ಲ ಹಾಗೂ ವಿಜ್ಞಾನದ ಹೊಸ ಹೊಸ ಬೆಳವಣಿಗೆಯನ್ನು, ಅದರ ವಿಸ್ತಾರವನ್ನು ಕೇವಲ ಕಪಟ, ಮೋಸ, ವಂಚನೆ ಎಂದು ಸಾರಾಸಗಟಾಗಿ ತಳ್ಳಿ ಹಾಕುವುದಿಲ್ಲ.

**CWSA 1: 501-02**

*

**ವಿಧಿ, ವಿಧಾನಗಳು, ಸಮಾರಂಭಗಳು, ಧರ್ಮಾಚರಣೆಯ ಶಿಸ್ತು ಮತ್ತು ಪೂಜಾ ಪದ್ಧತಿ**

ಹಿಂದೂ ಧರ್ಮದ ವಿಧಿ – ವಿಧಾನಗಳನ್ನು, ಉತ್ಸವ – ಸಮಾರಂಭಗಳನ್ನು, ಧರ್ಮಾಚರಣೆ ಮತ್ತು ಪೂಜಾ ಪದ್ಧತಿಗಳನ್ನು ತಿಳಿದುಕೊಳ್ಳಬೇಕಾದರೆ ಅದರ ಮೂಲಭೂತ ಗುಣಧರ್ಮವನ್ನು ಸ್ಮರಿಸಿಕೊಳ್ಳಬೇಕು. ಎಲ್ಲಕ್ಕಿಂತ ಮೊದಲು ಅದು ಸ್ವಮತಾಗ್ರಹಿ, ಹಠಮಾರಿ ಧರ್ಮವಲ್ಲ, ಅದು ಎಲ್ಲವನ್ನೂ ಆಲಂಗಿಸಿಕೊಳ್ಳಬಲ್ಲ ಧರ್ಮ ಎಂಬುದನ್ನು ಮರೆಯಬಾರದು. ಅದರ ಈ ಎಲ್ಲವನ್ನೂ ತನ್ನೊಳಗೆ



ಸೇರಿಸಿಕೊಳ್ಳುವ ಗುಣವನ್ನು ಒಪ್ಪಿದ್ದೇ ಆದರೆ ಇಸ್ಲಾಂ ಹಾಗೂ ಕ್ರಿಶ್ಚಿಯನ್ ಧರ್ಮಗಳೂ ಸಹ ಅದರಲ್ಲಿ ಸಮರಸವಾಗಿ ಸೇರಿಕೊಳ್ಳಬಲ್ಲವು. ತನ್ನ ದಾರಿಯಲ್ಲದು ಯಾವ ಧರ್ಮವನ್ನು ಭೇಟಿಯಾದರೂ ಸರಿಯೇ ತನ್ನೊಳಗೆ ಸೇರಿಸಿಕೊಳ್ಳಬಲ್ಲ ಸ್ವಭಾವ ಅದಕ್ಕಿದೆ. ಬೇರೆ ಬೇರೆ ಧರ್ಮದ ಆಚಾರ–ವಿಚಾರಗಳು ಭಿನ್ನ ಭಿನ್ನವಾಗಿದ್ದರೂ ಅಡ್ಡಿಯಿಲ್ಲ, ಮೂಲತಃ ಅವು ಆಧ್ಯಾತ್ಮಿಕ ಜಗತ್ತಿನ ಹಾಗೂ ಅನಂತ ಸತ್ಯದ ಜೊತೆಗೆ ಮೌಲಿಕ ಸಂಬಂಧವನ್ನಿರಿಸಿ–ಕೊಂಡಿದ್ದರೆ ಸಾಕು ಅವೆಲ್ಲವನ್ನೂ ತನ್ನೊಳಗೆ ಸಮಾಹಿತಗೊಳಿಸಿಕೊಳ್ಳುತ್ತದೆ. ಒಂದು ಧರ್ಮವು ಕೇವಲ ಸಾಧು–ಸತ್ಪುರಷರಿಗೆ, ವಿಚಾರವಂತರಿಗೆ ಮಾತ್ರ ಅಲ್ಲ, ಸಾಮಾನ್ಯ ಜನರಿಗೆ ಕೂಡ ಸತ್ಯವೆಂದು ತೋರಬೇಕಾದರೆ ನಮ್ಮ ಸತ್ತೆಯ ಎಲ್ಲ ಭಾಗಗಳಿಗೆ – ತರ್ಕಬದ್ಧ ಹಾಗೂ ತರ್ಕಾತೀತ ಭಾಗಗಳಿಗೆ ಕೂಡ ಇಷ್ಟವಾಗಬೇಕೆಂಬ ಸತ್ಯವನ್ನು ಅದು ಹೃದಯಾಂತರಾಳದಿಂದ ಬಲ್ಲದು. ಕಲ್ಪನೆ, ಊಹೆ, ಭಾವನೆಗಳು, ಸೌಂದರ್ಯ ಪ್ರಜ್ಞೆ ಅಷ್ಟೇ ಏಕೆ ಅರೆ ಸುಪ್ತ ಪ್ರಜ್ಞೆಯ ಭಾಗದ ಪ್ರವೃತ್ತಿಗಳು ಕೂಡ ಅದರ ಪ್ರಭಾವದಲ್ಲಿ ಬರಬೇಕಾಗುತ್ತದೆ. ಧರ್ಮವು ವ್ಯಕ್ತಿಯನ್ನು ತರ್ಕಾತೀತವಾದ ಆಧ್ಯಾತ್ಮಿಕ ಸತ್ಯದೆಡೆಗೆ ಕರೆದೊಯ್ಯಬೇಕಾದರೆ ಅದು ಸಂಬುದ್ಧ ತರ್ಕದ ಸಹಾಯ ಪಡೆಯಲೇಬೇಕು, ಆದರೆ ಯಾವ ಕಾಲಕ್ಕೂ ಅದು ನಮ್ಮ ವ್ಯಕ್ತಿತ್ವದ ಎಲ್ಲ ಸಂಕೀರ್ಣ ಭಾಗಗಳು ಸಹ ಪರಮಾತ್ಮನೆಡೆಗೆ ಹಾತೊರೆಯುತ್ತವೆ ಎಂಬುದನ್ನು ನಿರ್ಲಕ್ಷಿಸಬಾರದು. ಅದು ಪ್ರತಿಯೊಬ್ಬನನ್ನೂ ಒಳಗೊಳ್ಳಬೇಕು; ಯಾರನ್ನೂ ಬಲವಂತ ಮಾಡದೇ, ಅದು ತಿಳಿಯದಂತಿರುವ, ಆದರೆ ಸತ್ಯವಾದ ಹಾಗೂ ಜೀವಂತ ಶಕ್ತಿ ಎಂಬುದು ಅರ್ಥವಾಗುವವರೆಗೆ ಬಲವಂತವಾಗಿ ಹೇರದೇ, ಅವನ ಭಾವನೆ ಅನಿಸಿಕೆಗಳನ್ನು ಆಧ್ಯಾತ್ಮೀಕರಣ–ಗೊಳಿಸಬೇಕು. ಇದು ನಿಜವಾಗಿ ಹಿಂದೂ ಧರ್ಮದ ಅರ್ಥ ಮತ್ತು ಗುರಿ; ಆದರೆ ಇಂದು ಈ ಸಂಗತಿಯನ್ನೇ ಅತಾರ್ಕಿಕ ಅಥವಾ ತರ್ಕವಿರೋಧಿ ಎಂದು ಬಿಂಬಿಸುತ್ತ ಕಳಂಕಹೊರಿಸುವ ಪ್ರಯತ್ನ ನಡೆದಿದೆ.

**CWSA 20: 147-148**

*

**ಹಿಂದೂ ಸಂಸ್ಕೃತಿ ಮತ್ತು ನಾಗರೀಕತೆ**

ನೈತಿಕತೆ ಎಂಬುದು ಪಾಶ್ಚಾತ್ಯ ಮನಸ್ಸಿಗೆ ಕೇವಲ ಬಾಹ್ಯ ಆಚರಣೆಗೆ ಸಂಬಂಧಿಸಿದ ಸಂಗತಿ ಎಂದೇ ತೋರುತ್ತದೆ; ಆದರೆ ಆಚರಣೆ ಎಂಬುದು

ಭಾರತೀಯ ಮನಸ್ಸಿಗೆ ಆತ್ಮ–ಸ್ಥಿತಿಯನ್ನು ಅಭಿವ್ಯಕ್ತಗೊಳಿಸುವ ಸಾಧನ ಹಾಗೂ ಅದರ ಲಕ್ಷಣವಾಗಿದೆ. ಹಿಂದೂ ಧರ್ಮವು ಕೇವಲ ಪ್ರಾಸಂಗಿಕವಾಗಿ ಕೆಲ ವಿಧಿ–ವಿಧಾನಗಳನ್ನು ತನ್ನೊಳಗೆ ಸೇರಿಸಿಕೊಂಡಿದೆ, ಕೆಲ ನೈತಿಕ ನಿಯಮಾವಳಿಗಳು ಗೌಣವಾಗಿ ಅದರೊಳಗೆ ಸೇರಿಕೊಂಡಿವೆ. ಆದರೆ ಆಳವಾಗಿ ಅದು ಮನಸ್ಸಿನ ಆಧ್ಯಾತ್ಮಿಕ ಅಥವಾ ನೈಷ್ಠಿಕ ಪಾವಿತ್ರ್ಯವನ್ನು ಕರ್ಮದ ಜೊತೆಗೆ, ಕೆಲಸದ ಜೊತೆಗೆ ಬಾಹ್ಯ ಲಕ್ಷಣವೆಂಬಂತೆ, ಸೇರಿಸುತ್ತದೆ. “ಕೊಲೆ ಮಾಡಬಾರದು” ಎಂದು ಅದು ಹೇಳುತ್ತದೆ, ಹೆಚ್ಚು ಬಲವಾಗಿಯೇ ಪ್ರತಿಪಾದಿಸುತ್ತದೆ. ಆದರೆ ಅದರ ಜೊತೆಗೆ ಹೆಚ್ಚು ಒತ್ತುಕೊಟ್ಟು ಹೇಳುವುದೇನೆಂದರೆ “ನೀನು ದ್ವೇಷ ಮಾಡಬೇಡ, ದುರಾಶೆಗೆ ಬಲಿಬೀಳಬೇಡ, ದುಷ್ಟತನಕ್ಕೆ ಬಲಿಬೀಳಬೇಡ” ಎಂದು, ಏಕೆಂದರೆ ಇವೇ ನಿಜವಾಗಿ ಕೊಲ್ಲುವಿಕೆಯ ಮೂಲ ಕಾರಣ. ಹಿಂದೂ ಧರ್ಮವು ಯಾವಾಗಲೂ ಸಾಪೇಕ್ಷ ಮಾಪಕವನ್ನೇ ಒಪ್ಪುತ್ತದೆ, ಈ ಗುಣವೇ ಪಾಶ್ಚಾತ್ಯ ಬುದ್ಧಿಗೆ ಅರ್ಥವಾಗುವುದು ತುಸು ಕಠಿಣವಾಗಿದೆ. ಅಹಿಂಸೆಯು ಎಲ್ಲಕ್ಕಿಂತ ದೊಡ್ಡದಾದ ಧರ್ಮ – ಅಹಿಂಸಾ ಪರಮೋ ಧರ್ಮಃ – ಆದರೆ ಹಾಗೆಂದು ಅದನ್ನು ಒಬ್ಬ ಯೋಧನಿಗೆ ಭೌತಿಕವಾಗಿ ಪಾಲಿಸಲೇಬೇಕೆಂದ ನಿಯಮ ಎಂದು ವಿಧಿಸುವುದಿಲ್ಲ, ಬದಲಾಗಿ ಅವನಿಂದ ದಯೆ, ಔದಾರ್ಯ, ಯುದ್ಧ ಮಾಡದಿರುವವನ ಜೊತೆ ಗೌರವ, ದುರ್ಬಲ, ಅಶಸ್ತ್ರಧಾರಿ, ಸೋತವನು, ಸೆರೆಯಾಳು, ಗಾಯಾಳು, ಪಲಾಯನಮಾಡುವವ, ಮುಂತಾದವರ ಮೇಲೆ ಕರುಣೆ ತೋರಲು ಹೇಳುತ್ತದೆ. ಹೀಗೆ ಅದು ಜೀವನದಲ್ಲಿ ತೀರ ಮಡಿವಂತಿಕೆಯ ನಿಯಮದಿಂದುಂಟಾಗುವ ಅವ್ಯಾವಹಾರಿಕತೆಯನ್ನು ತಪ್ಪಿಸುತ್ತದೆ.

**CWSA 20: 149**

*

## ಭಾರತೀಯ ನಾಗರೀಕತೆಯ ಆಧ್ಯಾತ್ಮಿಕ ಗುರಿ

ಭಾರತದ ಮತ್ತು ಯುರೋಪಿನ ಸಂಸ್ಕೃತಿಗಳ ನಡುವೆ ಇರುವ ಮಹತ್ತರವಾದ ವ್ಯತ್ಯಾಸದ ಮೂಲ ಇರುವುದು ಭಾರತದ ನಾಗರೀಕತೆಯ ಗುರಿಯಾದ ಆಧ್ಯಾತ್ಮಿಕತೆಯಲ್ಲಿಯೇ ಅದರ ಎಲ್ಲ ಪ್ರಕಾರಗಳಲ್ಲಿಯೂ – ಅದರ ಸಮೃದ್ಧ ಹಾಗೂ ವೈಭವೋಪೇತ ಪ್ರಕಾರಗಳಲ್ಲಿಯೂ ಸಹ ಈ ಉದ್ದೇಶ ಮುದ್ರೆಯೊತ್ತಿರುವುದು ಅದರ ಅನನ್ಯ ಗುಣಧರ್ಮದ ದ್ಯೋತಕವಾಗಿದೆ. ಏಕೆಂದರೆ ಇತರ ಧರ್ಮಗಳ ಜೊತೆ ಅದು ಕೆಲ ಸಾಮಾನ್ಯ ಸಂಗತಿಗಳನ್ನು



ಹಂಚಿಕೊಂಡಾಗಲೂ ಸಹ ಅದರ ಎದ್ದು ಕಾಣುವ ಮೂಲಸ್ವರೂಪ ಹಾಗೂ ಏಕಾಂತಿಕ ಹಿರಿಮೆಯು ಅನನ್ಯವಾಗಿ ತೋರುತ್ತದೆ. ಆಧ್ಯಾತ್ಮಿಕ ಅಭೀಪ್ಸೆಯು ಈ ಧರ್ಮದ ರಾಜಶಕ್ತಿಯಾಗಿತ್ತು, ಅದರ ವಿಚಾರದ ಕೇಂದ್ರವಾಗಿತ್ತು, ಅದನ್ನಾಳುವ ಪ್ರಮುಖ ಭಾವವಾಗಿತ್ತು. ಜೀವನದ ಅತ್ಯುನ್ನತ ಗುರಿ ಅಂದರೆ ಆಧ್ಯಾತ್ಮಿಕತೆ ಮಾತ್ರ ಎಂದು ಸಾಧಿಸದೇ, ಹಿಂದಿನ ಕಾಲದ ಸನ್ನಿವೇಶಗಳಲ್ಲಿ ಕೂಡ ಮಾನವ ಜನಾಂಗದಲ್ಲಿ ಇದನ್ನು ಅನುಷ್ಠಾನಗೊಳಿಸುವ ಪ್ರಯತ್ನವನ್ನು ಕೂಡ ಪ್ರಬಲವಾಗಿಯೇ ಮಾಡಿದ್ದಲ್ಲದೇ ಇಡೀ ಜೀವನವನ್ನು ಆಧ್ಯಾತ್ಮದೆಡೆಗೆ ತಿರುಗಿಸುವ ಪ್ರಯತ್ನವನ್ನೂ ಮಾಡಿತು. ಆದರೆ ಧರ್ಮವೆಂಬುದು ಮಾನವನ ಮನಸ್ಸಿನಲ್ಲಿ ಮೊದಲಿನಿಂದಲೂ ಸಹಜವಾಗಿ ಇದ್ದುದರಿಂದ, ಆಧ್ಯಾತ್ಮಿಕ ತುಡಿತದ ಅಪರಿಪೂರ್ಣ ಅಭಿವ್ಯಕ್ತಿಯ ಆಕಾರವಿದ್ದುದರಿಂದ, ಆಧ್ಯಾತ್ಮಿಕ ಪರಿಕಲ್ಪನೆಯ ಪ್ರಾಮುಖ್ಯತೆ, ಜೀವನವನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳಬೇಕೆಂಬ ಅದರ ಪ್ರಯತ್ನ ಸತತ ಇದ್ದುದರಿಂದ, ಮಾನವನ ಪ್ರತಿಯೊಂದು ವಿಚಾರ ಮತ್ತು ಕೃತಿಯನ್ನು ಧಾರ್ಮಿಕದ ಎರಕದಲ್ಲಿ ಹೊಯ್ಯುವುದು ಅವಶ್ಯವಾಗಿದ್ದಿತು ಮತ್ತು ಜೀವನದಲ್ಲಿ ಧಾರ್ಮಿಕ ಸಂವೇದನೆಯನ್ನು ಪ್ರತಿಯೊಂದು ಸನ್ನಿವೇಶದಲ್ಲಿಯೂ ತುಂಬಿಸಲೇಬೇಕಾಗಿದ್ದುದು ಅವಶ್ಯವಾಗಿತ್ತು. ಅದರಿಂದಾಗಿ ವಿಶಾಲವಾಗಿ ಬೆಳೆಯಬಲ್ಲ ಧಾರ್ಮಿಕ–ತಾತ್ವಿಕ ಸಂಸ್ಕೃತಿಯನ್ನು ಪೋಷಿಸಲೇಬೇಕಾಗಿ ಬಂದಿತು. ಅತ್ಯುನ್ನತ ಆಧ್ಯಾತ್ಮಿಕತೆಯು ಅತಿ ಮುಕ್ತವಾದ, ಮತ್ತು ವಿಶಾಲವಾದ ವಾತಾವರಣದಲ್ಲಿ ಜೀವಿಸುತ್ತದೆ. ಇದು ನಿಮ್ನ ಸ್ತರದಲ್ಲಿನ ಶೋಧನೆಗಿಂತ, ಅಂದರೆ ಧಾರ್ಮಿಕ ಕರ್ಮಠತನದಿಂದ ಬಹು ಎತ್ತರದಲ್ಲಿರುತ್ತದೆ. ಇದು ಸುಲಭವಾಗಿ ನಿರ್ಬಂಧಗಳನ್ನು ಸಹಿಸುವುದಿಲ್ಲ, ಒಂದೊಮ್ಮೆ ಒಪ್ಪಿಕೊಂಡರೂ ಕೂಡ ಅವುಗಳನ್ನು ಮೀರಿ ನಿಲ್ಲುತ್ತದೆ. ಸಾಮಾನ್ಯ ಧಾರ್ಮಿಕ ಮನಸ್ಸಿಗೆ ನಿಲುಕದ ಅನುಭವದಲ್ಲಿ ಅದು ಸ್ಥಿತವಾಗಿರುತ್ತದೆ. ಆದರೆ ಮಾನವನು ಅಂಥ ಉನ್ನತ ಆಂತರಿಕ ಎತ್ತರದವರೆಗೆ ಸುಲಭವಾಗಿ, ಶೀಘ್ರವಾಗಿ ಏರಲಾರನಾದ್ದರಿಂದ, ಅದನ್ನು ಮೇಲಿಂದ ಮೇಲೆ ಒತ್ತಾಯ ಮಾಡುತ್ತ ಹೋದರೆ, ಅವನು ಕೊನೆಯವರೆಗೂ ಆ ಸ್ಥಿತಿಯನ್ನು ಮುಟ್ಟದೇ ಹೋಗಬಹುದು. ಮೊದಮೊದಲು ಅವನಿಗೆ ಕೆಳಗಿನಿಂದ ಸಹಾಯ ಬೇಕು, ಆರೋಹಣದ ಹಂತಗಳು ಬೇಕು. ಅವನಿಗೆ ಆರಂಭದಲ್ಲಿ ಮತದಲ್ಲಿ ವಿಶ್ವಾಸಬೇಕು, ಆರಾಧನಾ ಭಾವ ಬೇಕು, ಮೂರ್ತಿ ಅಥವಾ ವಿಗ್ರಹ ಬೇಕು, ಒಂದು ಆಕಾರ, ಸಂಕೇತ ಏನಾದರೊಂದು ಬೇಕು, ಅವನ ಸಮ್ಮಿಶ್ರ ಅರೆ–ಸಹಜ ಉದ್ದೇಶದ ಒಪ್ಪಿಗೆ ಮತ್ತು ಲಾಲನೆ ಬೇಕು, ಅದರ ಮೇಲೆ ಸ್ಥಿತನಾಗಿ ಅವನು

ನಿಂತುಕೊಂಡು, ತನ್ನೊಳಗೆ ಆತ್ಮದ ನಿವಾಸದ ಆವಾಸ ಸ್ಥಾನವನ್ನು ನಿರ್ಮಾಣ ಮಾಡುತ್ತಾನೆ, ಆತ್ಮದ ದೇಗುಲ ಪೂರ್ತಿಗೊಂಡ ಮೇಲೆ, ಅದರ ಆಧಾರಗಳನ್ನು ತೆಗೆದು ಹಾಕಬಹುದು, ಆಗ ಮೊದಲಿನ ಹಂದರ ಮಾಯವಾಗುವುದು. ನಾವು ಯಾವುದನ್ನು ಹಿಂದೂ ಧರ್ಮ ಎಂದು ಗುರುತಿಸುತ್ತೇವೆಯೋ, ಆ ಧರ್ಮವು ಈ ಎಲ್ಲ ಉದ್ದೇಶಗಳನ್ನು ಪೂರ್ಣಗೊಳಿಸುತ್ತದೆ, ಅನ್ಯ ಸ್ವಮತಾಗ್ರಹಿ ಧರ್ಮಗಳಂತಲ್ಲದೇ, ತನ್ನ ಉದ್ದೇಶವನ್ನು ಅರ್ಥಮಾಡಿಕೊಳ್ಳುತ್ತದೆ. ತನಗದು ಯಾವ ಹೆಸರನ್ನೂ ಕೊಟ್ಟುಕೊಳ್ಳಲಿಲ್ಲ, ಏಕೆಂದರೆ ತನಗೆ ಅದು ಯಾವ ಮತಪಂಥದ ಸೀಮೆಯನ್ನೂ ಹಾಕಿಕೊಂಡಿಲ್ಲ; ಅದು ಯಾವುದಕ್ಕೂ ಅಂಟಿಕೊಂಡಿಲ್ಲ, ಅದು ಯಾವ ಅಂಧಾಭಿಮಾನಕ್ಕೂ ಬಲಿಬಿದ್ದಿಲ್ಲ. ಯಾವ ಸಂಕುಚಿತ ಮಾರ್ಗವನ್ನೂ ಬೋಧಿಸುವುದಿಲ್ಲ ಅಥವಾ ಮುಕ್ತಿಯ ದಾರಿಯನ್ನು ಕೂಡ ಒಂದೇ ನಿಶ್ಚಿತ ಸಂಕುಚಿತ ಮಾರ್ಗಕ್ಕೆ ಕಟ್ಟಿ ಹಾಕಲಿಲ್ಲ. ಒಂದು ಜಾತಿ, ಪಂಥ, ಮತಗಳಿಗಿಂತ ಹೆಚ್ಚಾಗಿ ಅದು ಮಾನವನ ಪ್ರಯತ್ನವು ಭಗವಂತನೆಡೆಗೆ ಸಾಗುವುದನ್ನು ಹೆಚ್ಚು ಹೆಚ್ಚಾಗಿ ನಿರಂತರ ಬೆಳೆಸುವ ಒಂದು ಸಂಪ್ರದಾಯವಾಗಿದೆ. ಅಪಾರವಾದ, ಅನೇಕ ಪ್ರಕಾರದ ಅನೇಕ ಹಂತಗಳುಳ್ಳ ಆತ್ಮಸಂಶೋಧನೆ ಹಾಗೂ ವ್ಯಕ್ತಿತ್ವ ನಿರ್ಮಾಣಕ್ಕೆ ಅವಕಾಶ ನೀಡುತ್ತ, ತಾನೊಂದು ಸನಾತನ ಧರ್ಮ, ಶಾಶ್ವತ ಧರ್ಮ ಎಂದು ಹೇಳಬಲ್ಲ ಹಕ್ಕನ್ನು ಅದು ಪಡೆದುಕೊಂಡಿತು. ನಾವಿದನ್ನು ಸರಿಯಾಗಿ ತಿಳಿದುಕೊಂಡರೆ ಹಾಗೂ ಭಾರತೀಯ ಧರ್ಮದ ಅರ್ಥ ಹಾಗೂ ಸತ್ವವನ್ನು ಸರಿಯಾಗಿ ಗ್ರಹಿಸಿದ್ದೇ ಆದರೆ, ನಮಗೆ ಭಾರತೀಯ ಸಂಸ್ಕೃತಿಯ ನಿಜವಾದ ಅರ್ಥ ಹಾಗೂ ಸತ್ವದ ಅರಿವಾಗುವುದು.

**CWSA 20: 178-79** **-ಶ್ರೀ ಅರವಿಂದರು**

*

## ಸನಾತನ ಧರ್ಮ ಮತ್ತು ಧರ್ಮ ಗ್ರಂಥಗಳು

### ಭಗವಂತನ ವಿಶ್ವವ್ಯಾಪಿ ಗುಣ

ಉಪನಿಷತ್ತುಗಳು ತಮ್ಮ ದರ್ಶನದ ಅನಿವಾರ್ಯ ಅಥವಾ ಅತ್ಯಂತ ಅವಶ್ಯಕವಾದ ಆಧಾರವೆಂದರೆ ಭಗವಂತನ ವಿಶ್ವವ್ಯಾಪಿ ಗುಣ ಎಂದು ಸಾರಿ ಹೇಳುತ್ತವೆ. ಬ್ರಹ್ಮನ, ಶಾಶ್ವತನಾದ ಪರಮಾತ್ಮನ ಈ ವಿಶ್ವವ್ಯಾಪಕತ್ವವು ವೇದಾಂತದ ಅತ್ಯಂತ ಆರಂಭದ ಹಾಗೂ ಅಂತಿಮ ತತ್ವವಾಗಿದ್ದು, ಇದನ್ನು



ಒಪ್ಪಿಕೊಳ್ಳದೇ ಹೋದರೆ, ವೇದಾಂತವು ಹೇಳುವ ಯಾವ ತತ್ವಕ್ಕೂ ಮೌಲ್ಯವೇ ಉಳಿಯುವುದಿಲ್ಲ; ಅದರ ಎಲ್ಲ ಸಿದ್ಧಾಂತಗಳು ಮೂಲತಃ ಈ ತತ್ವದ ಮೂಲಕವೇ ಆರಂಭವಾಗುತ್ತವೆ, ಇದನ್ನು ಪೂರ್ವ ಗ್ರಹಿತ ಸತ್ಯವೆಂದು ಮಾನ್ಯ ಮಾಡಿಯೇ ಮುಂದುವರಿಯುತ್ತವೆ. ಈ ಅತಿಮುಖ್ಯ ಹಾಗೂ ಅತ್ಯುನ್ನತ ಸತ್ಯವನ್ನು ತೆಗೆದು ಹಾಕಿದರೆ ಉಪನಿಷತ್ತುಗಳು, ಮ್ಲೇಚ್ಛ ಪಂಡಿತರು ಮತ್ತು ತತ್ವಜ್ಞಾನಿಗಳು ಹೇಳುವಂತೆ – ಕೆಲವೆಡೆ ಉದಾತ್ತ ಪರಿಕಲ್ಪನೆಗಳಿದ್ದರೂ ಎಲ್ಲವೂ ಕೇವಲ ಅಸಂಬದ್ಧ ಪ್ರಲಾಪಗಳಾಗಿ ಬಿಡುತ್ತವೆ. ಈ ಸತ್ಯವನ್ನು ಕೈದೀವಿಗೆಯಾಗಿ ಹಿಡಿದುಕೊಂಡು ಮುಂದುವರಿದರೆ ಗ್ರಂಥಗಳ ಎಲ್ಲ ಅಸ್ಪಷ್ಟ ವಾಕ್ಯಗಳೂ ಸ್ಪಷ್ಟವಾಗುವುವು, ಉಪನಿಷತ್ತುಗಳು ಅತ್ಯುನ್ನತ ಸಾಮರಸ್ಯ ಹಾಗೂ ಪ್ರಕಾಶವನ್ನು ಸಾದರಪಡಿಸುವ, ಏಕೈಕ ವಿಶ್ವಂಭರ ಸತ್ಯವನ್ನು ತನ್ನೆಲ್ಲ ಬದಿಗಳಲ್ಲೂ ಪ್ರಸ್ತುತಪಡಿಸುವ ಗ್ರಂಥಗಳೆಂಬುದು ನಿಮಗೆ ಮನದಟ್ಟಾಗುವುದು – ಏಕೆಂದರೆ, ಈ ಪ್ರಪಂಚದ ಕೋಟ್ಯಾನುಕೋಟಿ ವೈರುಧ್ಯಗಳ ಹಿಂದೆ ಕೇವಲ ಒಂದೇ ಆದ ಪರಮಸತ್ಯವಿದೆ. ಎಲ್ಲ ಸ್ಮೃತಿ–ಪುರಾಣ–ದರ್ಶನ–ಧರ್ಮಶಾಸ್ತ್ರಗಳು, ಶಾಕ್ತರ, ಶೈವರ ವೈಷ್ಣವರ, ಸೌರರ – ಹಾಗೂ ಬೌದ್ಧ ಧರ್ಮದ ಎಲ್ಲ ಗ್ರಂಥಗಳೂ ಸಹ ಅನನ್ಯವೂ ಏಕೈಕವೂ ಆ ಪರಮ ಸತ್ಯದ ಅನೇಕ ಮುಖಗಳ ವ್ಯಾಖ್ಯಾನಗಳೋ, ಭಾಷ್ಯಗಳೋ, ಅರ್ಥಾನುಸಂಧಾನಗಳೋ, ಬೇರೆ ಬೇರೆ ರೀತಿಯಿಂದ ವಿವರಿಸುವ ಉಪನ್ಯಾಸಗಳೋ ಆಗಿವೆ. ಆ ಒಂದು ಪರಮ ಸತ್ಯದ ಮೇಲೆ ಎಲ್ಲ ಧರ್ಮಗಳೂ ಸಹ ಅಲುಗಾಡದ ಬಂಡೆಗಲ್ಲಿನ ಮೇಲೆ ನಿಂತಂತೆ, ಭದ್ರವಾಗಿ ಬೇರೂರಿ ನಿಲ್ಲಬಲ್ಲವು. ಬಂಡೆಗಲ್ಲಿಗಿಂತ ಅಧಿಕ, ಏಕೆಂದರೆ ಬಂಡೆಗಲ್ಲು ಎಂದಾರೊಮ್ಮೆ ನಾಶವಾಗಬಹುದು, ಆದರೆ ಈ ಆಧಾರ ಮಾತ್ರ ಎಂದಿಗೂ ಇರುವಂಥದು. ಅಂತೆಯೇ ಆರ್ಯರ ಈ ಧರ್ಮವನ್ನು ಸನಾತನ ಧರ್ಮ, ಶಾಶ್ವತ ಧರ್ಮ ಎಂದು ಕರೆಯಲಾಗುವುದು. ಶ್ರುತಿಗಳು ಶಾಶ್ವತವೆಂದೂ, ಅನಾದಿ ಎಂದೂ, ಸೂಕ್ತಗಳನ್ನು ಮಂತ್ರಗಳನ್ನೂ ರಚಿಸಿದ ಋಷಿಗಳು ಕೇವಲ ಸಾಕ್ಷಿಗಳಿದ್ದಂತೆ, ಅವರು ಸತ್ಯವನ್ನು ಕಂಡರು ಹಾಗೂ ತಾವು ಕಂಡ ಸತ್ಯವನ್ನು ಮಾನವನ ಭಾಷೆಯಲ್ಲಿ ಅಳವಡಿಸಿದರು ಮಾತ್ರ ಎಂದು ಹಿಂದೂಗಳು ಹೇಳುವುದು ಸರ್ವಥಾ ತಪ್ಪಲ್ಲ, ಅದು ಸರ್ವತೋ ಸತ್ಯ; ಏಕೆಂದರೆ ಈ ಕಾಣ್ಕೆಯು ಮಾನಸಿಕ ಕಾಣ್ಕೆಯಲ್ಲ, ಅದು ಆಧ್ಯಾತ್ಮಿಕವಾದುದು. ಆದ್ದರಿಂದಲೇ ವೇದಗಳನ್ನು ಶ್ರುತಿಗಳೆಂದೂ, ದರ್ಶನಗಳೆಂದೂ ಸರಿಯಾಗಿಯೇ ಹೇಳಲಾಗಿದೆ. ಇವುಗಳ ಪೈಕಿ

ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದಗಳು ಸಮೃದ್ಧ ಮಳೆ ಇದ್ದಂತೆ, ಸತ್ಯದ ಗಿಡವು ಇವುಗಳ ಮೂಲಕವೇ ಪುಷ್ಟಿ ಹೊಂದಿ ವರ್ಧಿತವಾಗಿದೆ, ಬ್ರಾಹ್ಮಣಗಳೇ ಅರಣ್ಯ ಇದ್ದಂತೆ. ಇದರಲ್ಲಿಯೇ ಈ ಗಿಡ ದೊರಕುತ್ತದೆ. ಆರಣ್ಯಕಗಳು ಸಮೃದ್ಧ ನೆಲವಿದ್ದಂತೆ ಇದರಲ್ಲಿಯೇ ಈ ಗಿಡ ಬೆಳೆಯುತ್ತದೆ, ಉಪನಿಷತ್ತುಗಳೇ ಗಿಡವಿದ್ದಂತೆ – ಬೇರು, ಕಾಂಡ, ಶಾಖೆಗಳು, ಎಲೆಗಳು, ಹೂಗಳು, ಪಕಳೆ ಎಲ್ಲವೂ ಅರಳಿ ಒಂದು ಸಲ ಹಾಗೂ ಸದಾಕಾಲ ನಳನಳಿಸುವುದೆಂದರೆ “ಸೋಽಹಂ” – ನಾನೇ ಆತನು ಎಂದು ಸದಾ ಉಸಿರುತ್ತಿರುವಂತೆ. ಇದೇ ಉಪನಿಷತ್ತುಗಳ ಪರಾಕಾಷ್ಠೆಯಾಗಿದೆ. ಸೋಽಹಂಗೆ ಪ್ರಣಿಪಾತಗಳು, ದೇಶ ಕಾಲ, ಕಾರಣ ಅಥವಾ ಸೀಮೆಗಳಿಗೆ ಅತೀತನಾಗಿರುವ ಆ ಶಾಶ್ವತನಿಗೆ ಪ್ರಣಿಪಾತಗಳು, ಶಾಶ್ವತವಾಗಿರುವ ನನ್ನ ಆತ್ಮಕ್ಕೆ ನಮಿಸುತ್ತೇನೆ.

**CWSA 17: 101-102**

*

**ವೇದ ಮತ್ತು ವೇದಾಂತ**

ವೇದಾಂತಕ್ಕಿಂತ ವೇದಗಳು ಈ ಜ್ಞಾನವನ್ನು ಹೆಚ್ಚಾಗಿ ಹೊಂದಿರುವುದಲ್ಲದೇ, ಹೆಚ್ಚು ವಿಶಾಲವಾಗಿ, ಧಾರಾಳವಾಗಿ, ವ್ಯಾವಹಾರಿಕವಾಗಿ ಹಾಗೂ ಹೆಚ್ಚು ವಿವರಗಳೊಂದಿಗೆ ಅವುಗಳನ್ನು ಭರಿಸಿವೆ. ಆದರೆ ಅವು ಇರುವುದು ನಾವು ಅರ್ಥಮಾಡಿಕೊಳ್ಳುವುದನ್ನೇ ನಿಲ್ಲಿಸಿದ ಭಾಷೆಯಲ್ಲಿ, ಅದರ ಶಬ್ದಕೋಶವು, ಪುರಾತನ ಶಬ್ದಗಳ ಬಳಕೆ ನಿಂತು ಹೋಗಿರುವುದರಿಂದ ಬದಲಾದ ಬೇರೆ ಅರ್ಥಗಳನ್ನೇ ನೀಡುವುದರಿಂದ, ತುಂಬ ಸರಳ ಸುಲಭ ಎನಿಸುವ ಕಡೆಗಳಲ್ಲಿ ಅನೇಕ ಸಲ ತಪ್ಪು ದಾರಿಗೆಳೆಯುತ್ತದೆ, ಅವುಗಳ ಸಾಂಕೇತಿಕ ಗೂಢಾರ್ಥದ ವ್ಯವಸ್ಥೆಯ ಬೀಗದ ಕೈ ನಮಗೀಗ ಸಿಕ್ಕದಂತಾಗಿದೆ. ಭಾರತೀಯರಿಗೆ ಈಗ ವೇದಗಳು ತಿಳಿಯದಂತಾಗಿ ಹೋಗಿವೆ. ಯುರೋಪಿಯನ್‌ರು ಒಂದು ಸುವ್ಯವಸ್ಥಿತವಾದ ತುಂಬ ಒರಟಾದ ಅಪಾರ್ಥವನ್ನು ಪ್ರಚುರಪಡಿಸುತ್ತಿದ್ದಾರೆ. ವೇದಗಳಲ್ಲಿರುವ ಜ್ಞಾನವು ನಮ್ಮ ಮಟ್ಟಿಗೆ ಹೇಗಾಗಿ ಹೋಗಿದೆ ಅಂದರೆ ಸಮೃದ್ಧವಾದ ನದಿಯೊಂದು ಕತ್ತಲ ಗುಹೆಗಳಲ್ಲಿ ಹರಿಯುತ್ತ ಸಾಮಾನ್ಯ ಜನರಿಗೆ ಉಪಯೋಗಕ್ಕೆ ಬಾರದಂತಾಗಿ ಹೋಗಿದೆ. ಉಪನಿಷತ್ತುಗಳ ರೂಪದಲ್ಲಿ ಅದು ಮೊದಲ ಬಾರಿಗೆ ಬಯಲಲ್ಲಿ ಬಂದಂತಾಗಿದೆ. ಅಂತೆಯೇ ನಮಗದು ಸುಲಭವಾಗಿ ಸಿಕ್ಕುವಂತಾಗಿದೆ. ಆದರೆ ಈ ಪ್ರವಾಹ ಕೂಡ ಅಸ್ಪಷ್ಟ ಕಾಡಿನಲ್ಲಿ ಹಾಗೂ ಕಠಿಣ ಪರ್ವತಗಳ ನಡುವೆ ಹರಿಯುತ್ತದೆ; ಎಲ್ಲಿ ಈ ಕಾಡು ತುಸು ಬಯಲಾಗುತ್ತದೋ, ಪರ್ವತಗಳು ತುಸು ಅಂತರ ಬಿಡುವವೋ ಅಲ್ಲಿ ಮಾತ್ರ ನಮಗೆ ಅದನ್ನು ಉಪಯೋಗಿಸಲು ಸಾಧ್ಯವಾಗುತ್ತದೆ. ಅಂಥಲ್ಲಿ ಮಾತ್ರ ಜನರು ಅಧಿಭೌತಿಕ ಸಿದ್ಧಾಂತ ಮತ್ತು ಆಧ್ಯಾತ್ಮಿಕ ಪ್ರಯೋಗದ ಸಣ್ಣ ಸಣ್ಣ ಕೃತಕ ನಗರಗಳನ್ನು ಕಟ್ಟಿಕೊಂಡು, ಅಲ್ಲಿಂದ ತಾವು ಇಡೀ ನದಿಯನ್ನೇ ನಿಯಂತ್ರಿಸುತ್ತಿದ್ದೇವೆ ಎಂಬಂತೆ ನಟಿಸುತ್ತಾರೆ. ತಾವಿರುವ ತಾಣವನ್ನು ವೇದಾಂತವೆಂದೋ, ಸಾಂಖ್ಯವೆಂದೋ, ಅದ್ವೈತವೆಂದೋ, ದ್ವೈತವೆಂದೋ, ಶೈವ ಅಥವಾ ವೈಷ್ಣವ ಎಂದೋ ಮುಂತಾದ ನೂರಾರು ಹೆಸರುಗಳಿಂದ ಗುರುತಿಸುತ್ತ, ತಮ್ಮದೇ ಏಕೈಕ ದಾರಿ, ತಮ್ಮದೇ ಪರಮ ಜ್ಞಾನ ಎಂದು ಕೊಚ್ಚಿಕೊಳ್ಳುತ್ತಾರೆ. ಆದರೆ ನಿಜವಾಗಿ, ನಾವು ಆ ಸನಾತನ ಧರ್ಮದ ಒಂದರೆ ಭಾಗವನ್ನು ಮಾತ್ರ ಕಾಣಬಲ್ಲೆವು, ಏಕೆಂದರೆ ನಾವು ಯಾರೂ ಉಪನಿಷತ್ತುಗಳಲ್ಲಿನ ತುಸು ಅಂಶಕ್ಕಿಂತ ಹೆಚ್ಚು ಅರಿಯಲಾರೆವು.



**CWSA 17: 361-62**

*

**ಗೀತೆ ಮತ್ತು ವೇದಾಂತ**

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ವೇದಾಂತದ ತತ್ವಜ್ಞಾನವನ್ನು ಸಾಂಖ್ಯರ ತತ್ವಜ್ಞಾನದ ಜೊತೆಗೆ ಸಂಯುಕ್ತಗೊಳಿಸಿರುವುದನ್ನು ಕಾಣುತ್ತೇವೆ. ಆಧುನಿಕ ವಿಜ್ಞಾನವು ಮಾನವನಲ್ಲಿ ಆತ್ಮವಿದೆ ಎಂಬುದನ್ನು ಒಪ್ಪುವುದಿಲ್ಲ. ವಿಜ್ಞಾನವು ಕೇವಲ ನಿಸರ್ಗದ ನಿಯಮಗಳನ್ನು ಮಾತ್ರ ಒಪ್ಪುತ್ತದೆ. ಅದು ನಿಸರ್ಗವು ಭೌತಿಕವಾಗಿ ಮತ್ತು ಮಾನವನು ಭೌತಿಕ ನಿಸರ್ಗದ ಉತ್ಪನ್ನವಾಗಿದ್ದಾನೆ ಎಂದು ಮನ್ನಿಸುತ್ತದೆ. ಅದು ಹೇಳುವಂತೆ ಮಾನವನು ನೈಸರ್ಗಿಕ ಶಕ್ತಿಗಳ ಸೃಷ್ಟಿಯಾಗಿದ್ದಾನೆ. ಅವನ ಎಲ್ಲ ಕ್ರಿಯೆಗಳು ನಿಸರ್ಗದ ಬದಲಾಗದ ನಿಯಮಗಳ ಮೂಲಕ ನಡೆಯುತ್ತವೆ. ಸಾಂಖ್ಯರ ಪ್ರಕಾರ, ಮಾನವನಲ್ಲಿ ಆತ್ಮ ಅಥವಾ ಪುರುಷನಿದ್ದಾನೆ, ಆದರೆ ಭೌತಿಕ ದ್ರವ್ಯವಿಲ್ಲ. ಆತ್ಮ ಯಾವ ಕ್ರಿಯೆಯನ್ನೂ ಮಾಡುವುದಿಲ್ಲ, ನಿಶ್ಚಲವಾಗಿರುತ್ತದೆ, ಶಾಂತವಾಗಿರುತ್ತದೆ. ಪ್ರಕೃತಿಯು ಸದಾ ಬದಲಾಗುತ್ತಿರುತ್ತದೆ, ಚಲಿಸುತ್ತಿರುತ್ತದೆ, ಅದರ ಪ್ರಭಾವದಡಿಯಲ್ಲೇ ಎಲ್ಲ ಕಾರ್ಯಗಳು ನಡೆಯುತ್ತವೆ. ಪ್ರಕೃತಿ ಕಾರ್ಯಮಾಡುತ್ತದೆ.

ತಾನು ಪುರುಷನೆಂಬುದನ್ನು ಗುರುತಿಸಿಕೊಳ್ಳುವುದರ ಮೂಲಕ ಮಾತ್ರ ಮಾನವನು ಸ್ವತಂತ್ರ ಅಥವಾ ಮುಕ್ತನಾಗಬಲ್ಲನು. ಶ್ರೀಕೃಷ್ಣನು ಗೀತೆಯಲ್ಲಿ ಸಾಂಖ್ಯರ ಈ ಸಿದ್ಧಾಂತವನ್ನು ವಿವರಿಸುವುದರ ಜೊತೆಗೆ ವೇದಾಂತದ ತತ್ವಶಾಸ್ತ್ರವನ್ನು ವಿವರಿಸುತ್ತಾನೆ. ಅವನು ಹೇಳುವಂತೆ, ಮಾನವನಲ್ಲಿ ಅಮರವಾದ ಆತ್ಮ ಇದೆ, ಹಾಗೆಯೇ ವಿಶ್ವಾತ್ಮಕ ಆತ್ಮ ಕೂಡ ಇದೆ. ಮಾನವನು ಭಗವಂತನ ಒಂದು ಅಂಶ ಮಾತ್ರ, ಅವನು ಶಾಶ್ವತವಾದ, ಅನಂತವಾದ, ಸರ್ವಜ್ಞ ಹಾಗೂ ಸರ್ವಶಕ್ತವಾದುದರ ಒಂದು ಭಾಗ ಮಾತ್ರವಾಗಿದ್ದಾನೆ. ಈ ಶಾಶ್ವತವಾದ ಶಕ್ತಿಯೇ ನಿಜವಾಗಿ ಎಲ್ಲೆಡೆ ಇದೆ, ನಾವು ನೋಡುವ ಎಲ್ಲದರಲ್ಲೂ ಇದೆ, ಕೇಳುವ, ಅನುಭವಿಸುವ ಎಲ್ಲದರಲ್ಲೂ ಇದೆ. ಅದೊಂದೇ ಇರುವುದು. ನಾವು ಅದನ್ನೇ ನೋಡುತ್ತೇವೆ ಹಾಗೂ ಸ್ಪರ್ಶಿಸುತ್ತೇವೆ, ಪರಮೇಶ್ವರನು ಈ ಜಗವನ್ನು ತನ್ನ ಮಾಯೆಯಿಂದ ನಿರ್ಮಿಸಿದ್ದಾನೆ. ನಾವು ಮಾಯೆ ಎಂದು ಕರೆಯುವ ಬೃಹತ್ ಭ್ರಮೆಯ ಪ್ರಭು ಅವನೇ ಆಗಿದ್ದಾನೆ. ಅನನ್ಯನಾಗಿರುವ ತಾನು ಪ್ರಕಟನಾಗಲು ಇದನ್ನು ಸೃಷ್ಟಿ ಮಾಡಿದ್ದಾನೆ. ನಮ್ಮ ಸುತ್ತಲೂ ಇರುವ ಎಲ್ಲ ವಸ್ತುಗಳೂ ತಾತ್ಕಾಲಿಕವಾಗಿವೆ, ನಮ್ಮೊಳಗೆ ಇರುವುದು ಮಾತ್ರ ಎಂದಿಗೂ ಬದಲಾಗುವುದಿಲ್ಲ, ಅದು ಸದಾ ಮುಕ್ತ ಮತ್ತು ಸದಾ ಸಂತುಷ್ಟ. ಮಾನವನು ದುಃಖದಲ್ಲಿರುವುದಾಗಿ ಭಾವಿಸುವುದಾದರೆ, ತನ್ನ ಅಜ್ಞಾನದಲ್ಲಿ ಅವನು ಅಹಂಕಾರದ ಕೈವಶನಾಗಿದ್ದಾನೆ. ತಾನೇ ಎಲ್ಲವೂ ಎಂದು ಅವನು ಭಾವಿಸುತ್ತಾನೆ. ಆದರೆ ಪರಮಾತ್ಮನೇ ಈ ಎಲ್ಲ ಲೀಲೆಯ ಪ್ರಭು ಎಂಬುದನ್ನು ತಿಳಿದುಕೊಳ್ಳುವುದಿಲ್ಲ. ತಾನೇ ಕೆಲಸ ಮಾಡುವುದು, ತಾನೇ ತನ್ನ ಶರೀರದ ಯಜಮಾನ ಎಂದು ಅವನು ತಿಳಿದುಕೊಂಡಿದ್ದಾನೆ ಹಾಗೂ ಅವನು ಹಾಗೆ ಯೋಚಿಸುತ್ತಾನೆಂದೇ ತನ್ನ ಕರ್ಮಗಳಿಂದ ಬಂಧಿತನಾಗಿದ್ದಾನೆ. ಈ ಶಕ್ತಿಗಳು ಅವನನ್ನು ಜನ್ಮದಿಂದ ಜನ್ಮಕ್ಕೆ ಕೊಂಡೊಯ್ಯುತ್ತದೆ. ಅತಿ ದೊಡ್ಡ ಭ್ರಮೆ ಏನೆಂದರೆ ತಾನಿರುವ ಶರೀರವೇ ತಾನು ಎಂದು ಭ್ರಮಿಸಿರುವುದು. ಮುಂದೆ ತನ್ನನ್ನು ಮನಸ್ಸಿನ ಜೊತೆ ಗುರುತಿಸಿಕೊಂಡು, ಆಲೋಚನೆ ಮಾಡುವವ ತಾನೇ, ನೋಡುವ, ಸಂವೇದಿಸುವ ವ್ಯಕ್ತಿ ತಾನೇ ಎಂದು ಭಾವಿಸುತ್ತಾನೆ. ವಾಸ್ತವವಾಗಿ, ಗೀತೆಯು ಹೇಳುವಂತೆ, ಪರಮಾತ್ಮನು ಪ್ರತಿಯೊಂದು ಜೀವಿಯ ಹೃದಯದಲ್ಲಿಯೂ ಇದ್ದಾನೆ.

**CWSA 8: 48-49**

*



**ಪುರಾಣಗಳು ಮತ್ತು ತಂತ್ರಗಳು**

ಪುರಾಣಗಳಲ್ಲಿ ಹಾಗೂ ತಂತ್ರಗಳಲ್ಲಿ ಅತ್ಯುನ್ನತವಾದ ಆಧ್ಯಾತ್ಮಿಕ ಮತ್ತು ತಾತ್ವಿಕ ಸತ್ಯಗಳು ನಿಹಿತವಾಗಿದೆ, ಅವುಗಳನ್ನು ಯಾವ ವಿಧದಲ್ಲೂ ಭಗ್ನಗೊಳಿಸದೇ, ಪರಸ್ಪರ ವಿರುದ್ಧವೆಂಬಂತೆ ಚಿತ್ರಿಸುತ್ತ, ಚಿಂತಕರ ವಾದ ವಿವಾದ, ಚರ್ಚೆ ಎಂಬಂತೆ ಬಿಂಬಿಸಲಾಗಿದೆ. ಅವೆಲ್ಲವನ್ನೂ ಸಮೀಕರಿಸಲಾಗಿದೆ, ಸಮನ್ವಯಗೊಳಿಸಲಾಗಿದೆ, ಭಾರತೀಯ ಮನಸ್ಸು ಮತ್ತು ಆತ್ಮಗಳಿಗೆ ವೈಶಾಲ್ಯಕ್ಕೆ ತಕ್ಕಂತೆ ಒಂದೆಡೆ ಸಮಾಹಿತಗೊಳಿಸಲಾಗಿದೆ. ಇದನ್ನು ಕೆಲಸಲ ರಾಜಾರೋಷವಾಗಿ ಮತ್ತು ಹೆಚ್ಚಾಗಿ ಅತಿ ಪ್ರಖ್ಯಾತ ಕಲ್ಪನೆಗಳ ಮೂಲಕ, ದಂತಕಥೆಗಳ ಮೂಲಕ, ಕಥೆ–ಉಪಕಥೆ–ಸಂಕೇತ–ನೀತಿಕಥೆ–ಪವಾಡ–ವ್ಯಾಖ್ಯಾನಗಳ ಮೂಲಕ ಹೇಳಲಾಗಿದೆ. ಅಪಾರ ಹಾಗೂ ಸಂಕೀರ್ಣವಾದ ಮನೋ ಆಧ್ಯಾತ್ಮಿಕ ಅನುಭವವು ತಂತ್ರಗಳಲ್ಲಿ ಸಾಕಾರಗೊಂಡಿದೆ ಇದನ್ನೇ ಯೋಗಾಭ್ಯಾಸದ ಪ್ರಕಾರಗಳ ದರ್ಶನ ಹಾಗೂ ವ್ಯವಸ್ಥಿತ ಆಕಾರಗಳು ಬೆಂಬಲಿಸುತ್ತವೆ. ಈ ಅಂಶವು ಪುರಾಣಗಳಲ್ಲಿ ಕೂಡ ದೊರೆಯುವುದು, ಆದರೆ ಅಷ್ಟು ಪ್ರಬಲವಾಗಿ ಅಲ್ಲ, ಸುಲಭವಾಗಿ ತಳ್ಳಿಹಾಕ–ಬಹುದಾದ ರೀತಿಯಲ್ಲಿ ದೊರೆಯುವುವು. ಈ ಪದ್ಧತಿಯು ಕೇವಲ ದೀರ್ಘಕಾಲಿಕ, ವೇದದ ಪ್ರಕಾರಗಳ, ಮಾರ್ಗಗಳ ಪ್ರಕಾರ ತಾತ್ಕಾಲಿಕವಾಗಿ ಬದಲಾಗುವುದು. ಪುರಾಣಗಳು ಭೌತಿಕ ವಿಗ್ರಹಗಳ ಮೂಲಕ, ಅವುಗಳ ಸೇವನೆಯ ಅಂದರೆ ಆರಾಧನೆಯ ಮೂಲಕ ಒಂದು ಸುಸಂಬದ್ಧ ವ್ಯವಸ್ಥೆಯನ್ನೇ ನಿರ್ಮಿಸುತ್ತವೆ. ಅವುಗಳಲ್ಲಿ ಕೂಡ ಒಂದೊಂದು ವೈಶಿಷ್ಟ್ಯ ಇದ್ದೇ ಇದೆ. ಹೀಗೆ, ಗಂಗಾ–ಯಮುನಾ–ಸರಸ್ವತಿ ನದಿಗಳ ತ್ರಿವೇಣಿ ಸಂಗಮದ ಪಾವಿತ್ರ್ಯವು ಆಂತರಿಕ ಪಾವಿತ್ರ್ಯದ ಪ್ರತೀಕವಾಗಿದ್ದು ಯೋಗದ ಮನೋ ದೈಹಿಕ ಪ್ರಕ್ರಿಯೆಯಲ್ಲಿ ಒಂದು ವಿಶಿಷ್ಟ ಅನುಭವವನ್ನು ಸೂಚಿಸುತ್ತದೆ. ಬೇರೆ ವೈಶಿಷ್ಟ್ಯಗಳೂ ಇವೆ, ಈ ರೀತಿಯ ಸಾಂಕೇತಿಕತೆಯಲ್ಲಿ ಮಿತವ್ಯಯ ಸಾಧಿಸುವುದು ಸಾಮಾನ್ಯ ನಿಯಮವಾಗಿರುವಂತೆ, ಅನೇಕ ವೈಶಿಷ್ಟ್ಯಗಳೂ ಇದ್ದೇ ಇವೆ. ಪುರಾಣಗಳ ಅದ್ಭುತ ಭೌಗೋಳಿಕ ವಿವರಣೆಯು, ನಮಗೆ ಗೊತ್ತಿರುವಂತೆ, ಪುರಾಣಗಳೇ ಹೇಳುವ ಪ್ರಕಾರ, ಸಮೃದ್ಧವಾದ ಕಾವ್ಯಮಯ ಚಿತ್ರಣವಾಗಿದ್ದು, ಆಂತರಿಕ ಚೈತ್ಯ ಜಗತ್ತಿನ ಸಾಂಕೇತಿಕ ವಿವರಗಳಾಗಿವೆ. ಎಷ್ಟೋ ಸಲ ಭೌತಿಕ ವಿಶ್ವದ ಸಮಾನವಾಗಿ, ಅದೇ ಶಬ್ದಗಳನ್ನು ಬಳಸಿ ಹೇಳಿರುವ ವಿಶ್ವಸೃಷ್ಟಿಯ ವಿವರಣೆಯು, ವೇದಗಳಲ್ಲಿ ಹೇಳಿದಂತೆ, ಆಧ್ಯಾತ್ಮಿಕ ಮತ್ತು ಮನೋವೈಜ್ಞಾನಿಕ ಅರ್ಥಗಳಾಗಿವೆ, ಆಧಾರಗಳಾಗಿವೆ.

**CWSA 20: 374**

*

## ಇತಿಹಾಸ: ರಾಮಾಯಣ ಮತ್ತು ಮಹಾಭಾರತ

ಇತಿಹಾಸವೆಂದರೆ ಪುರಾತನ, ಐತಿಹಾಸಿಕ ಅಥವಾ ಐತಿಹ್ಯ ಹಾಗೂ ಸಂಪ್ರದಾಯವಾಗಿದ್ದು ಸೃಜನಶೀಲ ಉಪಯೋಗಕ್ಕಾಗಿ ಅದನ್ನು ದಂತಕಥೆ ಎಂದೋ, ಆಧ್ಯಾತ್ಮಿಕ–ಧಾರ್ಮಿಕ–ನೈತಿಕ ಅಥವಾ ಆದರ್ಶದ ಅರ್ಥವುಳ್ಳ ಕಥೆ ಎಂದೂ ಹೇಳಲಾಗುವುದು. ಹೀಗೆ ಅದು ಜನಮಾನಸದ ಸೃಜನಶೀಲತೆಯಾಗಿದೆ. ರಾಮಾಯಣ ಮತ್ತು ಮಹಾಭಾರತಗಳು ಈ ದೃಷ್ಟಿಯಿಂದ ಹಾಗೂ ವಿಶಾಲವಾದ ಅರ್ಥದಲ್ಲಿ ಮತ್ತು ಬಹುದೊಡ್ಡ ಉದ್ದೇಶದ ದೃಷ್ಟಿಯಿಂದ ಇತಿಹಾಸಗಳಾಗಿವೆ. ಇವುಗಳನ್ನು ಬರೆದವರು ಹಾಗೂ ಈ ಹಿರಿದಾದ ಕಾವ್ಯಾತ್ಮಕ ರಚನೆಗೆ ಪ್ರಕ್ಷಿಪ್ತಗಳನ್ನು ಸೇರಿಸಿದವರು ಬೇಕೆಂದೇ ಹಾಗೆ ಮಾಡಲಿಲ್ಲ. ಕೇವಲ ಹಳೆಯ ಕಥೆಯನ್ನು ಇನ್ನಷ್ಟು ಸುಂದರವಾಗಿ ಹಾಗೂ ಉದಾತ್ತವಾದ ರೀತಿಯಲ್ಲಿ ಹೇಳುವ ಇಚ್ಛೆಯಿಂದ ಹಾಗೆ ಮಾಡಲಿಲ್ಲ, ಅಥವಾ ಹಳೆಯ ಕಾವ್ಯವನ್ನು ಹೆಚ್ಚು ಮನತಟ್ಟುವಂತೆ, ಅರ್ಥವಂತಿಕೆಯನ್ನು ತುಂಬುವಂತೆ ಹೇಳಬೇಕೆಂದು ಹಾಗೆ ಮಾಡಲಿಲ್ಲ – ಆದರೆ ಈ ಕಾರ್ಯವನ್ನು ಅತಿ ಯಶಸ್ವಿಯಾಗಿ ಮಾಡಿದ್ದಂತೂ ಸುಳ್ಳಲ್ಲ, ಅವರು ಹಾಗೆ ಮಾಡಿದ್ದು ಅದು ತಮ್ಮ ಕರ್ತವ್ಯ ಎಂಬ ದೃಷ್ಟಿಯಿಂದ, ಜೀವನದ ಕೆತ್ತನೆಕಾರರು, ಶಿಲ್ಪಿಗಳು ಎಂಬ ದೃಷ್ಟಿಯಿಂದ, ಸೃಜನಶೀಲರಾದ ವ್ಯಾಖ್ಯಾನಕಾರರೆಂಬ ದೃಷ್ಟಿಯಿಂದ, ರಾಷ್ಟ್ರೀಯ ಪರಿಕಲ್ಪನೆ ಹಾಗೂ ಧರ್ಮ, ನೈತಿಕತೆ ಹಾಗೂ ಸಂಸ್ಕೃತಿಯ ವಿಶಿಷ್ಟ ಪ್ರಕಾರದ ಸಂಯೋಜಕರು ಎಂಬ ದೃಷ್ಟಿಯಿಂದ ಮಾಡಿದರು. ಈ ಕಾವ್ಯಗಳ ಉದ್ದಕ್ಕೂ ಜೀವನದ ಪರಿಕಲ್ಪನೆಯ ಮೇಲೆ, ಧರ್ಮದ ಹಾಗೂ ಸಮಾಜದ ವಿಶಾಲ ಹಾಗೂ ಮುಖ್ಯ ದೃಷ್ಟಿಕೋನದ ಮೇಲೆ, ಆಳವಾದ ಒತ್ತಡವಿರುವುದು ಕಂಡುಬರುವುದಲ್ಲದೇ, ಒಂದು ನಿರ್ದಿಷ್ಟ ತತ್ವಶಾಸ್ತ್ರದ ವಿಚಾರವು ಈ ಕಾವ್ಯಗಳಲ್ಲಿ ಉದ್ದಕ್ಕೂ ಹರಿಯುತ್ತದೆ ಮತ್ತು ಭಾರತದ ಪುರಾತನ ಸಂಸ್ಕೃತಿಯು ಇಡಿಯಾಗಿ ಅವುಗಳಲ್ಲಿ ಬಲವತ್ತರವಾಗಿ, ಬೌದ್ಧಿಕ ಪರಿಕಲ್ಪನೆಯಾಗಿ ಹಾಗೂ ಜೀವಂತ ಪ್ರದರ್ಶನವಾಗಿ ಬಲಿಷ್ಠವಾಗಿ ತುಂಬಿಕೊಂಡಿದೆ. ಮಹಾಭಾರತವನ್ನು ಪಂಚಮವೇದ ಎಂದು ಕರೆಯುತ್ತಾರೆ, ಈ ಎರಡೂ ಕಾವ್ಯಗಳು ಕೇವಲ ಮಹಾಕಾವ್ಯಗಳಲ್ಲ, ಆದರೆ ಧರ್ಮಶಾಸ್ತ್ರಗಳಾಗಿವೆ; ನೈತಿಕ, ರಾಜನೈತಿಕ, ಸಾಮಾಜಿಕ ಹಾಗೂ ಧಾರ್ಮಿಕ ಬೋಧನೆಯ ಬೃಹದ್ ಗ್ರಂಥಗಳಾಗಿವೆ ಎಂದು ಹೇಳಲಾಗುವುದು. ಜನರ ಜೀವನದ ಮೇಲೆ, ಮನಸ್ಸಿನ ಮೇಲೆ ಅವುಗಳ ಪ್ರಭಾವ ಎಷ್ಟು ಹೆಚ್ಚಾಗಿದೆ ಅಂದರೆ ಅವುಗಳನ್ನು ಭಾರತದ



ಜನರ ಬೈಬಲ್ ಎಂದು ಕರೆಯಲಾಗುವುದು. ಇದೇನೂ ಸರಿಯಾದ ಉಪಮೆ ಅಲ್ಲವೆಂಬುದೇನೋ ನಿಜ. ಏಕೆಂದರೆ ಭಾರತದ ಜನರ ಬೈಬಲ್ಲಿನಲ್ಲಿ ವೇದಗಳಿವೆ, ಉಪನಿಷತ್‌ಗಳಿವೆ, ಪುರಾಣಗಳಿವೆ, ತಂತ್ರಗಳಿವೆ, ಧರ್ಮಶಾಸ್ತ್ರಗಳಿವೆ. ಅಲ್ಲದೇ ಇನ್ನೂ ಅನೇಕ ಇತರ ಪ್ರಾಂತೀಯ ಭಾಷೆಯಲ್ಲಿ ರಚಿತವಾದ ಧಾರ್ಮಿಕ ಕಾವ್ಯಗಳ ದೊಡ್ಡ ಭಂಡಾರವೇ ಇದೆ. ಈ ಮಹಾಕಾವ್ಯಗಳ ರಚನೆಯನ್ನು ಹಿರಿದಾದ ತತ್ವಜ್ಞಾನದ ಮತ್ತು ನೈತಿಕ ಪರಿಕಲ್ಪನೆ ಹಾಗೂ ಸಾಂಸ್ಕೃತಿಕ ಅಭ್ಯಾಸವನ್ನು ಪ್ರಚಲಿತ ಅಥವಾ ಪ್ರಸಿದ್ಧಗೊಳಿಸುವ ಉದ್ದೇಶದಿಂದ ಮಾಡಲಾಗಿದ್ದಿತು – ಮುಖ್ಯವಾಗಿ ಇಂಥ ಮಹಾಕಾವ್ಯಗಳ ಚೌಕಟ್ಟಿನಲ್ಲಿ ಹಾಗೂ ಅವುಗಳ ಕಥೆಯ ಹಿನ್ನೆಲೆಯಲ್ಲಿ ಹಾಗೂ ಅವುಗಳಲ್ಲಿ ಬರುವ ವಿಶಿಷ್ಟ ಪಾತ್ರಗಳು ಜನರಿಗೆ ರಾಷ್ಟ್ರೀಯ ಸ್ಮೃತಿಗಳಾಗಿ, ಪ್ರತಿನಿಧಿಗಳಂತಾಗಿ, ಆತ್ಮದಲ್ಲಿರುವ ಹಾಗೂ ಮನದಲ್ಲಿರುವ ಎಲ್ಲ ಸದ್‌ವೃತ್ತಿಯ ಪ್ರತೀಕಗಳಾಗಿ, ಜೀವಂತ ಪಾತ್ರಗಳಂತಾಗಿ, ಸೃಜನಶೀಲ ಕಲ್ಪನೆಗೆ ನೈಜ ವ್ಯಕ್ತಿಗಳಂತಾಗಿ, ಆದರ್ಶಮನಸ್ಸು, ಸಾಮಾಜಿಕ–ನೈತಿಕ–ರಾಜಕೀಯ ಮತ್ತು ಧಾರ್ಮಿಕ ಸಂಸ್ಕೃತಿಯ ವಿಶಿಷ್ಟ ಪ್ರಕಾಶಮಾನ ಉದಾಹರಣೆಗಳಂತಾಗಿ, ಕಡೆಯವರೆಗೆ ನಿಲ್ಲಿಸುವ ಉದ್ದೇಶದಿಂದ ಅವುಗಳನ್ನು ರಚಿಸಲಾಗಿತ್ತು. ಇವೆಲ್ಲವನ್ನೂ ಒಂದೆಡೆ ತಂದು ಸೇರಿಸಿ, ಕಲಾತ್ಮಕವಾದ ಶಕ್ತಿಯಿಂದ ಹಾಗೂ ಬಹುಸುಂದರವಾದ ಹೇಳುವ ಶೈಲಿಯಲ್ಲಿ ಅರೆಸತ್ಯವಾಗಿದ್ದ, ಅರೆ ಐತಿಹಾಸಿಕವಾಗಿದ್ದ, ಅರ್ಧಮರ್ಧ ಐತಿಹ್ಯವಾಗಿದ್ದ ಕಥೆಯನ್ನು ಸಂಪ್ರದಾಯದ ರೂಪದಲ್ಲಿ ಕೊಡಲಾಯಿತು ಮತ್ತು ಅಲ್ಲಿಂದ ಮುಂದೆ ಅತಿ ಪ್ರಿಯವಾದ, ಆಳವಾದ, ಅತಿ ಜೀವಂತಿಕೆಯಿಂದ ಕೂಡಿದ ಸತ್ಯವಾಗಿ ಹಾಗೂ ಜನರಿಗೆ ಅವರ ಸಂಸ್ಕೃತಿಯ ಭಾಗವಾಗಿ ನೀಡಲಾಯಿತು. ಮಹಾಭಾರತ ಹಾಗೂ ರಾಮಾಯಣಗಳನ್ನು ಈ ರೀತಿ ರಚಿಸಲಾಗಿದೆ. ಮೂಲ ಸಂಸ್ಕೃತದಲ್ಲಿಯೇ ಇರಲಿ, ಅಥವಾ ಪ್ರಾಂತೀಯ ಭಾಷೆಗಳಲ್ಲಿ ಪುನರಪಿ ಹೇಳಿದ್ದಾಗಿರಲಿ, ಕಥಕ್‌ಗಳ ಮೂಲಕ, ಗೀತನಾಟಕಗಳ ಮೂಲಕ, ಪುರಶ್ಚರಣಗಳ ಮೂಲಕ, ವ್ಯಾಖ್ಯಾನಗಳ ಮೂಲಕ ಜನರಿಗೆ ಅವು ತೀರ ಹತ್ತಿರವಾದವು ಹಾಗೂ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಜನರಿಗೆ ತಿಳಿಸುವ ಅಥವಾ ಕಲಿಸುವ ಅತಿ ಜನಾನುರಾಗಿ, ಪ್ರಖ್ಯಾತ ಸಾಧನಗಳಾಗಿ ಉಳಿದುಕೊಂಡವು. ಅವರ ಮನಸ್ಸನ್ನು, ಪ್ರಖ್ಯಾತ ಸಾಧನಗಳಾಗಿ ಉಳಿದುಕೊಂಡವು. ಅವರ ಮನಸ್ಸನ್ನು, ಜೀವನವನ್ನು ತಿದ್ದಿದವು, ಅವರ ಶೀಲ, ನಡತೆ, ದೈವ ಭೀರು ಹಾಗೂ ಧಾರ್ಮಿಕ ಮನಸ್ಸನ್ನು ಅಶಿಕ್ಷಿತರಿಗೆ

ಕೂಡ ತತ್ವಜ್ಞಾನದ ತುಸು ರುಚಿ ಹಚ್ಚಿಸುವ, ನೈತಿಕ ರಾಜಕೀಯ–ಸಾಮಾಜಿಕ ಪರಿಕಲ್ಪನೆ ನೀಡಿ, ಆಸ್ತೇಯ ಭಾವನೆ, ಕಾವ್ಯ, ಕಾಲ್ಪನಿಕ ಕಥೆ ಹಾಗೂ ಶೃಂಗಾರ ಉಪಾಖ್ಯಾನಗಳ ಅಭಿರುಚಿ ಹುಟ್ಟಿಸುವ ಕೆಲಸ ಮಾಡಿದವು. ಸುಸಂಸ್ಕೃತ ಜನರಿಗೆ ಮಾತ್ರ ಮೀಸಲಾಗಿದ್ದ ವೇದ, ಉಪನಿಷತ್ತುಗಳಲ್ಲಿರುವುದನ್ನು, ತತ್ವಶಾಸ್ತ್ರದ ಕೂಟ ಶ್ಲೋಕಗಳಲ್ಲಿ ಕಾಣದಂತೆ ಅಡಗಿದ್ದ, ಧರ್ಮಶಾಸ್ತ್ರ, ಅರ್ಥಶಾಸ್ತ್ರಗಳಲ್ಲಿ ಹೇಳಿದ್ದನ್ನು ಇಲ್ಲಿ ಸೃಜನಶೀಲವಾಗಿ, ಜೀವಂತ–ಪಾತ್ರಗಳ ಮೂಲಕ ತೆರೆದಿಡಲಾಯಿತು, ಅವರಿಗೆ ಗೊತ್ತಿರುವ ಕಥೆ, ದಂತ–ಕಥೆ, ಜೀವನದ ಜೊತೆ ಹಾಸುಹೊಕ್ಕಾದ ಪ್ರಸಂಗಾವಧಾನಗಳ ಮೂಲಕ ಅವು ಎಲ್ಲರಿಗೂ ಹತ್ತಿರವಾದವು. ಕಲ್ಪನೆ, ಬುದ್ಧಿ ಹಾಗೂ ಆತ್ಮಗಳಿಗೆ ಮನಮುಟ್ಟುವ ರೀತಿಯಲ್ಲಿ ಕಾವ್ಯದ ಭಾಷೆಯಲ್ಲಿ ಹೇಳಿ ಎಲ್ಲರೂ ಅರಗಿಸಿಕೊಳ್ಳುವಂತೆ, ಎಲ್ಲರಿಗೆ ಆಪ್ತವಾಗುವಂತೆ, ಆತ್ಮೀಯವಾಗುವಂತೆ ಇವುಗಳ ಮೂಲಕ ಮಾಡಲಾಯಿತು.

**CWSA 20: 345-347** **- ಶ್ರೀ ಅರವಿಂದರು**

*

## ಸನಾತನ ಧರ್ಮ ಮತ್ತು ಯೋಗ

### ಯೋಗದ ತಿರುಳು

ಯೋಗವು ಸಾರಭೂತವಾಗಿ, ಕೇವಲ ಬಾಹ್ಯ ತೋರಿಕೆಯ ಸಂಗತಿಗಳ ಬಗ್ಗೆ ಮಾತ್ರ ಅರಿವಿರುವ ಸಾಮಾನ್ಯ ಪ್ರಜ್ಞೆಯಿಂದ, ಸತ್ಯಗಳನ್ನು ಹಾಗೂ ಏಕೈಕವಾಗಿರುವ ಪರಮ ಸತ್ಯವನ್ನು ಅರಿಯಬಲ್ಲ ಆಳವಾದ ಮತ್ತು ವಿಶಾಲವಾದ ಪ್ರಜ್ಞೆಯವರೆಗೆ ನಾವು ಏರಿ ಹೋಗಬಲ್ಲ ಮಾರ್ಗವಾಗಿದೆ. ನಾವು ಕೇವಲ ಅದನ್ನು ಅರಿತುಕೊಳ್ಳುವುದಿಲ್ಲ, ಬದಲಾಗಿ ಅದರಲ್ಲೇ ಜೀವಿಸಬಲ್ಲೆವು, ಅದರ ಮೂಲಕ ಕೆಲಸ ಮಾಡಬಲ್ಲೆವು, ಕೇವಲ ತೋರಿಕೆಯ ಸಂಗತಿಗಳ ಮೂಲಕ ಹಾಗೂ ಅವುಗಳ ಪ್ರಜ್ಞೆಯಲ್ಲಿ ಮಾತ್ರ ಜೀವಿಸುವ ಬದಲು, ಹಿರಿದಾದ ಪ್ರಜ್ಞೆಗೆ ಅನುಗುಣವಾಗಿ ಜೀವಿಸಬಲ್ಲೆವು. ಯೋಗವು ಒಂದು ದಾರಿ ಇದ್ದಂತೆ – ಅಜ್ಞಾನದಿಂದ ಆತ್ಮಜ್ಞಾನದವರೆಗೆ, ನಮ್ಮ ಬಾಹ್ಯ ಸತ್ತೆಯಿಂದ ನಿಜವಾದ ಸತ್ತೆಯವರೆಗೆ, ಬಾಹ್ಯ, ದೃಶ್ಯಮಾಣ, ಕ್ಷಣಿಕ ಮಾನಸಿಕ ಪ್ರಾಣಿಕ ಮತ್ತು ಶಾರೀರಿಕ ಸತ್ತೆಯಿಂದ ಆಂತರಿಕ ಆಧ್ಯಾತ್ಮಿಕ ಸತ್ತೆಯವರೆಗೆ, ಆಧ್ಯಾತ್ಮಿಕ ಸ್ವಭಾವ ಅಥವಾ ಪ್ರಕೃತಿಯವರೆಗೆ ಅದು ರಹದಾರಿ ಇದ್ದಂತೆ.



ಯೋಗದ ಮೂಲಕ ನಾವು ಈ ಕ್ಷಣ ವಿನಾಶಿಯಾದ ಜೀವಸತ್ತೆಯಿಂದ ನಿಜವಾದ ಮಹಾಮಾನವನವರೆಗೆ, ಪುರುಷನೆಡೆಗೆ ನಡೆದು ಹೋಗುತ್ತೇವೆ, ನಮ್ಮ ತೋರಿಕೆಯ ಬಾಹ್ಯ ಪ್ರಕೃತಿಯ ಪ್ರಜ್ಞೆಯಿಂದ ನಮ್ಮ ಆತ್ಮದವರೆಗೆ, ಅಂತರಂಗದಲ್ಲಿನ ಹಾಗೂ ಅಂತರ್ತಮದಲ್ಲಿರುವ ಪುರುಷನವರೆಗೆ ಹೋಗುತ್ತೇವೆ. ಆ ಅಂತರ್ತಮ ಪುರುಷನೇ ನಿಜವಾಗಿ ನಾವು ಆಗಿದ್ದೇವೆ. ಬಾಹ್ಯದಲ್ಲಿ ಕಾಣುವ ನಮ್ಮ ಬಾಹ್ಯ ಸತ್ತೆಯು ಬದಲಾದರೂ, ಮನಸ್ಸು–ಪ್ರಾಣ–ಶರೀರಗಳು ಬದಲಾದರೂ, ನಮ್ಮ ಬಾಹ್ಯ ವ್ಯಕ್ತಿತ್ವ ಬದಲಾವಣೆ ಹೊಂದಿದರೂ ಕೂಡ ನಮ್ಮ ಆತ್ಮ ಅಥವಾ ನಿಜವಾದ ಸತ್ತೆ ಸದಾ ಒಂದೇ ತೆರನಾಗಿ, ತುಸು ಕೂಡ ಬದಲಾವಣೆ ಹೊಂದದೇ, ಹಾಗೆಯೇ ಇರುತ್ತದೆ, ಅದು ಶಾಶ್ವತವಾಗಿ ಇರುವಂಥದು, ಶಾಶ್ವತವಾದುದು, ಅಮರವಾದುದು, ಶಾಶ್ವತನಾದ ಪರಮ ಪುರುಷನ ಒಂದು ಭಾಗ ಅಥವಾ ಒಂದು ಆವಿರ್ಭಾವ. ಯೋಗದ ಮೂಲಕ ನಾವು ನಮ್ಮ ಬಾಹ್ಯ ದೃಶ್ಯ ಪ್ರಪಂಚದ ಪ್ರಜ್ಞೆ, ನಮ್ಮ ಸುತ್ತಣ ಪರಿಸರ ಅಥವಾ ವಿಶ್ವದ ಪ್ರಜ್ಞೆಗಳಿಂದ ಹಾಗೂ ಆ ಸಾತತ್ಯ ಸತ್ಯದಿಂದ ದೂರಾಗಿ ಅದರ ನಿಜವಾದ ಸತ್ಯದೆಡೆಗೆ ಹೋಗುತ್ತೇವೆ. ಈ ಜಗತ್ತು ವಿಶ್ವ ಸತ್ತೆಯ ಪ್ರಕಟಣೆ, ನಾವು ಏನೆಲ್ಲವನ್ನು ಈ ಜಗದಲ್ಲಿ ನೋಡುತ್ತೇವೆಯೋ, ಕೇಳುತ್ತೇವೆಯೋ ಹಾಗೂ ಅನುಭವಿಸುತ್ತೇವೆಯೋ ಅದೆಲ್ಲವೂ ವಿಶ್ವಾತ್ಮಕ ಪುರುಷನ ವ್ಯಕ್ತರೂಪ ಎಂಬ ಅರಿವು ನಮಗೆ ಆಗುವುದು. ಅದೊಂದೇ ನಿಜವಾದ ಏಕೈಕ ಸತ್ಯ ಎಂಬ ಅರಿವು ನಮಗೆ ಮೂಡುವುದು. ವಿಶ್ವಾತ್ಮಕ ಪ್ರಜ್ಞೆಯೇ ವಿಶ್ವ–ಶಕ್ತಿಯ ರಹಸ್ಯವಾಗಿದ್ದು ಅದೇ ವಿಶ್ವಾತ್ಮ–ವಿಶ್ವಂಭರ ಪರಮ ಪುರುಷ ಎಂಬ ಅರಿವು ನಮಗೆ ಆಗುವುದು.

ಅಂದರೆ ಯೋಗದ ಮೂಲಕ, ನಮ್ಮ ಆತ್ಮ ಅಥವಾ ನಿಜವಾದ ಸತ್ತೆಯು ವಿಶ್ವ – ಆತ್ಮ, ಎಂಬ ಅರಿವು ಮೂಡುವುದು; ನಮ್ಮ ಪ್ರಕೃತಿಯು ವಿಶ್ವ ಪ್ರಕೃತಿಯ ಲೀಲೆಯಾಗಿದೆ; ನಮ್ಮ ಹಾಗೂ ಜಗತ್ತಿನ ನಡುವೆ ಇರುವ ಗೋಡೆಯು ಮಾಯವಾಗ ತೊಡಗುವುದು, ಕೊನೆಗೆ ಸಂಪೂರ್ಣ ನಾಶವಾಗಿ ಬಿಡುವುದು. ನಮ್ಮೊಳಗಿರುವ, ಎಲ್ಲರಲ್ಲೂ ಎಲ್ಲದರಲ್ಲೂ ಇರುವ ಪರಮಾತ್ಮನನ್ನು ಕುರಿತು ನಮಗೆ ನಿಧಾನವಾಗಿ ಅರಿವು ಮೂಡುವುದು.

ಯೋಗದ ಮೂಲಕ ನಮ್ಮ ವೈಯಕ್ತಿಕ ಸತ್ತೆ, ವಿಶ್ವಾತ್ಮಕ ಸತ್ತೆಗಳಿಗಿಂತ ಪರತರವಾಗಿರುವ, ವಿಶ್ವಾತೀತ ಸತ್ತೆಯವರೆಗೆ ನಾವು ಹೋಗುತ್ತೇವೆ. ಈ ವಿಶ್ವಾತೀತ ಸತ್ತೆಯು ಯಾವುದರ ಮೇಲೆಯೂ ಅವಲಂಬಿತವಾಗಿಲ್ಲ, ನಮ್ಮ

ನಮ್ಮ ಅಸ್ತಿತ್ವವು ತತ್‌ಪುರುಷನ ಪ್ರಕಟಣೆಯಾಗಿದೆ, – ವಿಶ್ವ ಕೂಡ ಆ ಪರಮ ಸತ್ ತತ್ ಪುರುಷನ ಪ್ರಕಟಣೆಯೇ ಆಗಿದೆ.

**CWSA 12: 330-31**

*

**ಯೋಗ ಅಂದರೆ ಏನು?**

ಯೋಗ ಅಂದರೆ ಏನು? ಅದೊಂದು ನಿರ್ದಿಷ್ಟವಾದ ಕ್ರಮ ಅಥವಾ ಪದ್ಧತಿ ಅಲ್ಲ – ಯೋಗ ಎಂದೊಡನೆ ನಮ್ಮ ಮನಸ್ಸಿನಲ್ಲಿ ಓರ್ವ ವ್ಯಕ್ತಿ, ಓರ್ವನೇ ಏಕಾಂತದಲ್ಲಿ ಗುಹೆಯಲ್ಲಿ ಕುಳಿತು, ಕೆಲವೊಂದು ನಿರ್ದಿಷ್ಟ ಕ್ರಿಯೆಗಳಲ್ಲಿ ನಿರತನಾಗಿರುವುದರ ಕಲ್ಪನೆ ಬರುತ್ತದೆ. ಆದರೆ ಶ್ರೀಕೃಷ್ಣನು ಯೋಗ ಶಬ್ದವನ್ನು ಬೇರೆಯದೇ ಆದ ಅರ್ಥದಲ್ಲಿ ಉಪಯೋಗಿಸುತ್ತಾನೆ. ಅವನು ನಿರ್ದೇಶಿಸುತ್ತಾನೆ: "ಯೋಗದಲ್ಲಿ ನಿರತನಾಗಿ ಕರ್ಮ ಮಾಡು, ಅದರ ಮೂಲ ಪಾಠ ಮಾತ್ರ ಸಮತೆಯಾಗಿದೆ. ಸಮತ್ವ ಅಂದರೆ ನೀವು ಸುಖ ಮತ್ತು ದುಃಖಗಳನ್ನು, ಹೊಗಳಿಕೆ ಹಾಗೂ ತೆಗಳಿಕೆಗಳನ್ನು, ಗೌರವ ಮತ್ತು ಅನಾದರಗಳನ್ನು, ಸೋಲು ಮತ್ತು ಗೆಲುವುಗಳನ್ನು ಸಮಾನವಾಗಿ ಪರಿಗಣಿಸಬೇಕು. ನೀವು ಇವುಗಳಿಗೆ ಮಹತ್ವ ನೀಡಬಾರದು. ಶಾಂತವಾದ, ಅಚಲ ಮನಸ್ಸಿನಿಂದ ನಿಮಗೆ ವಹಿಸಿರುವ ಕೆಲಸವನ್ನು ಮಾಡುತ್ತ ಹೋಗಬೇಕು, ಜಗದ ನಿಂದೆ, ತೆಗಳಿಕೆಗಳಿಂದ ವಿಚಲಿತರಾಗಬಾರದು. ಯಾರಿಗೆ ಈ ರೀತಿಯ ಸಮತ್ವ ಸಿದ್ಧಿಸಿದೆಯೋ ಅವರಿಗೆ ಯಾರೂ ಮಿತ್ರರಲ್ಲ, ಯಾರೂ ಶತ್ರುಗಳಲ್ಲ. ಅವರು ಎಲ್ಲರನ್ನೂ ಒಂದೇ ತೆರನಾಗಿ, ಒಂದೇ ಭಾವದಿಂದ ನೋಡುತ್ತಾರೆ. ಏಕೆಂದರೆ ಅವನಿಗೆ ಜ್ಞಾನವಿದೆ, ಅವನು ತನ್ನಂತರಂಗದಲ್ಲಿ ನಿರೀಕ್ಷಣೆ ಮಾಡಿಕೊಂಡಿದ್ದಾನೆ, ಆನಂತರ ಹೊರಗಿನ ಪ್ರಪಂಚವನ್ನು ನೋಡುತ್ತಿದ್ದಾನೆ. ತನ್ನನ್ನೇ ಎಲ್ಲದರಲ್ಲೂ ಎಲ್ಲರಲ್ಲೂ ಕಾಣುತ್ತಾನೆ, ಎಲ್ಲವನ್ನೂ ತನ್ನೊಳಗೇ ಕಾಣುತ್ತಾನೆ. ಎಲ್ಲರಲ್ಲೂ ತನ್ನನ್ನೇ ಹೇಗೆ ಕಾಣುತ್ತಿದ್ದಾನೆಂದರೆ ಪರಮಾತ್ಮ ಎಲ್ಲರಲ್ಲೂ, ಎಲ್ಲದರಲ್ಲೂ ಇದ್ದಾನೆ. ಅವನು ಉಚ್ಚ ಜಾತಿಯವರನ್ನಾಗಲಿ ನೀಚ ಜಾತಿಯವರನ್ನಾಗಲಿ ಅವರಲ್ಲಿ ವ್ಯತ್ಯಾಸ ಮಾಡುವುದಿಲ್ಲ, ಎಲ್ಲ ಜೀವರಾಶಿಗಳಲ್ಲಿಯೂ ಆ ಶ್ರೀಮನ್ನಾರಾಯಣನೇ ಇದ್ದಾನೆ ಎಂಬುದನ್ನವನು ಬಲ್ಲನು. ಪ್ರತಿಯೊಂದು ಭೌತಿಕ ಅಣುವಿನಲ್ಲಿ ಕೂಡ ವಾಸವಾಗಿರುವ ಅನನ್ಯ ಪರಮಾತ್ಮನ ಅಂಶ ತಾನೆಂಬುದನ್ನೂ ಅವನು ಬಲ್ಲನು. ಏನಾದರೂ ವ್ಯತ್ಯಾಸ, ಭೇದ ಇದ್ದರೆ ಅದು ತಾತ್ಕಾಲಿಕ ಮಾತ್ರ ಹಾಗೂ



ಬಾಹ್ಯದಲ್ಲಿ ಮಾತ್ರ. ತಾನು ವಾಸುದೇವನ ಲೀಲೆಯ ಸಾಧನ, ಉಪಕರಣ ಮಾತ್ರ ಆಗಿದ್ದಾನೆ...

ಯೋಗ ಅಂದರೆ ದ್ವಂದ್ವಗಳಿಂದ ಮುಕ್ತಿ. ಯೋಗ ಅಂದರೆ ಸುಖ–ದುಃಖಗಳಿಂದ, ಸಿಟ್ಟು ದ್ವೇಷಗಳ, ಮೋಹದ, ಇಷ್ಟಾನಿಷ್ಟಗಳ, ಬಂಧನದಿಂದ ಮುಕ್ತನಾಗುವುದು, ಏಕೆಂದರೆ ಅವನು ಎಲ್ಲವನ್ನೂ ಸಮತ್ವ ದೃಷ್ಟಿಯಿಂದ ನೋಡುತ್ತಾನೆ. ಅವನು ದುಃಖ, ದುರಾದೃಷ್ಟ, ಸಂತೋಷ ಅಸಂತೋಷಗಳಿಂದ ಕುಗ್ಗುವುದಿಲ್ಲ. ಅವನು ಶರೀರದ ಬಂಧನವನ್ನು ಕೂಡ ಮೀರುತ್ತಾನೆ, ಏಕೆಂದರೆ ತಾನಲ್ಲದೇ ಬೇರೆ ಇನ್ನಾರೂ ತನಗೆ ಸುಖ–ದುಃಖಗಳನ್ನು ನೀಡಲಾರರು, ತನ್ನ ಶಕ್ತಿಯ ಮೂಲ ಸ್ರೋತ ತನ್ನಲ್ಲೇ ಇದೆ, ಸುಖ ಸಂತೋಷಗಳ ಕಾರಣ ಶಕ್ತಿ ತನ್ನಲ್ಲೇ ಇದೆ. ಗೀತೆಯು ಹೇಳುವಂತೆ ಯೋಗವು ಇಂಥ ಸ್ವತಂತ್ರ ಸ್ಥಿತಿಯನ್ನೇ ಪ್ರಸಾದಿಸುತ್ತದೆ, ಇದನ್ನೇ ನಾವು ಸಾಮಾನ್ಯವಾಗಿ ಮುಕ್ತಿ ಎಂದು ಹೇಳುತ್ತೇವೆ. ಗೀತೆಯು ಇಂಥ ಮುಕ್ತಿಯನ್ನು ಕುರಿತು ಅಭಯ ವಚನ ನೀಡುತ್ತದೆ. ಅವನು ಹೇಳುವ ಹಾಗೆ, ಯೋಗನಿರತನಾಗಿ ಕರ್ಮ ಮಾಡಿದರೆ ನೀವು ನೋವು, ಸಂಕಟ, ದುಃಖಗಳಿಂದ ಮೇಲಕ್ಕೇರಿ ನಿಲ್ಲುತ್ತೀರಿ, ಎಲ್ಲ ಸಂಗತಿಗಳನ್ನೂ ಮೀರಿ ಮೇಲೆ ಹೋಗುತ್ತೀರಿ. ನೀವು ಪಾಪಗಳಿಂದ, ದುಃಖದಿಂದ ಮುಕ್ತರಾಗುವಿರಿ, ಏಕೆಂದರೆ ಆಗ ನೀವು ನಿಮ್ಮ ಸಲುವಾಗಿ ಯಾವ ಕರ್ಮವನ್ನೂ ಮಾಡುವುದಿಲ್ಲ. ನೀವು ಸಂತೋಷ ಪ್ರಾಪ್ತಿಗಾಗಿ ಕೆಲಸ ಮಾಡುವುದಿಲ್ಲ, ಬದಲಾಗಿ ಪರಮಾತ್ಮನ ಸಲುವಾಗಿ ಕರ್ಮ ಮಾಡುತ್ತೀರಿ. ಈ ರೀತಿ ನೀವು ಯೋಗವನ್ನು ಮಾಡಬೇಕು. ನಿಮಗೆ ಸಂತೋಷದಿಂದ ಇರಬೇಕೆಂದಿದ್ದರೆ, ನಿಮ್ಮೆಲ್ಲ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸಿಬಿಡಬೇಕು. ಎಲ್ಲ ಕೆಲಸ, ಕರ್ತವ್ಯಗಳನ್ನು ಪರಮಾತ್ಮನ ಪ್ರೀತ್ಯರ್ಥ ಮಾಡಬೇಕು. ಅಂದರೆ ಆಗ ಪಾಪವು ನಿಮ್ಮನ್ನು ಸ್ಪರ್ಶಿಸುವುದೂ ಇಲ್ಲ. ನಿಮ್ಮ ಸ್ವಾರ್ಥದಿಂದಾಗಿಯೇ ಪಾಪವು ನಿಮ್ಮನ್ನು ಸ್ಪರ್ಶಿಸುವುದು. ನಾರಾಯಣನು ಎಲ್ಲದರಲ್ಲೂ ಇದ್ದಾನೆ ಎಂಬುದನ್ನು ನೀವು ತಿಳಿದುಕೊಂಡರೆ, ನಿಮಗೆ ಸಣ್ಣದು ಎಂಬ, ವೈಯಕ್ತಿಕವೆಂಬ, ಸಂಕುಚಿತವೆಂಬ, ಭಾವ ಇಲ್ಲದಾಗುತ್ತದೆ. ನೀವು ವಿಶಾಲತೆಯ ಕಡೆಗೆ ನೋಡುವಿರಿ. ನೀವು ನಿಮ್ಮ ಕುಟುಂಬದವರಲ್ಲಿ, ಬಳಗದವರಲ್ಲಿ, ಜನಾಂಗದವರಲ್ಲಿ, ಮಾನವತೆಯಲ್ಲಿ, ಜಗತ್ತಿನ ಎಲ್ಲರಲ್ಲೂ ನಿಮ್ಮನ್ನೇ ಕಾಣುವಿರಿ. ನೀವು ನಿಮ್ಮನ್ನು ಮರೆತೇ ಬಿಡುವಿರಿ. ನೀವು ಜನಾಂಗಕ್ಕಾಗಿ, ಇತರರಿಗಾಗಿ, ಮಾನವ ಕುಲಕ್ಕಾಗಿ ಕೆಲಸ ಮಾಡುವಿರಿ. ಸ್ವಾರ್ಥದಿಂದ ಕೆಲಸ

ಮಾಡುತ್ತಿದ್ದರೆ ಆಗ ಅದು ಭಗವಂತನ ಕೆಲಸವಲ್ಲ. ಗೀತೆಯು ಹೇಳುವಂತೆ, "ನಿಮ್ಮೆಲ್ಲರ ಕಲ್ಯಾಣವೇ ಭಗವಂತನ ಕೆಲಸ", ನೀವು ಅವನ ಸಲುವಾಗಿ ಕೆಲಸ ಮಾಡುವಿರೆಂದಾದರೆ ನಿಮಗೆ ಹೆದರಿಕೆ ಬೇಡ, ಏಕೆಂದರೆ ಭಗವಂತನೇ ತನ್ನ ವರದ ಹಸ್ತವನ್ನು ನಿಮ್ಮತ್ತ ಚಾಚುತ್ತಾನೆ. ಯೋಗವು ನಿಮ್ಮನ್ನು ಅಲ್ಲಿಗೆ ಕರೆದೊಯ್ಯುತ್ತದೆ. ಭಗವದ್ಗೀತೆಯ ಉಪದೇಶವನ್ನು ಪಾಲಿಸಿದ್ದೇ ಆದರೆ, ಅದು ನಿಮ್ಮನ್ನು ಎಲ್ಲ ಪಾಪಗಳ ಸಾಧ್ಯತೆಯಿಂದ, ದುಃಖಗಳಿಂದ ಬಿಡುಗಡೆಗೊಳಿಸುತ್ತದೆ. ಅವನು ಹೇಳುತ್ತಾನೆ, "ನನ್ನಲ್ಲಿ ಶರಣಾಗತನಾಗು, ನಾನು ನಿನ್ನನ್ನು ಎಲ್ಲ ಅಮಂಗಳಗಳಿಂದಲೂ ರಕ್ಷಿಸುತ್ತೇನೆ. ಎಲ್ಲವನ್ನೂ ನನ್ನ ಯಜ್ಞವೆಂಬುದಾಗಿ ಭಾವಿಸಿ ಕರ್ಮ ಮಾಡು" ಈ ಗುರಿಯ ಕಡೆಗೆ ನೀವು ಆಗ ಹೋಗುವಿರಿ. ಹರಿ ನಾಮವು ನಿಮ್ಮನ್ನು ಎಲ್ಲ ಅಮಂಗಳಗಳಿಂದಲೂ ಪಾರು ಮಾಡುವುದು.

**CWSA 8: 50-52**

*

### ಅಪೂರ್ಣ ಮತ್ತು ಪೂರ್ಣಯೋಗ

ಯೋಗ ಅಂದರೆ ಏಕತೆ. ಯೋಗದ ಮುಖ್ಯ ಉದ್ದೇಶವೇನೆಂದರೆ, ಮಾನವನ ಆತ್ಮವು ಪರಮಾತ್ಮನ ಜೊತೆ ಬೆರೆತು ಒಂದಾಗಬೇಕು, ಸದ್ಯದ ಮಾನವ ಸ್ವಭಾವವು ಅಥವಾ ಪ್ರಕೃತಿಯು ಶಾಶ್ವತ, ಪರಮೋಚ್ಚ ಅಥವಾ ದೈವೀ ಪ್ರಕೃತಿಯ ಜೊತೆ ಬೆರೆತು ಒಂದಾಗಬೇಕು. ಈ ಏಕತೆ ಹೆಚ್ಚಾದಷ್ಟೂ ಯೋಗ ಹೆಚ್ಚಾಗುವುದು, ಏಕತೆ ಹೆಚ್ಚು ಪೂರ್ಣವಾದಂತೆ ಯೋಗವೂ ಸಹ ಪೂರ್ಣವಾಗುತ್ತ ಹೋಗುವುದು. ಪರಮಾತ್ಮನ ಬಗೆಗೆ ಅನೇಕ ಬೇರೆ ಬೇರೆ ಪರಿಕಲ್ಪನೆಗಳಿವೆ, ಪ್ರತಿಯೊಂದು ಪರಿಕಲ್ಪನೆಯೂ ಒಂದೊಂದು ಸಿದ್ಧಾಂತವಾಗಿ ಬೆಳೆದಿದೆ, ತನ್ನದೇ ಆದ ವಿಚಾರ ಹಾಗೂ ಆಚಾರಗಳನ್ನು ಹೊಂದಿದೆ. ಆದರೆ ಇವೆಲ್ಲ ಅರ್ಧಮರ್ಧ, ಯಾವುದೂ ಪೂರ್ಣ ವ್ಯವಸ್ಥೆಯಲ್ಲ, ಅಥವಾ ಹೀಗೂ ಹೇಳಬಹುದು, ಅವು ತಮ್ಮಷ್ಟಕ್ಕೆ ತಾವು ಪೂರ್ಣವಾಗಿವೆ, ಆದರೆ ಸಂಪೂರ್ಣ ಮಾನವನನ್ನು, ಅವನ ಪ್ರಕೃತಿಯನ್ನು ಒಳಗೊಳ್ಳುವುದಿಲ್ಲ. ಅವುಗಳಲ್ಲಿ ಹೆಚ್ಚಿನವು ಜೀವನದಿಂದ ವಿಮುಖವಾಗುತ್ತವೆ, ಯಾರು ಮಾನವನ ಅಸ್ತಿತ್ವದಿಂದಲೇ ವಿಮುಖರಾಗಿ ದೂರ ಹೋಗಲು ಬಯಸುತ್ತಾರೋ ಅಂಥವರಿಗೆ ಮಾತ್ರ ಅವು ಉಪಯುಕ್ತವಾಗಿವೆ. ಯಾರು ಆನಂದವನ್ನು ಸದ್ಯದ ಸ್ಥಿತಿಗಿಂತ ಬೇರೆಯದಾದ ಇನ್ನೊಂದು ಸ್ಥಿತಿಯಲ್ಲಿ ಅರಸುತ್ತಾರೋ ಅಂಥವರಿಗೆ ಅವು ಉಪಯುಕ್ತವಾಗಿವೆ.



ಇಡೀ ಮಾನವ ಜನಾಂಗದ ದೃಷ್ಟಿಯಿಂದ ನೋಡಿದರೆ ಇಂಥ ಯೋಗಗಳು ಯಾವ ಸಂದೇಶವನ್ನೂ ನೀಡುವುದಿಲ್ಲ. ಯಾವ ಯೋಗವು ಪರಮಾತ್ಮನನ್ನು ಈ ಜಗತ್ತಿನಲ್ಲಿ ಎಲ್ಲೆಡೆ ಕಾಣುವುದೋ, ಎಲ್ಲ ಜೀವರಾಶಿಗಳನ್ನು ಸಮಾನವಾಗಿ ಕಾಣುವುದೋ ಮಾನವ ಜನಾಂಗದ ಐಕ್ಯವನ್ನು ಮನ್ನಿಸುವುದೋ, ಈ ಜೀವನ ಮತ್ತು ಸೃಷ್ಟಿಯನ್ನು ಭಾಗವತ – ಪ್ರಜ್ಞೆಯಿಂದ ತುಂಬಿಸುವುದೋ, ಮಾನವನನ್ನು ಕೇವಲ ವೈಯಕ್ತಿಕವಾಗಿ ಮೇಲಕ್ಕೆತ್ತದೇ, ಇಡೀ ಮಾನವ ಜನಾಂಗವನ್ನೇ ಸಮಗ್ರ ಪರಿಪೂರ್ಣತೆಯೆಡೆಗೆ ಕರೆದೊಯ್ಯುವುದೋ ಅದೇ ಪೂರ್ಣ ಅಥವಾ ಸಮಗ್ರ ಯೋಗವಾಗಿದೆ.

**CWSA 12: 334-335** **- ಶ್ರೀ ಅರವಿಂದರು**

*

ಅಂತರಾತ್ಮನ ನಿಯಮಗಳ ಶಾಸನದ ಸಾಧ್ಯತೆ ಇರುವ, ಹಾಗೂ ಅದು ಆಗಲೇ ಬೇಕಾಗಿರುವ ದೇಶವೆಂದರೆ ಭಾರತವೊಂದೇ ಮತ್ತು ಅಂಥ ಸಮಯ ಇದೀಗ ಪ್ರಾಪ್ತವಾಗಿದೆ. ಅಲ್ಲದೇ, ಈ ದೇಶದ ಚೈತನ್ಯವು ದುರಾದೃಷ್ಟದಿಂದಾಗಿ ಪರಕೀಯ ದೇಶಗಳ ಆಕ್ರಮಣದಿಂದ, ಅವುಗಳ ಮತಾಂಧತೆಯಿಂದ ವಿಕೃತಗೊಂಡಿದ್ದು, ಆದರೆ ಏನೇ ಆದರೂ, ತನ್ನದೇ ಆದ ಅಸದೃಶ ಆಧ್ಯಾತ್ಮಿಕ ಬಳುವಳಿಯನ್ನು ಅದು ಹೊಂದಿದೆ ಅದು ಅವಿಕೃತವಾಗಿ ಉಳಿದಿರುವುದರಿಂದ ಈ ದೇಶಕ್ಕೆ ಅದೊಂದೇ, ಏಕೈಕ ಮುಕ್ತಿಯಾಗಿದೆ.

**CWM 13: 370** **- ಶ್ರೀಮಾತೆ**

*

## ಸನಾತನ ಧರ್ಮದ ಆಧಾರಭೂತ ಸತ್ಯಗಳು

### ಏಕಮೇವ ಭಗವಂತ ಮತ್ತು ಅನೇಕ ದೇವತೆಗಳು

ಭಾರತೀಯ ಧರ್ಮವು ಕಾಲಾತೀತವಾದ, ನಾಮ–ರೂಪಗಳಿಲ್ಲದ ಪರಾತ್ಪರದ ಕಲ್ಪನೆ(ಭಾವನೆ)ಗಳ ಮೇಲೆ ಸ್ಥಾಪಿತವಾಗಿದೆ. ಆದರೆ ಅದು ತರುಣ ಪೀಳಿಗೆಯ ಏಕದೇವ (ಒಬ್ಬನೇ ದೇವರು) ತತ್ವದ ಪ್ರಕಾರ ಶಾಶ್ವತದ ಮತ್ತು ಅನಂತದ ಮಧ್ಯಸ್ಥ ರೂಪುಗಳನ್ನು ಮತ್ತು ನಾಮ(ಹೆಸರು)ಗಳನ್ನು ಮತ್ತು ಶಕ್ತಿಗಳನ್ನು ಮತ್ತು ವೈಯಕ್ತಿಕ ಅಸ್ತಿತ್ವಗಳನ್ನು ಅಲ್ಲಗಳೆಯುವದಕ್ಕೆ ಅಥವಾ

ಕಿತ್ತಿಹಾಕಲಿಕ್ಕೆ ಹೇಳಲಿಲ್ಲ ಬಣ್ಣ ಕಳೆದುಕೊಂಡ ಏಕತತ್ವ (ಜಡದ್ರವ್ಯ ಮತ್ತು ಮಾನಸಿಕ ದ್ರವ್ಯಗಳು ಬೇರೆ ಬೇರೆ ಅಲ್ಲವೆಂಬ ವಾದ) ಅಥವಾ ಕಳೆಗುಂದಿದ ಅಸ್ಪಷ್ಟ ವಿಶ್ವಾತೀತ ಏಕದೇವತಾವಾದವು ಅದರ ಆರಂಭ, ಮಧ್ಯ ಮತ್ತು ಅದರ ಅಂತ್ಯ ಆಗಿರಲಿಲ್ಲ. ಏಕಮೇವ ದೇವರು ಸರ್ವಮ್ ಎಂದು ಆರಾಧಿಸಲ್ಪಡುತ್ತಾನೆ. ಯಾಕಂದರೆ ವಿಶ್ವದಲ್ಲಿಯ ಸರ್ವವೂ ಅವನೇ ಆಗಿದ್ದಾನೆ. ಅಥವಾ ಅವನ ಸತ್ತೆ ಅಥವಾ ಪ್ರಕೃತಿಯಿಂದ ಮಾಡಲ್ಪಟ್ಟಿದೆ. ಆದ್ದರಿಂದ ಭಾರತೀಯ ಧರ್ಮವು ವಿಶ್ವದೇವಕ್ಯವಾದ(ದೇವರೇ ವಿಶ್ವ, ವಿಶ್ವವೇ ದೇವರು ಎನ್ನುವ ವಾದ)ವಲ್ಲ, ಯಾಕಂದರೆ ಈ ವಿಶ್ವವ್ಯಾಪಕತೆಯ ಆಚೆಗಿರುವ ವೈಶ್ವಿಕ ಶಾಶ್ವತತೆಯನ್ನು ಅದು ಒಪ್ಪುತ್ತದೆ. ಭಾರತೀಯ ಬಹುದೇವತಾ ವಾದವು ಪ್ರಾಚೀನ ಯುರೋಪದ ಜನಪ್ರಿಯ ಬಹು(ಒಬ್ಬನಿಂದ ಹೆಚ್ಚು)ದೇವತಾ ವಾದವಲ್ಲ. ಯಾಕಂದರೆ, ಇಲ್ಲಿ ಬಹುದೇವತೆಗಳನ್ನು ಆರಾಧಿಸುವವನಿಗೆ ತನ್ನ ದೈವತಗಳು ಏಕಮೇವದ ರೂಪುಗಳು–ನಾಮಗಳು–ವ್ಯಕ್ತಿತ್ವಗಳು ಮತ್ತು ಶಕ್ತಿಗಳಾಗಿರುತ್ತವೆ ಎಂಬುದನ್ನು ಅರಿತಿರುತ್ತಾನೆ; ಅವನ ದೇವರುಗಳು ಏಕಮೇವ ಪುರುಷನಿಂದ ಉತ್ಪತ್ತಿಯಾಗುತ್ತಾರೆ, ಅವನ ದೇವರುಗಳು (ಸ್ತ್ರೀ ದೇವತೆಗಳು), ಏಕಮೇವ ದೈವೀ ಶಕ್ತಿಯ ಶಕ್ತಿಗಳಾಗಿರುತ್ತಾರೆ. ಜನಪ್ರಿಯವಾದ ಏಕದೇವತಾ ವಾದವನ್ನು ವಿಶೇಷವಾಗಿ ಹೋಲುವ ಭಾರತೀಯ ಆರಾಧನಾ ಪದ್ಧತಿಯ ಈ ರೀತಿಗಳು ಇನ್ನೂ ಹೆಚ್ಚಿನ ಸಂಗತಿಗಳನ್ನು ಹೊಂದಿದವುಗಳಾಗಿರುತ್ತವೆ; ಯಾಕಂದರೆ ಅವು ದೇವರ ಅನಂತ ರೂಪಗಳನ್ನು ಅಲ್ಲಗಳೆಯವದಿಲ್ಲ, ಆದರೆ ಒಪ್ಪಿಕೊಳ್ಳುತ್ತವೆ. ಭಾರತೀಯ ಆಕಾರ(ಮೂರ್ತಿ) ಪೂಜೆಯು ಸುಧಾರಿತವಲ್ಲದ ಮನಸ್ಸಿನ ಅಥವಾ ಅನಾಗರಿಕ ಮೂರ್ತಿ ಪೂಜೆಯಲ್ಲ; ಯಾಕಂದರೆ ಅತ್ಯಂತ ಅಜ್ಞಾನಿಯೂ ಕೂಡ, ಮೂರ್ತಿಯ ಒಂದು ಸಂಕೇತವಾಗಿದೆ ಮತ್ತು ಆಧಾರವಾಗಿದೆ ಮತ್ತು ಅದರ ಉಪಯೋಗವು ಮುಗಿದನಂತರ ಅದನ್ನು ಎಸೆದುಬಿಡಬಹುದು ಎಂಬುದನ್ನು ತಿಳಿದಿದ್ದಾನೆ....

**CWSA 20: 192**

*

### ದೈವೀ ಆಕಾರ ಮತ್ತು ನಿರಾಕಾರಗಳು ಒಂದೇ ದೈವೀ ಸತ್ಯಗಳಾಗಿರುತ್ತವೆ

ಭಗವಂತನ ಬಗೆಗಿನ ಮಾನವೀಯ ಕಲ್ಪನೆಗಳು ವಿಭಜಿಸಲ್ಪಟ್ಟಿರುತ್ತವೆ: ಮೊದಲನೆಯದಾಗಿ ಸಾಕಾರದ ಆರಾಧನೆ ಮತ್ತು ನಿರಾಕಾರದತ್ತ ಅಭೀಪ್ಸೆ,



ಎರಡನೆಯದಾಗಿ ಸಗುಣ ಆರಾಧನೆ ಮತ್ತು ನಿರ್ಗುಣದತ್ತ, ಕೇವಲದತ್ತ ಅತ್ಯಂತ ವಿರಳವಾದ ಆತ್ಮಗಳ ಪ್ರೇರೇಪಣೆ. ಈ ಎಲ್ಲ ಹಂತಗಳಿಗೆ ತಾಂತ್ರಿಕ (ತಂತ್ರ ಯೋಗದಲ್ಲಿಯ) ಆರಾಧನೆ ಮತ್ತು ಶಿಸ್ತು–ನಡುವಳಿಕೆ–ನಿಯಮಗಳನ್ನು ಒದಗಿಸುತ್ತದೆ. ಧಾರ್ಮಿಕ ವಿಚಾರವಾದಿಗಳು ಸಾಕಾರನು ತನ್ನನ್ನು ಆಕಾರಗಳಿಂದ ಆಚ್ಛಾದಿಸಿ(ಮುಚ್ಚಿ)ಕೊಳ್ಳಲು ಸಾಧ್ಯವಿದೆಯೆ ಎಂದು ಕೇಳುವರು. ಅದಕ್ಕೆ ಉತ್ತರ ಕೊಡಲು ವಿಶ್ವವಿದೆ. ಹಿಂದುತ್ವವು ಕಲ್ಲಿನಲ್ಲಿ, ವೃಕ್ಷಗಳಲ್ಲಿ, ಪ್ರಾಣಿಗಳಲ್ಲಿ, ಮಾನವ ಜೀವಿಗಳಲ್ಲಿ ನಾರಾಯಣನನ್ನು ಆರಾಧಿಸುತ್ತದೆ. ಯಾವುದು ಬೇರೆ ಧರ್ಮಗಳ ಬೌದ್ಧಿಕ ಮತ್ತು ಆಧ್ಯಾತ್ಮಿಕ ಪ್ರತಿಷ್ಠೆ ಅಥವಾ ತೀಕ್ಷ್ಣತೆಗಳನ್ನು ಇಳಿಕೆ ಮಾಡುತ್ತದೆಯೊ ಅದು ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುತ್ತದೆ ಮತ್ತು ತನ್ನ ತರ್ಕದ ತೀಕ್ಷ್ಣತೆಯ ತನ್ನ ಸ್ವಂತದ ಆಕಾರವನ್ನು ಪಡೆಯುತ್ತದೆ. ಕೊರಡು–ಕಲ್ಲುಗಳು, ನಾಲ್ಕು ಕಾಲಿನ ಪ್ರಾಣಿ ಮತ್ತು ಮಾನವ ಜೀವಿ ಇವೆಲ್ಲವುಗಳು ದೇವರ ಎದುರಿನಲ್ಲಿ ಸರಿ–ಸಮಾನವಾಗಿರುತ್ತವೆ, ಭಗವಂತನ ರೂಪದಲ್ಲಿ ನಮ್ಮ ಸಹೋದರರು; ಸರ್ವವ್ಯಾಪಿ ಪರಮಾತ್ಮನು ಸ್ವೀಕರಿಸಲಿಕ್ಕೆ ನಿರಾಕರಿಸಿದ ಆಕಾರ (ರೂಪು)ಗಳಲ್ಲ. ಆದರೆ ಪಾರ್ಥಿವ ರೂಪಗಳ ಆಚೆಗೆ ಆದರ್ಶವಾದ ಮತ್ತು ಸಾಂಕೇತಿಕವಾದ ಬೇರೆ ರೂಪುಗಳಿರುತ್ತವೆ. ಭೌತಿಕ ಪ್ರಕಟಣೆಗಿಂತ ಕಡಿಮೆಯಿಲ್ಲದವು. ಹೆಚ್ಚು ನೈಜವಾದವುಗಳು ಮತ್ತು ಹೆಚ್ಚು ದೈವೀಶಕ್ತಿಯಿಂದ ಕೂಡಿದವುಗಳೂ ಆಗಿರುತ್ತವೆ. ಇವು ಮನೋಮಯ ಆಕಾರ (ರೂಪು)ಗಳಾಗಿರುತ್ತವೆ, ಅವುಗಳಲ್ಲಿ ನಾವು ದೇವರನ್ನು ಕಂಡು ಪೂಜಿಸುತ್ತೇವೆ. ತಾನು ಯಾವುದೇ ರೂಪಕ್ಕೆ ತನ್ನ ಭಕ್ತಿಯನ್ನು ಅರ್ಪಿಸಬಹುದು, ದೇವರ ಪ್ರೀತಿಯು ಅದನ್ನು ಸ್ವೀಕರಿಸಲು ಮತ್ತು ಅದನ್ನು ಚೇತನಗೊಳಿಸಲು ಬದ್ಧವಾಗಿರುತ್ತದೆ ಎಂದು ಹಿಂದುವು ನಂಬುತ್ತಾನೆ ಮತ್ತು ಈ ನಂಬುಗೆಯು ವಿಚಾರರಹಿತ ಅಥವಾ ಅಸಂಬದ್ಧವಾದದ್ದೆಂದು ಹೇಳಲು ಆಗುವದಿಲ್ಲ. ಈ ಎಲ್ಲ ಉತ್ತರಿಸುವ ಜೀವಿಗಳಿಗೆ ಪ್ರಜ್ಞೆಯು ಹಾತೊರೆಯಲು ವಿಶ್ವದಲ್ಲಿ ವಿಶ್ವಾತೀತದಲ್ಲಿ ಇರುವುದಾದರೆ, ಬಹುಶಃ ಅದೇ ಸ್ವತಃ ಅವುಗಳ ಕಡೆಗೆ ತಂದೆಯ, ತಾಯಿಯ, ಗೆಳೆಯನ ಪ್ರಿಯತಮನ ಪ್ರೀತಿಯಿಂದ ಮತ್ತು ಇವೆಲ್ಲವುಗಳನ್ನು ಮೀರುವ ಪ್ರೀತಿಯಿಂದ ಉತ್ತರಿಸುವ ಪ್ರಜ್ಞೆ ಇರುವುದಾದರೆ, ಅದು ತನ್ನ ಸ್ವಂತದ ಸಂತೋಷ ಮತ್ತು ಕೀರ್ತಿ–ವೈಭವಗಳಿಗಾಗಿ ವಿಶ್ವದ ರೂಪಗಳನ್ನು ಧರಿಸುವದು ಅಥವಾ ಸೃಷ್ಟಿಸುವದು ಎಂದು ತಿಳಿಯುವದು ನಿರರ್ಥಕ: ಆದರೆ ಆರಾಧಕನ ಪ್ರೀತಿಯು ಅರ್ಪಿಸುವ ರೂಪಗಳನ್ನು ತನ್ನ ಘನತೆ, ಗೌರವಗಳಿಗೆ ಮಾಡಿದ

ಅಪರಾಧವೆಂದು ಅದನ್ನು ತಿರಸ್ಕರಿಸಬಹುದು. ಅದು ಅವನ ಹೃದಯದಲ್ಲಿ ಅಥವಾ ಅವನ ಕಲ್ಪನೆಯಲ್ಲಿ ರೂಪುಗೊಂಡದ್ದಿರುತ್ತದೆ. ಮಾನಸಿಕ ರೂಪುಗಳಿಗೆ ಮಾನಸಿಕ ಪೂಜೆಯನ್ನು ಅರ್ಪಿಸಬಹುದು ಮತ್ತು ಇದು ಉಚ್ಚತರ ಮಾರ್ಗವಾಗಿದೆ. ಒಂದು ವಿಗ್ರಹದ ಅಥವಾ ಚಿತ್ರಿತ ಆಕಾರ/ಭಾವ ಚಿತ್ರದ ಭೌತಿಕ ಪೂಜೆಯ ಭೌತಕೇಂದ್ರೀಯ ವಿಚಾರವನ್ನು ರೂಪಿಸುವದಕ್ಕಾಗಿ ನಾವು ಒಂದು ಭೌತಿಕ ತಳಹದಿಯನ್ನು, ಪ್ರತಿಷ್ಠಾನವನ್ನು ಕೊಡಬಹುದು.

ನಿರಾಕಾರದಲ್ಲಿಯೂ ಕೂಡ ನಾವು ದೇವರನ್ನು ಅವನ ಗುಣಗಳಲ್ಲಿ, ಅವನ ದೈವೀ ಪ್ರೀತಿ, ದೈವೀ ಶಕ್ತಿ, ದೈವೀ ಆನಂದ, ದೈವೀ ಜ್ಞಾನ, ಮಹತ್ತರವಾದ ವಿಶ್ವ ತತ್ವಗಳಲ್ಲಿ ಪೂಜಿಸುತ್ತೇವೆ. ಅದರಿಂದಾಗಿ ಅವನು ಜ್ಞಾನದ ಕಣ್ಣಿಗೆ ಪ್ರಕಟವಾಗುತ್ತಾನೆ. ನಾವು ಅವನನ್ನು ಈ ಸಂಗತಿಗಳಲ್ಲಿ ಪ್ರಕಟವಾದ ವ್ಯಕ್ತಿರೂಪವಲ್ಲದ – ಅಪೌರುಷೇಯನೆಂದು ಅಥವಾ ಅವೆಲ್ಲವುಗಳನ್ನು ಒಳಗೊಂಡ ವ್ಯಕ್ತಿತ್ವವೆಂದು ಆರಾಧಿಸುತ್ತೇವೆ ಮತ್ತು ನಾವು ಶಂಖ್ವಾಕೃತಿಯ ಗೋಪುರದ ತುತ್ತ ತುದಿಗೆ ಏರುತ್ತೇವೆ, ಅದು ನಿರಾಕಾರ, ಅರೂಪ, ಅಷ್ಟೇ ಅಲ್ಲ, ಆದರೆ ಗೀತೆಯಲ್ಲಿ ನಿರ್ಗುಣ, ಗುಣಾತೀತ, ಅವರ್ಣನೀಯ, ಅನಿರ್ದೇಶ್ಯವೂ ಆಗಿರುತ್ತದೆ. ನಮ್ಮ ಮಾನವೀಯ ಅಜ್ಞಾನದಲ್ಲಿ, ನಮ್ಮ ಮಾನಸಿಕ ಉದ್ರೇಕಗಳಿಂದ ಅಂತಸ್ತು ಮತ್ತು ವಿಶೇಷ ಮನ್ನಣೆಗಳಿಗಾಗಿ, ಶ್ರೇಷ್ಠತೆಗಾಗಿ ಮತ್ತು ಪ್ರತ್ಯೇಕತೆಗಾಗಿ ವಸ್ತು–ಸಂಗತಿಗಳ ವರ್ಗೀಕರಣ ಮಾಡುತ್ತೇವೆ. ಇದು ಕೆಳದರ್ಜೆಯ ಮತ್ತು ಅಜ್ಞಾನ ಆತ್ಮದ ಕೆಲಸ. ನಮಗೆ ತಿಳಿದಿದೆಯೆ? ಏಕದೇವತಾ(ದೇವರು ಒಬ್ಬನೆ)ವಾದದವನು ಸಾಕಾರ ಪೂಜಿಕ, ಮನುಷ್ಯನನ್ನು ಪೂಜಿಸುವ ಮೂರ್ತಿಪೂಜಕನನ್ನು ಹಲವು ದೇವತೆಗಳನ್ನು ನಂಬುವವನನ್ನು ಕೀಳಾಗಿ ನೋಡುತ್ತಾನೆ. ಅದ್ವೈತವಾದಿಯು ಗುಣ (ಸಾಕಾರ) ಆರಾಧಕನ ಭ್ರಾಂತ ಏಕದೇವತಾವಾದಿ ಅಜ್ಞಾನವನ್ನು ಶಾಂತ ಮತ್ತು ಸಹನಶೀಲ ತಾಳ್ಮೆಗಳಿಂದ ಕಡೆಗಣಿಸುತ್ತಾನೆ. ಆದರೆ ದೇವರು ಯಾವುದನ್ನೂ ಇಳಿಕೆಯಾಗಗೊಡುವದಿಲ್ಲ. ಈ ಎಲ್ಲ ವಸ್ತುಗಳ ಆತ್ಮವು ಚಿಕ್ಕಮಗುವಿನ ಪ್ರಾರ್ಥನೆಯಲ್ಲಿ ಅಥವಾ ಒಂದು ಪುಷ್ಪವನ್ನು ಅಥವಾ ಒಂದು ಎಲೆಯನ್ನು ಚಿತ್ರಿತ ಆಕಾರ (ಭಾವಚಿತ್ರ)ದ ಎದುರು ಅರ್ಪಿಸುವದರಲ್ಲಿ ಸಾಕಷ್ಟು ಆನಂದವನ್ನು ಪಡೆಯಬಹುದು. ಅದು ತತ್ವಜ್ಞಾನಿಯ ವಿಚಾರಗಳ ಶಿಖರದಿಂದ ಅವರ್ಣನೀಯ ಮತ್ತು ಅಜ್ಞೇಯದಲ್ಲಿ ಧುಮುಕಿದಂತಿರುತ್ತದೆ ಮತ್ತು ಯಾವನು ಮೇಳೇಳಬಲ್ಲನೊ ಮತ್ತು ಅಪಾರವಾದ ಸಿದ್ಧಿಯಲ್ಲಿ ವಿಸ್ತಾರಗೊಳ್ಳಬಲ್ಲನೊ ಮತ್ತು ಚಿಕ್ಕಮಗುವಿನ ಹೃದಯವನ್ನು ಮತ್ತು ರೂಪುಗಳ (ಸಾಕಾರ) ದೃಷ್ಟಾರನ ಸಾಮರ್ಥ್ಯವನ್ನು ಹೊಂದಿರುವನೊ ಅವನು ಸರ್ವೋತ್ತಮವಾದುದನ್ನು ಮಾಡಬಲ್ಲನು.



**CWSA 1: 572-73**

*

**ಅಪರಾ ಮತ್ತು ಪರಾ ವಿದ್ಯಾ (ನಿಮ್ನ ಮತ್ತು ಉಚ್ಚತರ ಜ್ಞಾನ)**

ಜನರು ತರ್ಕವನ್ನು ಸರ್ವಶ್ರೇಷ್ಠ ಮಾರ್ಗದರ್ಶಿಯೆಂಬುದನ್ನು ಅಲ್ಲಗಳೆದಾಗ ಬೌದ್ಧಿಕ ಸ್ವಾಭಿಮಾನದ ಪ್ರಭಾವಕ್ಕೆ ಒಳಗಾದವನಿಗೆ ಆ ಆಘಾತವಾಗುತ್ತದೆ. ಓರ್ವ ಸುಸಂಸ್ಕೃತ ಮನುಷ್ಯನು ತರ್ಕವನ್ನು ಅಲ್ಲಗಳೆಯುವದು ಮತ್ತು ಜನರು ದೇವರೆಂದು ಕರೆಯುವ ಬಾಹ್ಯ ಪ್ರಭಾವವನ್ನು ಎತ್ತರಿಸುವದು ಹೇಗೆ ಸಾಧ್ಯ ಎಂದು ಅವನು ಕೇಳುತ್ತಾನೆ. ಆದರೆ ಈ ಸಂಶಯ ಜನರು ಮನುಷ್ಯನನ್ನು ಅವನ ಭೌತಿಕ ಅಂಶಕ್ಕೆ ಸೀಮಿತಗೊಳಿಸುವ ಯುರೋಪಿಯನ್ ಭೌತಿಕವಾದದ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಮತ್ತು ಅದು (ಆ ಪ್ರಭಾವವು) ಮನುಷ್ಯನ ದೈವೀ ಮೂಲ ಮತ್ತು ದೈವೀ ನಿಯತಿ (ಅದೃಷ್ಟ)ಯನ್ನು ಅಲ್ಲಗಳೆಯುತ್ತದೆ. ಯಾವಾಗ ಯುರೋಪವು ಕ್ರೈಸ್ತಮತ(ಕ್ರಿಶ್ಚಾನಿಟಿ)ವನ್ನು ಸನ್ಯಾಸಿಗಳಿಗೆ ಬೈರಾಗಿಗಳಿಗೆ ಬಿಟ್ಟುಕೊಟ್ಟಿತೊ, ಮತ್ತು ಗ್ಯಾಲಿಲನ್ (Galilean)ನ ಉಪದೇಶಗಳನ್ನು ಮರೆತು ಬಿಟ್ಟಿತೊ ಅದು ಒಂದು ಭೀಕರ ಉಧಿನಿಯತಿ(ವಿಧಿವಿಲಾಸ)ಯನ್ನು ಅನುಭವಿಸಬೇಕಾಯಿತು. ಅದು ಇನ್ನೂ ಅದರ ಜೊತೆಗೆ ಇದೆ. ಮನುಷ್ಯನಲ್ಲಿರುವ ದೇವರು ಸಂಪೂರ್ಣ ದಿವ್ಯದರ್ಶನ (ಅಂತರ್ಜ್ಞಾನ) ಆಗಿದೆ ಮತ್ತು ಸಮಗ್ರವಾದ (ಇಡಿಯಾದ) ಧರ್ಮವಾಗಿದೆ. ಕ್ರೈಸ್ತಮತವು ಯಾವುದನ್ನು ಮಂದವಾದ ರೀತಿಯಲ್ಲಿ ಬೋಧಿಸಿತೊ, ಅದನ್ನು ಹಿಂದುತ್ವವು ಬುದ್ಧಿವಂತರಿಗೆ ವೇದಾಂತದಲ್ಲಿ ಸುಲಭಗೊಳಿಸಿದೆ.

ಯಾವನಾದರೂ ನಾವು ಕೇವಲ ಬುದ್ಧಿಜೀವಿಗಳು ಎಂದು ತಿಳಿಯುತ್ತಿದ್ದರೆ ಅವನು ಹಿಂದು ಅಲ್ಲ. ಹಿಂದುತ್ವವು ಎಂದೂ ದೇವರನ್ನು ಕಾಣದವರಿಗೆ ಬೌದ್ಧಿಕತೆಯ ವೈಭವೀಕರಣವನ್ನು ಬಿಟ್ಟುಕೊಡುತ್ತದೆ. ಅವನ (ಭಗವಂತನ) ಮಹತಿ ಮತ್ತು ಘನತೆಯ ಬಗ್ಗೆ ವರ್ಣಿಸುವದಕ್ಕಾಗಿ (ಹೇಳುವದಕ್ಕಾಗಿ) ಅದು (ಹಿಂದುತ್ವವು) ಅವನಿಂದ (ಭಗವಂತನಿಂದ) ನಿಯಮಿಸಲ್ಪಟ್ಟಿರುತ್ತದೆ ಮತ್ತು ಅದು ಸಾವಿರಾರು ವರ್ಷ ಅದನ್ನೇ ಹೇಳಿದೆ. ನಾವು ಯಾವಾಗ ಪ್ರಪ್ರಥಮವಾಗಿ ಯುರೋಪಿಯನ್ ಶಿಕ್ಷಣವನ್ನು ಅಂಗೀಕರಿಸಿದೆವೊ ವಿಜ್ಞಾನದ ಬೆಳಕಿನಿಂದ

ನಾವು ದಾರಿತಪ್ಪುವಂತೆಯಾಗಲು ನಮ್ಮನ್ನು ಅನುಮತಿಸಿದೆವು. ವಿಜ್ಞಾನವು ಒಂದು ಸೀಮಿತಕೋಣೆಯಲ್ಲಿಯ ಬೆಳಕು, ಆದರೆ ಅದು ಜಗತ್ತನ್ನೆ ಬೆಳಗುವ ಸೂರ್ಯನಾಗಲಾರದು. ಅಪರಾ ವಿದ್ಯೆಯ ವಿಜ್ಞಾನದ ಒಂದು ಮೊತ್ತ(ರಾಶಿ)–ವಾಗಿರುತ್ತದೆ. ಆದರೆ ಒಂದು ಉಚ್ಚತರ ವಿದ್ಯೆ, ಉಚ್ಚತರ ಜ್ಞಾನ ಎಂಬುದಿದೆ. ನಾವು ನಿಮ್ನ (ಕೆಳ) ಜ್ಞಾನದ ಪ್ರಭಾವದಲ್ಲಿದ್ದಾಗ, ನಾವೇ ಎಲ್ಲವನ್ನು ಮಾಡುತ್ತಿದ್ದೇವೆ, ನಾವು ಸಿಕ್ಕಿಕೊಂಡಿರುವ ಪರಿಸ್ಥಿತಿಯ ಬಗ್ಗೆ ಹೇಗೆ, ಏಕೆ ಎಂದು ವಿಚಾರಿಸುವ ಪ್ರಯತ್ನ ಮಾಡುತ್ತೇವೆ. ನಮ್ಮ ಬುದ್ಧಿಯೇ ಸರ್ವಶ್ರೇಷ್ಠ ಮತ್ತು ಸರ್ವಶಕ್ತವೆಂದು ಭಾವಿಸುತ್ತೇವೆ. ಆದರೆ ಇದು ಭ್ರಮಾತ್ಮಕ ಮತ್ತು ಮಾಯೆಯ ಗುಣಧರ್ಮವಾಗಿರುತ್ತದೆ. ಯಾವನೇ ಆಗಿರಲಿ, ಅವನಿಗೆ ತನ್ನೊಳಗಿರುವ ದೇವರ ಅನುಭವವು ಒಮ್ಮೆ ಆದರೆ, ವೈಭವದ ಬುದ್ಧಿಯೇ ಸರ್ವಶ್ರೇಷ್ಠವೆಂದು ಅವನು ಮತ್ತೆ ಎಂದಿಗೂ ನಂಬುವದಿಲ್ಲ. ಒಂದು ಉಚ್ಚತರ ಧ್ವನಿ ಇದೆ, ಅಪಯಶಕಾಣದ ಒಂದು ದೇವವಾಣಿ ಇದೆ. ಅದು ಹೃದಯದಲ್ಲಿ, ದೇವರ ವಾಸಸ್ಥಾನದಲ್ಲಿ ಇರುತ್ತದೆ ಅವನು ಮೆದುಳಿನ ಮುಖಾಂತರ ಕಾರ್ಯ ಮಾಡುತ್ತಾನೆ; ಆದರೆ ಮೆದುಳು ಅವನ ಉಪಕರಣಗಳಲ್ಲಿ ಕೇವಲ ಒಂದು ಮಾತ್ರ. ಮೆದುಳು ಏನೇ ಯೋಜನೆ ಮಾಡಲಿ, ಅದು ಹೃದಯಕ್ಕೆ ಮೊದಲು ತಿಳಿಯುತ್ತದೆ ಮತ್ತು ಯಾವನು ಮೆದುಳಿನ ಆಚೆಗೆ ಹೃದಯಕ್ಕೆ ಹೋಗಬಲ್ಲನೊ ಅವನು ಶಾಶ್ವತನ ವಾಣಿಯನ್ನು ಕೇಳುವನು.

**CWSA 6-7: 891-92**

*

**ಮೂರು ಮೂಲಭೂತ ವಿಚಾರಗಳು**

ಭಾರತೀಯ ಧಾರ್ಮಿಕ ಮನಸ್ಸಿನ ಸಮನ್ವಯ ಗುಣ ಮತ್ತು ಆಲಿಂಗಿಸುವ ಏಕತೆಯ ಗುಣಗಳಿಗೆ ಪ್ರಾಧಾನ್ಯತೆ ಕೊಡುವದು ಆವಶ್ಯಕವಾಗಿರುತ್ತದೆ. ಯಾಕಂದರೆ, ಹಾಗೆ ಮಾಡದಿದ್ದರೆ ನಾವು ಭಾರತೀಯ ಜೀವನದ ಸಮಗ್ರ ಅರ್ಥವನ್ನು ಮತ್ತು ಭಾರತೀಯ ಸಂಸ್ಕೃತಿಯ ಸಂಪೂರ್ಣಭಾವವನ್ನು ಕಳೆದುಕೊಳ್ಳುತ್ತೇವೆ. ಈ ವಿಶಾಲವಾದ ಮತ್ತು ಮಿದುವಾದ (ಹೇಗೆ ಬೇಕೊ ಹಾಗೆ ಆಕಾರವನ್ನು ಹೊಂದಬಲ್ಲ) ಗುಣದಿಂದ ಮಾತ್ರ ನಾವು ಸಮುದಾಯ ಜೀವನದ ಮೇಲೆ ಮತ್ತು ವೈಯಕ್ತಿಕ ವ್ಯಕ್ತಿಯ ಜೀವನದ ಮೇಲೆ ಆಗುವ ಅದರ ಇಡಿಯ ಪರಿಣಾಮವನ್ನು ತಿಳಿಯಬಲ್ಲೆವು ಮತ್ತು "ಒಟ್ಟಿನಲ್ಲಿ ಹಿಂದುತ್ವ ಅಂದರೇನು, ಅದು



ಏನನ್ನು ಬೋಧಿಸುತ್ತದೆ, ಅದು ಏನನ್ನು ಅನುಸಂಧಾನ ಮಾಡುತ್ತದೆ, ಅದರ ಸಾಮಾನ್ಯ ಅಂಶಗಳೇನು?" ಎಂದು ಕೇಳಿದರೆ, ಭಾರತೀಯ ಧರ್ಮವು ಮೂರು ಮೂಲ ವಿಚಾರಗಳ ಮೇಲೆ, ಬಹುಶಃ ಉಚ್ಚತಮ ಮತ್ತು ವಿಶಾಲತಮ ಆಧ್ಯಾತ್ಮಿಕ ಅನುಭವದ ಮೂರು ಮೂಲ ಸಂಗತಿಗಳ ಮೇಲೆ ನಿಂತಿದೆ ಎಂದು ನಾವು ಉತ್ತರಿಸಬಹುದು. ಮೊದಲು ಬರುವುದು ವೇದದ ಏಕಮೇವ ಅಸ್ತಿತ್ವದ ವಿಚಾರ. ಅದಕ್ಕೆ ಋಷಿಗಳು ಬೇರೆಬೇರೆ ಹೆಸರುಗಳನ್ನು ಕೊಟ್ಟಿದ್ದಾರೆ. ಉಪನಿಷತ್ತಿನಲ್ಲಿ ಹೇಳಿದ ಎರಡೆಂಬುದಿಲ್ಲದ ಏಕ, ಒಂದು ಇರುವುದೆಲ್ಲವೂ ಅವನೇ ಆಗಿದ್ದಾನೆ ಮತ್ತು ಎಲ್ಲದರ ಆಚೆಗೆ ಅದೇ ಇದೆ, ಬೌದ್ಧರ ಶಾಶ್ವತತೆ (Permamend), ಮಾಯಾವಾದಿಗಳ ಕೇವಲ (Absolute), ಏಕದೇವತಾವಾದಿಗಳ ಪರಾತ್ಪರ ಪರಮೇಶ್ವರ ಅಥವಾ ಪುರುಷ, ಅವನು ಆತ್ಮ ಮತ್ತು ವಿಶ್ವ ಪ್ರಕೃತಿಯನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿದ್ದಾನೆ – ಒಂದೇ ಶಬ್ದದಲ್ಲಿ ಹೇಳಬೇಕೆಂದರೆ ಶಾಶ್ವತ ದಿವ್ಯ ಅನಂತ ಇದು ಮೊದಲನೆಯ ಸಾಮಾನ್ಯ ತಳಹದಿಯಾಗಿದೆ, ಆದರೆ ಮಾನವ ಬುದ್ಧಿಯು ಅದನ್ನು ಅಂತವಿಲ್ಲದ ಸೂತ್ರಗಳ ವೈವಿಧ್ಯಗಳಲ್ಲಿ ಅಭಿವ್ಯಕ್ತಗೊಳಿಸಿದೆ. ಈ ಶಾಶ್ವತದ, ಈ ಅನಂತದ, ಈ ನಿರಂತರತೆಗಳ ಸಂಶೋಧನೆಯನ್ನು ಮಾಡುವದು ಮತ್ತು ಹತ್ತಿರದಿಂದ ನೋಡುವದು ಮತ್ತು ಅವುಗಳ ಯಾವುದೇ ಬಗೆಯ, ಎಷ್ಟೇ ಅಂಶದ ಏಕತೆಯಲ್ಲಿ ಪ್ರವೇಶಿಸುವುದು ಅತ್ಯಂತ ಎತ್ತರದ ಎತ್ತರವಾಗಿದೆ ಮತ್ತು ಅದರ ಆಧ್ಯಾತ್ಮಿಕ ಅನುಭವದ ಕೊನೆಯ ಪ್ರಯತ್ನವಾಗಿದೆ. ಅದು ಭಾರತೀಯ ಧಾರ್ಮಿಕ ಮನಸ್ಸಿನ ಪ್ರಥಮ ವೈಶ್ವಿಕ ಮತ (ಧಾರ್ಮಿಕ) ಸೂತ್ರವಾಗಿದೆ.

ಈ ತಳಹದಿಯ ಯಾವುದೇ ಸೂತ್ರವನ್ನು ಒಪ್ಪಿಕೊ. ಭಾರತದಲ್ಲಿ ಅಧಿಕೃತಗೊಂಡ ಸಹಸ್ರಾರು ಮಾರ್ಗಗಳಲ್ಲಿ, ಅಥವಾ ಅವುಗಳಿಂದ ಹೊರಟ ಯಾವದೇ ಹೊಸ ಮಾರ್ಗದಲ್ಲಿ ನಡೆ, ಆಗ ನೀನು ಧರ್ಮದ ಅಂತರಂಗವನ್ನು ತಲುಪುತ್ತೀ, ಎರಡನೆಯ ಮೂಲಭೂತ ವಿಚಾರದಲ್ಲಿ ಶಾಶ್ವತ ಮತ್ತು ಅನಂತತೆಗಳತ್ತ ಮನುಷ್ಯನು ಬಳಿ ಸಾರುವ ಬಹು ವಿಧಧ ಮಾರ್ಗವಾಗಿರುತ್ತದೆ. ಅನಂತವು ಅನೇಕ ಅನಂತಗಳನ್ನು ಒಳಗೊಂಡಿದೆ ಮತ್ತು ಇವುಗಳಲ್ಲಿ ಪ್ರತಿಯೊಂದು ಅನಂತತೆಯು ತಾನೇ ತಾನು ಶಾಶ್ವತತೆಯ ಆಗಿರುತ್ತದೆ ಮತ್ತು ಇಲ್ಲಿ ವಿಶ್ವದ ಇತಿಮಿತಿಗಳಲ್ಲಿ ದೇವರು ಸ್ವತಃ ತಾನು ಆವಿರ್ಭಾವ(ಪ್ರಕಟ)–ಗೊಳ್ಳುತ್ತಾನೆ ಮತ್ತು ಜಗತ್ತಿನಲ್ಲಿ ಅನೇಕ ರೀತಿಯಲ್ಲಿ ಅದರ ಬೇಡಿಕೆಗಳನ್ನು

ನೆರವೇರಿಸುತ್ತಾನೆ ಆದರೆ ಪ್ರತಿಯೊಂದೂ ಶಾಶ್ವತದ ಮಾರ್ಗವಾಗಿರುತ್ತದೆ. ಯಾಕಂದರೆ ಪ್ರತಿಯೊಂದು ಸಾಂತದಲ್ಲಿ ನಾವು ಸಂಶೋಧನೆಯನ್ನು ಮಾಡಬಹುದು ಮತ್ತು ಎಲ್ಲ ಸಂಗತಿಗಳು ಅವನ ರೂಪ ಮತ್ತು ಸಂಕೇತಗಳೆಂದು ಅವುಗಳ ಮೂಲಕ ನಾವು ಅನಂತದ ಬಳಿ ಸಾರಬಹುದು, ಎಲ್ಲ ವಿಶ್ವಶಕ್ತಿಗಳು ಆವಿರ್ಭಾವಗಳಾಗಿರುತ್ತವೆ, ಎಲ್ಲ ಶಕ್ತಿಗಳು ಆ ಏಕಮೇವನ ಶಕ್ತಿಗಳಾಗಿರುತ್ತವೆ. ವಿಶ್ವಪ್ರಕೃತಿಯ ಹಿಂದೆ ಕೆಲಸಮಾಡುತ್ತಿರುವ ದೇವತೆಗಳು ಏಕಮೇವ ಪರಮೇಶ್ವರನ (ದೇವತ್ವದ) ಶಕ್ತಿಗಳು, ನಾಮಗಳು ಮತ್ತು ವ್ಯಕ್ತಿತ್ವಗಳೆಂದು ತಿಳಿಯಲ್ಪಡಬೇಕು ಮತ್ತು ಪೂಜಿಸಲ್ಪಡಬೇಕು ಮತ್ತು ಅನಂತ ಪ್ರಜ್ಞಾಶಕ್ತಿಯು, ಕಾರ್ಯನಿರ್ವಾಹಕ ಶಕ್ತಿ, ದೈವೀ ಸಂಕಲ್ಪ ಅಥವಾ ಕಟ್ಟಳೆ, ಮಾಯಾ, ದೈವೀ ಪ್ರಕೃತಿ, ಶಕ್ತಿ ಅಥವಾ ದೈವೀಕ್ರಮ ಎಲ್ಲ ಘಟನೆಗಳ ಹಿಂದೆ ಇರುತ್ತದೆ. ಅದು ನಮಗೆ ಒಳ್ಳೆಯದು ಅಥವಾ ಕೆಟ್ಟದ್ದಾಗಿ, ಸ್ವೀಕಾರ ಯೋಗ್ಯ ಅಥವಾ ಯೊಗ್ಯವಲ್ಲದ್ದಾಗಿ, ಅದೃಷ್ಟ ಅಥವಾ ದುರದೃಷ್ಟವಾಗಿ ಕಾಣಬಹುದು. ಅನಂತವು ಸೃಷ್ಟಿ ಮಾಡುತ್ತದೆ. ಅದು ಬ್ರಹ್ಮ, ಅದು ರಕ್ಷಿಸುತ್ತದೆ. ಅದು ವಿಷ್ಣು, ಅದು ವಿನಾಶಗೊಳಿಸುತ್ತದೆ. ಅದು ರುದ್ರ ಅಥವಾ ಶಿವ, ಎತ್ತಿ ಹಿಡಿಯುವ ಮತ್ತು ರಕ್ಷಣೆಯ ಕಾರ್ಯದಲ್ಲಿ ಪರಾತ್ಪರ ಶಕ್ತಿಯು ಜಗದಂಬೆ, ಲಕ್ಷ್ಮಿ ಅಥವಾ ದುರ್ಗೆಯಾಗಿ ರೂಪ ತಾಳುತ್ತದೆ ಅಥವಾ ನಾಶದ ಮುಖವಾಡದಲ್ಲಿಯೂ ಸಹ ಆಶ್ರಯ ನೀಡುವ ಶಕ್ತಿ ಚಂಡಿ ಅಥವಾ ಕಪ್ಪು–ಮಾತೆ ಮಹಾಕಾಳಿ. ಏಕಮೇವ ಪರಮಾತ್ಮನು ತನ್ನ ಗುಣಗಳ ರೂಪದಲ್ಲಿ ಅನೇಕ ಹೆಸರುಗಳಿಂದ ಅನೇಕ ದೇವತೆಗಳಾಗಿ ಆವಿರ್ಭಾವಗೊಳ್ಳುತ್ತಾನೆ. ವೈಷ್ಣವರ ದೈವೀ ಪ್ರೇಮದ ದೇವರು, ಶಾಕ್ತರ ದೈವೀ ಶಕ್ತಿಯ ದೇವರು ಎರಡು ಭಿನ್ನ ಭಿನ್ನ ದೇವತೆಗಳಂತೆ ಕಾಣುತ್ತಾರೆ. ಆದರೆ ನಿಜಾರ್ಥದಲ್ಲಿ ಅವರು ಬೇರೆ ಬೇರೆ ಆಕಾರ ರೂಪುಗಳಲ್ಲಿರುವ ಅನಂತ ದೇವತೆಯಾಗಿದ್ದಾರೆ. ಯಾವೊಬ್ಬನು ಈ ನಾಮ–ರೂಪಗಳಲ್ಲಿ ಯಾವುದಾದರೊಂದರ ಮೂಲಕ ಜ್ಞಾನದಿಂದ ಅಥವಾ ಅಜ್ಞಾನದಲ್ಲಿ ಪರಾತ್ಪರನ ಸಮೀಪಕ್ಕೆ ಹೋಗಬಹುದು. ಯಾಕಂದರೆ ಅವುಗಳ ಮುಖಾಂತರ ಮತ್ತು ಅವುಗಳ ಆಚೆಗೆ ನಾವು ಕೊನೆಗೆ ಅತ್ಯಂತ ಶ್ರೇಷ್ಠವಾದ ಅನುಭವದತ್ತ ಸಾಗಬಹುದು.

ಭಾರತೀಯ ಧರ್ಮದ ಮೂಲಾಧಾರದಲ್ಲಿ ಅತ್ಯಂತ ಬಲಶಾಲಿಯಾದ ಮೂರನೆಯ ವಿಚಾರವು ಆಂತರಿಕ ಜೀವನಕ್ಕೆ ಅತ್ಯಂತ ಕ್ರಿಯಾಶೀಲವಾಗಿರುತ್ತದೆ. ವಿಶ್ವ ಪ್ರಜ್ಞೆಯ ಮುಖಾಂತರ, ಎಲ್ಲ ಆಂತರಿಕ ಮತ್ತು ಬಾಹ್ಯ ಪ್ರಕೃತಿಯನ್ನು



ಭೇದಿಸಿ ಒಳಹೋಗುವದರಿಂದ ಪರಾತ್ಪರನನ್ನು ಅಥವಾ ಭಗವಂತನನ್ನು ಸಂಧಿಸಬಹುದು. ಅದನ್ನು (ತತ್) ಅಥವಾ ಅವನನ್ನು (ಭಗವಂತನನ್ನು) ಪ್ರತಿಯೊಂದು ವೈಯಕ್ತಿಕ ಆತ್ಮವು ತನ್ನ ಸ್ವಂತದ ವೈಯಕ್ತಿಕ ಭಾಗದಲ್ಲಿ ಕಾಣಬಹುದು. ಯಾಕಂದರೆ ಏಕಮೇವ ದೈವ (ಭಗವತ್) ಅಸ್ತಿತ್ವದೊಂದಿಗೆ (ಭಗವಂತನೊಂದಿಗೆ) ಆತ್ಮೀಯವಾಗಿ ಒಂದಾಗಿರುವ ಅಥವಾ ಆತ್ಮೀಯವಾಗಿ ಸಂಬಂಧಿಸಿದ ಯಾವುದೋ ವಸ್ತು–ಸಂಗತಿ ಅಲ್ಲಿರುತ್ತದೆ. ಭಾರತೀಯ ಧರ್ಮದ ಸಾರಸತ್ವವು (ಆಧ್ಯಾತ್ಮಿಕ ಅಸ್ತಿತ್ವವು) ಹಾಗೆ ಬೆಳೆಯುವ ಮತ್ತು ಹಾಗೆ ಜೀವಿಸುವದನ್ನು ತನ್ನ ಗುರಿಯಾಗಿ ಇಟ್ಟುಕೊಳ್ಳುವದಾಗಿದೆ. ಅದರಿಂದಾಗಿ ನಮ್ಮ ಮನ ಮತ್ತು ಜೀವನಗಳನ್ನು ಮುಸುಕಿರುವ ಸ್ವಜ್ಞಾನವನ್ನು ಆವರಿಸಿರುವ ಅಜ್ಞಾನದ ಹೊರಗೆ ಬರುವಂತಾಗಬೇಕು ಮತ್ತು ನಮ್ಮೊಳಗಿನ ದೈವತ್ವದ ಜಾಗೃತಿ ನಮ್ಮಲ್ಲಿ ಉಂಟಾಗುವಂತೆ ನಾವು ಬೆಳೆಯಬೇಕು. ಈ ಮೂರು ಸಂಗತಿಗಳು ಒಂದಾಗಿರುವದೇ (ಮುಪ್ಪುರಿಗೊಳ್ಳುವದು) ಸಮಗ್ರ ಹಿಂದು ಧರ್ಮವಾಗಿರುತ್ತದೆ. ಅದರ ಸಾರಸತ್ವವಾಗಿದೆ ಮತ್ತು ಯಾವುದೇ ಧರ್ಮ ಸೂತ್ರವೆಂದು ಇರುವುದಾದರೆ ಇದುವೇ ಅದರ ಧರ್ಮ ಸೂತ್ರವಾಗಿರುತ್ತದೆ.

**CWSA 20: 193-95**

*

**ಮನುಷ್ಯ ಜೀವನದ ನಾಲ್ಕು ಅವಶ್ಯಕತೆಗಳು**

ಭಾರತೀಯ ಧರ್ಮವು ಮಾನವಜೀವನದ ಎದುರಿಗೆ ನಾಲ್ಕು ಆವಶ್ಯಕತೆಗಳನ್ನು ಇರಿಸಿದೆ. ಮೊದಲನೆಯದಾಗಿ ಅದು ಮನಸ್ಸಿನ ಮೇಲೆ ಒಂದು ಅತ್ಯುನ್ನತವಾದ ಪ್ರಜ್ಞೆಯಲ್ಲಿ ಅಥವಾ ವಿಶ್ವ ಮತ್ತು ವಿಶ್ವಾತೀತ ಸ್ಥಿತಿಯಲ್ಲಿ ನಂಬುಗೆಯಿಡುವಂತೆ ಒತ್ತಡ ಹೇರುತ್ತದೆ. ಅದರಿಂದಲೇ ಎಲ್ಲವೂ ಬರುತ್ತದೆ, ಅದರಲ್ಲಿ ಎಲ್ಲವೂ ವಾಸಿಸುತ್ತದೆ ಮತ್ತು ತನಗರಿಯದಂತೆ ಚಲಿಸುತ್ತದೆ. ಅದರಿಂದ ಒಂದು ದಿನ ಎಲ್ಲವೂ ಎಚ್ಚರಗೊಳ್ಳುತ್ತದೆ, ಪರಿಪೂರ್ಣ, ಶಾಶ್ವತ ಮತ್ತು ಅನಂತವಾದ ಅದರ (ತತ್) ಕಡೆಗೆ ಮರಳುತ್ತದೆ. ತದನಂತರ ಅದು ವೈಯಕ್ತಿಕ ಜೀವನದ ಮೇಲೆ, ಅಭಿವೃದ್ಧಿ ಮತ್ತು ಅನುಭವಗಳಿಂದ ಮನುಷ್ಯನು ಈ ಮಹತ್ತರ ಅಸ್ತಿತ್ವದ ಸತ್ಯದಲ್ಲಿ ಪ್ರಜ್ಞಾಪೂರ್ವಕವಾಗಿ ಬೆಳೆಯಲು ತಯಾರಾಗುವವರೆಗಿನ ಸ್ವಂತದ ತಯಾರಿಯ ಮೇಲೆ ಒತ್ತುಕೊಡುತ್ತದೆ. ಮೂರನೆಯದಾಗಿ, ಅದು (ಧರ್ಮವು) ಅದಕ್ಕೆ (ತಯಾರಿಗೆ) ಸೂಕ್ತವಾಗಿ ಮೂಲಾಧಾರವಿರುವ, ಚೆನ್ನಾಗಿ

ಪರಿಶೋಧಿಸಿದ, ಅನೇಕ ಕೊಂಬೆ–ರೆಂಬೆಗಳಿರುವ ಮತ್ತು ಯಾವಾಗಲೂ ವಿಸ್ತಾರಗೊಳ್ಳುವ ಜ್ಞಾನದ, ಆಧ್ಯಾತ್ಮಿಕತೆಯ ಅಥವಾ ಧಾರ್ಮಿಕ ಶಿಸ್ತನ್ನು (ನಿಯಮ ಪಾಲನೆ) ಒದಗಿಸಿದೆ. ಕೊನೆಯದಾಗಿ, ಈ ಉಚ್ಚತರ ಶ್ರೇಣಿಗೆ (ಹಂತಕ್ಕೆ) ಯಾರು ಇನ್ನೂ ತಯಾರಾಗಿಲ್ಲವೊ ಅಂಥವರಿಗೆ ಅದು ವೈಯಕ್ತಿಕ ಮತ್ತು ಸಾಮೂಹಿಕ ಜೀವನದ ಒಂದು ವ್ಯವಸ್ಥೆಯನ್ನು, ವೈಯಕ್ತಿಕ ಮತ್ತು ಸಾಮಾಜಿಕ ಶಿಸ್ತಿನ ಒಂದು ಚೌಕಟ್ಟನ್ನು ಮತ್ತು ಭೌತಿಕ ಮತ್ತು ನೈತಿಕ ಮತ್ತು ಪ್ರಾಣಿಕ ಬೆಳವಣಿಗೆಯನ್ನು ಒದಗಿಸಿತು. ಅದರಿಂದಾಗಿ ಪ್ರತಿಯೊಬ್ಬರು ತನ್ನ ಇತಿಮಿತಿಗಳಲ್ಲಿ ಮತ್ತು ತನ್ನ ಸ್ವಂತದ ಸ್ವಭಾವ (ಪ್ರಕೃತಿ) ದಂತೆ ಕೊನೆಗೆ ಈ ಮಹತ್ತರವಾದ ಅಸ್ತಿತ್ವಕ್ಕಾಗಿ ಅವರು ತಯಾರಾಗುವಂತೆ ಚಲಿಸಬಲ್ಲರು. ಇವುಗಳ ಪೈಕಿ ಮೊದಲಿನ ಮೂರು ಸಂಗತಿಗಳು ಯಾವುದೇ ಧರ್ಮಕ್ಕೆ ಅತ್ಯಂತ ಮಹತ್ವದವುಗಳಾಗಿರುತ್ತವೆ. ಆದರೆ ಹಿಂದುತ್ವವು (Hinduism) ಕೊನೆಯದಕ್ಕೆ ಹಾಗೂ ಅತ್ಯಂತ ಮಹತ್ವವಾದುದಕ್ಕೆ ಸೇರುತ್ತದೆ.

ಅದು ಲೌಕಿಕವೆಂದು ಮತ್ತು ಧಾರ್ಮಿಕ ಮತ್ತು ಆಧ್ಯಾತ್ಮಿಕ ಜೀವನಕ್ಕೆ ಹೊರತಾದುದೆಂದು ಜೀವನದ ಯಾವುದೇ ಭಾಗವನ್ನು ಬಿಟ್ಟಿಲ್ಲ (ನಿರಾಕರಿಸಿಲ್ಲ).

**CWSA 20: 181**

*

**ಮನುಷ್ಯನ ನಾಲ್ಕು ಆಸಕ್ತಿಗಳು**

ಭಾರತದ ಪ್ರಾಚೀನ ಸಂಸ್ಕೃತಿಯು ಮನುಷ್ಯನ ನಾಲ್ಕು ಆಸಕ್ತಿಗಳ ಮೇಲೆ ಕಟ್ಟಲಾಗಿದೆ; ಮೊದಲನೆಯದು ಅಪೇಕ್ಷೆ ಮತ್ತು ಸುಖೋಪಭೋಗ, ನಂತರ ಮನಸ್ಸು ಮತ್ತು ಶರೀರಗಳ ಭೌತಿಕ, ಆರ್ಥಿಕ, ಬೇರೆ ಗುರಿಗಳು ಮತ್ತು ಆವಶ್ಯಕತೆಗಳು, ಮೂರನೆಯದಾಗಿ ನೈತಿಕ ನಡೆಗಳು ಮತ್ತು ವ್ಯಕ್ತಿಗತ ಮತ್ತು ಸಾಮಾಜಿಕ ಜೀವನದ ಯೋಗ್ಯ ಸರಿಯಾದ ನಿಯಮ (ಕಟ್ಟಳೆ), ಕೊನೆಯದಾಗಿ ಆಧ್ಯಾತ್ಮಿಕ ಮುಕ್ತಿ; ಕರ್ಮ, ಅರ್ಥ, ಧರ್ಮ, ಮೋಕ್ಷ, ಮನುಷ್ಯನಲ್ಲಿರುವ ಈ ಸಂಗತಿಗಳಿಗೆ ಮಾರ್ಗದರ್ಶನ ಮಾಡುವದು ಮತ್ತು ಸಮರ್ಥನೆಯನ್ನು ನೀಡುವದು ಮತ್ತು ಅವುಗಳ ರೂಪ ಮತ್ತು ಉದ್ದಿಷ್ಯಗಳಲ್ಲಿ ಸಾಮರಸ್ಯವನ್ನು ತರುವುದು ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆಗಳ ಕೆಲಸವಾಗಿತ್ತು. ಕೆಲವು ಅತ್ಯಂತ ವಿರಳವಾದ ಸಂದರ್ಭಗಳನ್ನು ಹೊರತುಪಡಿಸಿ ಈ ಮೂರರ ತೃಪ್ತಿಯು ಉಳಿದವುಗಳಿಗಿಂತ ಮುಂಚೆ ಬರಬೇಕು; ಜೀವನದ ಪೂರ್ಣತೆಯು ಜೀವನದ



ಉಳಿದೆಲ್ಲವುಗಳಿಗಿಂತ ಮೊದಲನೆಯದಾಗತಕ್ಕದ್ದು. ಕುಟುಂಬದ, ಸಮುದಾಯದ ಮತ್ತು ದೇವತೆಗಳ ಋಣವು ಕಾಟಾಚಾರದ್ದಾಗಬಾರದು. ಅದರಾಚೆಗೆ ಸ್ವರ್ಗದ ವೈಭವ ಅಥವಾ ಕೇವಲದ ಪರಮ ಶಾಂತಿ ಇದ್ದರೂ ಸಹ ಭೂಮಿಗೆ ತನ್ನ ಆಟಕ್ಕೆ (ಲೀಲೆಗೆ) ಸಂಬಂಧಿಸಿದ ಋಣ ಇರತಕ್ಕದ್ದು. ಸಾಮಾನ್ಯವಾಗಿ ಗುಹೆಗಳಿಗೆ ಮತ್ತು ಋಷ್ಯಾಶ್ರಮ ಇಲ್ಲವೆ ಸನ್ಯಾಸಿ ಮಠಕ್ಕೆ ಓಡಿಹೋಗುವದನ್ನು ಉಪದೇಶಿಸ–(ಹೇಳ)ಲಾಗಿಲ್ಲ.

**CWSA 20: 125-26**

*

**ಸಮಾಜದ ಚತುರ್ವಿಧ ಶಾಸನ(ಕಟ್ಟಳೆ)ಗಳು**

ಪ್ರಾಚೀನ ಚಾತುರ್ವರ್ಣವನ್ನು ಅದರ ಇತ್ತೀಚಿನ ಅವನತಿ ಮತ್ತು ಕೀಳ್ತರದ ಅರ್ಥವಿಲ್ಲದ ವಿಡಂಬನಗಳಿಂದ, ಜಾತಿ ಪದ್ಧತಿಯಿಂದ ನಿರ್ಣಯಿಸತಕ್ಕದ್ದಲ್ಲ. ಅದು ಉಳಿದ ಸಂಸ್ಕೃತಿಗಳಲ್ಲಿಯಂತೆ ಪೌರೋಹಿತ್ಯ, ಗೌರವ ಅಂತಸ್ತು (ಶ್ರೀಮಂತ ಪದವಿ), ವಾಣಿಜ್ಯ ಸಮುದಾಯ ಮತ್ತು ಗುಲಾಮ(ಜೀತದಾಳು) ಅಥವಾ ಕೆಲಸಗಾರರು ಎಂಬ ನಿಖರವಾದ ಜಾತಿಪದ್ಧತಿ ಆಗಿರಲಿಲ್ಲ. ಹೊರನೋಟಕ್ಕೆ ಅದರ ಆರಂಭಿಕ ಬಿಂದುವು ಅದೇ ಆಗಿತ್ತು. ಆದರೆ ಅದಕ್ಕೆ ಅತ್ಯಂತ ಬೇರೆಯೇ ಆದ ಅಪೌರುಷೀಯ ಮಹತ್ವವನ್ನು ಕೊಡಲಾಗಿತ್ತು. ಪ್ರಾಚೀನ ಭಾರತದ ವಿಚಾರದ ಪ್ರಕಾರ ಮನುಷ್ಯನು ತನ್ನ ಸ್ವಭಾವದಿಂದ (ಪ್ರಕೃತಿ ಗುಣದಿಂದ) ನಾಲ್ಕು ವಿಧಗಳಲ್ಲಿ ಕಾಣುತ್ತಾನೆ. ಮೊದಲನೆಯದಾದ ಮತ್ತು ಸರ್ವೋಚ್ಚವಾದುದು ವಿದ್ಯೆ ಮತ್ತು ವಿಚಾರ ಮತ್ತು ಜ್ಞಾನಗಳನ್ನು ಹೊಂದಿದವನು; ನಂತರ, ಬಲಶಾಲಿ ಮತ್ತು ಕಾರ್ಯಧುರಂಧರ, ಆಳುವವ, ಯೋದ್ಧ, ಮುಖಂಡ, ಆಡಳಿತಗಾರ; ಮೂರನೆಯವನು ಆರ್ಥಿಕ ಮನುಷ್ಯ, ನಿರ್ಮಾಪಕ ಮತ್ತು ಹಣ ಸಂಪಾದಿಸುವವ, ವೈಶ್ಯ (ವ್ಯಾಪಾರಿ), ಶಿಲ್ಪಿ, ಕೃಷಿಕ; ದೀಕ್ಷೆ ಅಥವಾ ಉಪದೇಶವನ್ನು ಪಡೆದವರು ದ್ವಿಜರು – ಬ್ರಾಹ್ಮಣ, ಕ್ಷತ್ರಿಯ, ವೈಶ್ಯ. ಕೊನೆಗೆ ಬರುವದು ಅಭಿವೃದ್ಧಿ ಹೊಂದದ ಮಾನವ ಪ್ರಕಾರ (ನಮೂನೆ), ಮೇಲ್ಕಾಣಿಸಿದ ಅಳತೆಗಳಿಗೆ ಅವರು ಇನ್ನೂ ಯೋಗ್ಯರಾಗಿರಲಿಲ್ಲ, ಬುದ್ಧಿವಂತರಲ್ಲ, ನಿರ್ಮಾಣಕ್ಕೆ ಇಲ್ಲವೆ ಬೌದ್ಧಿಕ ಉತ್ಥಾನೆಗೆ ಬಲವಿಲ್ಲದವರು. ಕೌಶಲ್ಯರಹಿತ ಕೆಲಸಗಳಿಗೆ ಮತ್ತು ಕೀಳ್ತರದ ಸೇವೆಗೆ(ಕೆಲಸಕ್ಕೆ) ಯೋಗ್ಯನಾದ ಮನುಷ್ಯ ಶೂದ್ರ, ಸಮಾಜದ ಆರ್ಥಿಕ ಸ್ಥಿತಿಯು ಈ ನಾಲ್ಕು ಪ್ರಕಾರಗಳಲ್ಲಿ, ನಾಲ್ಕು ಅಂತಸ್ತುಗಳಲ್ಲಿ

ವಿಂಗಡಿಸಲ್ಪಡಲಾಯಿತು. ಬ್ರಾಹ್ಮಣ ವರ್ಗವನ್ನು ಸಮುದಾಯಕ್ಕೆ ಪುರೋಹಿತರನ್ನು, ವಿಚಾರವಾದಿಗಳನ್ನು, ನ್ಯಾಯಶಾಸ್ತ್ರ ಪಂಡಿತರನ್ನು, ಚತುರಮತಿಗಳನ್ನು, ಧಾರ್ಮಿಕ ಮುಖಂಡರನ್ನು ಮತ್ತು ಮಾರ್ಗದರ್ಶಕರನ್ನು ಕೊಡುವಂತೆ ಕೇಳಿಕೊಳ್ಳಲಾಯಿತು. ಕ್ಷತ್ರಿಯ ವರ್ಗವು ತನ್ನ ರಾಜರನ್ನು, ಯೋಧರನ್ನು, ಗವ್ಹರ್ನರುಗಳನ್ನು ಮತ್ತು ಆಡಳಿತಗಾರರನ್ನು ಕೊಟ್ಟಿತು. ವೈಶ್ಯ ವರ್ಗವು ಸಮುದಾಯಕ್ಕೆ ತನ್ನ ನಿರ್ಮಾಪಕರನ್ನು, ಕೃಷಿಕರನ್ನು, ಕೈಗಾರಿಕೆಯವರನ್ನು, ಶಿಲ್ಪಿಗಳನ್ನು, ವಾಣಿಜ್ಯ–ವ್ಯಾಪಾರಿಗಳನ್ನು ಕೊಟ್ಟು ಪೂರೈಸಿತು. ಶೂದ್ರ ವರ್ಗವು ಅವರ (ಸಮುದಾಯದ) ಕೆಳದರ್ಜೆಯ ಕೆಲಸದ ಆಳುಗಳನ್ನು ಮತ್ತು ಸೇವಕರನ್ನು ಪೂರೈಸಿ ಸಹಾಯ ಮಾಡಿತು. ಇದು ಹಾಗೆಯೆ ನಡೆಯಿತು. ಅದರ ಅಸಾಮಾನ್ಯವಾದ ಬಹುಕಾಲದ ಬಾಳಿಕೆ ಮತ್ತು ಬಹುಶಃ ಧರ್ಮಕ್ಕೆ, ವಿಚಾರಕ್ಕೆ ಮತ್ತು ವಿದ್ಯೆಗೆ ಅತಿ ಶ್ರೇಷ್ಠವಾದ ಸ್ಥಾನವನ್ನು ಕೊಟ್ಟದ್ದು ಶ್ರೇಣಿಯ ಮೇಲ್ವರ್ಗದವರಷ್ಟೆ ಅಲ್ಲ – ಯಾಕಂದರೆ ಬೇರೆ ಒಂದೆರಡು ಸಂಸ್ಕೃತಿಗಳಲ್ಲಿ ಅದನ್ನು ಕಾಣಬಹುದು – ಆದರೆ ಉನ್ನತ ಅಧಿಕಾರದಿಂದಲೂ ಕೊಡಲ್ಪಟ್ಟದ್ದನ್ನು ಹೊರತುಪಡಿಸಿ ಈ ಪದ್ಧತಿಯಲ್ಲಿ ಯಾವ ವಿಶೇಷತೆ ಇರಲಿಲ್ಲ. ಭಾರತೀಯ ಪರಿಶುದ್ಧವಾದ ವಿಚಾರವು ಮನುಷ್ಯನ ಸ್ಥಾನಮಾನವನ್ನು ಅವನ ಜನ್ಮದಿಂದ ಅಲ್ಲ, ಆದರೆ ಅವನ ಸಾಮರ್ಥ್ಯ ಮತ್ತು ಆಂತರಿಕ ಸ್ವಭಾವಗಳಿಗೆ ಅನುಗುಣವಾಗಿ ನಿರ್ಧರಿಸಿದೆ. ಈ ನಿಯಮವನ್ನು ಯಥಾರ್ಥವಾಗಿ ನಿರೀಕ್ಷಿಸಿದರೆ ಅದು ಭಿನ್ನವಾದದ್ದಾಗಿರುವ ಒಂದು ವಿಶಿಷ್ಟ ರೀತಿಯ ಮೇಲ್ಮೈ(ಶ್ರೇಷ್ಠತೆ)ಯ ಚಿಹ್ನೆಯನ್ನು ಕಾಣಬಹುದು. ಆದರೂ ಅತ್ಯುತ್ತಮ ಸಮಾಜವು ಯಾವಾಗಲೂ ಒಂದು ಬಗೆಯಿಂದ ಯಾಂತ್ರಿಕವಾಗಿರುತ್ತದೆ; ಅದು ಭೌತಿಕ ಚಿಹ್ನೆ ಮತ್ತು ಆದರ್ಶಗಳ ಕಡೆಗೆ ಚಲಿಸುತ್ತದೆ ಮತ್ತು ಅಂದಿನ ಕಾಲದಲ್ಲಿ ಸುಂದರವಾದ ಮಾನಸಶಾಸ್ತ್ರೀಯ ಆಧಾರದ ಮೇಲೆ ನಿಜವಾಗಿ ಸಾಮಾಜಿಕ ಅನುಶಾಸನವನ್ನು ಸ್ಥಾಪಿಸುವದು ಕಷ್ಟದಾಯಕವಾದ ಮತ್ತು ನಿರರ್ಥಕವಾದ ಪ್ರಯತ್ನವಾಗಿತ್ತು. ರೂಢಿಯಲ್ಲಿ ನಮಗೆ ಕಂಡುಬರುವದೇನಂದರೆ ಜನನಕ್ಕೆ ವರ್ಣಾಶ್ರಮ ತಳಹದಿಯಾಯಿತು. ಈ ಸಾಮಾಜಿಕ ರಚನೆಯನ್ನು ಬೇರೆ ತೆರನಾಗಿ ಮತ್ತು ತನ್ನ ರೀತಿಯಲ್ಲಿ ಏಕಮಾತ್ರವಾಗಿ ಮಾಡುವ ಬಲಶಾಲಿಯಾದ ವ್ಯತ್ಯಾಸದ ಚಿಹ್ನೆಯನ್ನು ನಾವು ಬೇರೆಡೆಗೆ ನಿರೀಕ್ಷಿಸಬಹುದು.

**CWSA 20: 170-71**

*



## ಸರ್ವೋಚ್ಚ ಸತ್ಯವು ಮಾತ್ರ ಮೊದಲ ದರ್ಜೆಯ ಮಹತ್ವವಾಗಿರುತ್ತದೆ

ಭಾರತೀಯ ಧರ್ಮವು, ಸರ್ವೋಚ್ಚ ಸತ್ಯವು ಕೇಂದ್ರೀಯ ಮಹತ್ವದ ಒಂದು ಸಂಗತಿ ಎಂಬ ಬಗ್ಗೆ ಬೌದ್ಧಿಕ ಅಥವಾ ದೇವತಾಶಾಸ್ತ್ರದ ಭಾವವನ್ನು (ಕಲ್ಪನೆಯನ್ನು) ಎಂದೂ ಕೊಟ್ಟಿರಲಿಲ್ಲ. ಯಾವುದೇ ಕಲ್ಪನೆ ಅಥವಾ ಯಾವುದೇ ರೂಪದ ಕೆಳಗೆ ಅದನ್ನು (ಸರ್ವೋಚ್ಚ ಸತ್ಯವನ್ನು) ಅನುಸಂಧಾನ ಮಾಡುವದು, ಆಂತರಿಕ ಅನುಭವಗಳಿಂದ ಅದನ್ನು ಪಡೆಯುವದು, ಪ್ರಜ್ಞಾಪೂರ್ವಕವಾಗಿ ಅದರಲ್ಲಿ ವಾಸಿಸುವದು – ಇದು ಪ್ರಮುಖ ಆವಶ್ಯಕ ಸಂಗತಿಯೆಂದು ಅದು ಎತ್ತಿ ತೋರಿಸುತ್ತದೆ. ಒಂದು ಮತ ಅಥವಾ ಪಂಥವು ಮನುಷ್ಯನ ನಿಜವಾದ ಆತ್ಮವು ಅವಿಚ್ಛಿನ್ನವಾಗಿ ವಿಶ್ವಾತ್ಮದೊಂದಿಗೆ ಅಥವಾ ಸರ್ವೋಚ್ಚ ಆತ್ಮದೊಂದಿಗೆ ಒಂದಾಗಿರುತ್ತದೆ ಎಂದು ಯೋಚಿಸಿರಬಹುದು. ಬೇರೊಂದು (ಪಂಥವು) ಮೂಲದಲ್ಲಿ ಮನುಷ್ಯನು ಭಗವಂತನೊಂದಿಗೆ ಒಂದಾಗಿದ್ದಾನೆ, ಆದರೆ ವಿಶ್ವ ಪ್ರಕೃತಿಯಲ್ಲಿ ಅವನಿಂದ ಬೇರೆಯಾಗಿದ್ದಾನೆ ಎಂದು ವಾಸಿಸುವದು ಮೂರನೆಯದು ದೇವರು, ಪ್ರಕೃತಿ ಮತ್ತು ಮನುಷ್ಯನಲ್ಲಿಯ ವೈಯಕ್ತಿಕ ಆತ್ಮ ಇವು ಸತ್ತೆಯ ಶಾಶ್ವತವಾಗಿ ಬೇರೆ ಬೇರೆಯಾದ ಶಕ್ತಿಗಳಾಗಿರುತ್ತವೆಂದು ತಿಳಿಯುತ್ತದೆ. ಆದರೆ ಆತ್ಮದ ಎಲ್ಲ ಸತ್ಯವು ಸರಿಸಮಾನವಾದ ಶಕ್ತಿಯನ್ನು ಒಳಗೊಂಡಿರುತ್ತದೆ; ಭಾರತೀಯ ದ್ವೈತಮತದವರಿಗೂ ಕೂಡ ದೇವರು ಸರ್ವೋಚ್ಚ ಆತ್ಮ ಮತ್ತು ಸತ್ಯ ಆಗಿದ್ದಾನೆ. ಅವನಲ್ಲಿಯೇ ಮತ್ತು ಅವನಿಂದಲೇ ಪ್ರಕೃತಿ ಮತ್ತು ಮನುಷ್ಯ ಜೀವಿಸುತ್ತಾರೆ, ಚಲಿಸುತ್ತಾರೆ ಮತ್ತು ಅವರ ಸತ್ತೆಯನ್ನು ಹೊಂದುತ್ತಾರೆ (ಪಡೆಯುತ್ತಾರೆ) ಮತ್ತು ನೀವು ದೇವರನ್ನು ಅವನ ವಸ್ತು–ಸಂಗತಿಗಳ ನೋಟದಿಂದ ತೆಗೆದು ಹಾಕಿದಿರಾದರೆ ಪ್ರಕೃತಿ ಮತ್ತು ಮನುಷ್ಯ ಅವನಿಗಾಗಿ ಅವೆಲ್ಲವುಗಳ ಅರ್ಥ ಮತ್ತು ಮಹತ್ವಗಳನ್ನು ಕಳೆದುಕೊಳ್ಳಬಹುದಾಗಿದೆ. ಆತ್ಮ, ವಿಶ್ವಪ್ರಕೃತಿ (ಅವನ್ನು ಮಾಯೆ, ಪ್ರಕೃತಿ ಅಥವಾ ಶಕ್ತಿಯೆಂದು ಯಾವುದೇ ಹೆಸರಿನಿಂದ ಕರೆಯಬಹುದು) ಮತ್ತು ಜೀವಂತ ಪ್ರಾಣಿಗಳಲ್ಲಿಯ ಆತ್ಮ–ಜೀವ (ಜೀವಾತ್ಮ) ಮೂರು ಸತ್ಯಗಳಾಗಿರುತ್ತವೆ. ಅವು ಅನೇಕ ಧಾರ್ಮಿಕ ಪಂಥಗಳಿಂದ ಮತ್ತು ಭಾರತದ ಘರ್ಷಣೆಗಿಳಿಯುವ(ಹೋರಾಡುವ) ಧಾರ್ಮಿಕ ತತ್ವಜ್ಞಾನಗಳಿಂದ ಜಾಗತಿಕವಾಗಿ ಒಪ್ಪಲಾಗಿವೆ. ವಿಶ್ವಾತ್ಮವೂ ಕೂಡ ಮನುಷ್ಯನಲ್ಲಿರುವ ಆಂತರಿಕ ಆಧ್ಯಾತ್ಮಿಕ ಆತ್ಮದ ಶೋಧ, ಅವನಲ್ಲಿರುವ ದೈವೀ

ಆತ್ಮ ಮತ್ತು ಒಂದು ಬಗೆಯ ಜೀವಂತ ಮತ್ತು ಏಕತೆಯನ್ನು ಹೊಂದುವ ಸಂಬಂಧ ಅಥವಾ ಮನುಷ್ಯನಲ್ಲಿರುವ ಆತ್ಮವು ದೇವರೊಂದಿಗೆ ಅಥವಾ ಸರ್ವೋಚ್ಚ ಆತ್ಮದೊಂದಿಗೆ ಅಥವಾ ಶಾಶ್ವತ ಬ್ರಹ್ಮನೊಂದಿಗೆ ಸಂಪೂರ್ಣ ಐಕ್ಯ ಹೊಂದುವದು ಆಧ್ಯಾತ್ಮಿಕ ಪರಿಪೂರ್ಣತೆಯ ಸ್ಥಿತಿಯಾಗಿದೆ. ಯೋಚಿಸುವದು (ಚಿಂತಿಸುವದು) ಮತ್ತು ಭಗವಂತನನ್ನು ವ್ಯಕ್ತಿ ಸ್ವರೂಪವಲ್ಲದ (ಅವ್ಯೆಯಕ್ತಿಕ) ಕೇವಲ ಮತ್ತು ಅನಂತ ಎಂಬ ಅನುಭವ ಪಡೆಯುವದು ಅಥವಾ ಬಳಿ ಸಾರುವದು ಮತ್ತು ಅವನು ವಿಶ್ವಾತೀತನು ಮತ್ತು ವಿಶ್ವವ್ಯಾಪಿ ಅನಂತ ಪುರುಷನು ಎಂಬುದನ್ನು ಅರಿಯುವದು ಮತ್ತು ಹಾಗೆ ಅನುಭವಿಸುವದು ನಮಗೆ ಬಿಟ್ಟುಕೊಡಲಾಗಿದೆ. ಅವನನ್ನು ತಲುಪುವ ನಮ್ಮ ದಾರಿ ಯಾವುದೇ ಆಗಿರಲಿ, ಆಧ್ಯಾತ್ಮಿಕ ಅನುಭವದ ಒಂದು ಮಹತ್ವದ ಸಂಗತಿ ಏನಂದರೆ ಅವನು ಎಲ್ಲ ಅಸ್ತಿತ್ವದ ಹೃದಯದಲ್ಲಿ ಮತ್ತು ಕೇಂದ್ರದಲ್ಲಿ ಇದ್ದಾನೆ ಮತ್ತು ಎಲ್ಲ ಅಸ್ತಿತ್ವ(ವಿಶ್ವ)ವು ಅವನಲ್ಲಿ ಇರುತ್ತದೆ ಮತ್ತು ಅವನನ್ನು ಶೋಧಿಸುವದೆಂದರೆ ಮಹತ್ತರವಾದ ಆತ್ಮಶೋಧವಾಗಿದೆ. ಮತೀಯ ಭಿನ್ನಾಭಿಪ್ರಾಯಗಳು ಎಲ್ಲಲ್ಲಿ, ಎಲ್ಲವುಗಳಲ್ಲಿ ಆ ಏಕಮೇವ ಆತ್ಮವನ್ನು ಮತ್ತು ದೇವನನ್ನು ಕಾಣುವ ಅನೇಕ ಮಾರ್ಗಗಳಲ್ಲದೆ ಬೇರೆ ಏನೂ ಅಲ್ಲ. ಆತ್ಮ ಸಾಕ್ಷಾತ್ಕಾರವು ಆವಶ್ಯಕವಾದ ಸಂಗತಿಯಾಗಿದೆ. ಆಂತರ್ಯದಲ್ಲಿರುವ ಆತ್ಮಕ್ಕೆ ನಮ್ಮನ್ನು ನಾವು ತೆರೆದಿಟ್ಟುಕೊಳ್ಳುವದು, ಅನಂತದಲ್ಲಿ ಜೀವಿಸುವದು, ಶಾಶ್ವತವನ್ನು ಶೋಧಿಸುವದು ಮತ್ತು ದೇವನೊಂದಿಗೆ ಐಕ್ಯವನ್ನು ಸಾಧಿಸುವದು – ಅದು ಧರ್ಮದ ಸಾಮಾನ್ಯ ವಿಚಾರ ಮತ್ತು ಗುರಿಯಾಗಿದೆ; ಅದು ಆಧ್ಯಾತ್ಮಿಕ ಮುಕ್ತಿಯ ಭಾವ(ಅನುಭವ)ವಾಗಿದೆ. ಈಡೇರಿಸುವ ಮತ್ತು ಬಿಡುಗಡೆಗೊಳಿಸುವ ಮಹಾಸತ್ಯವು ಅದಾಗಿದೆ. ಅತ್ಯುನ್ನತ ಆಧ್ಯಾತ್ಮಿಕ ಸತ್ಯ ಮತ್ತು ಮಹೋನ್ನತ ಆಧ್ಯಾತ್ಮಿಕ ಗುರಿಗಳನ್ನು ಕ್ರಿಯಾಶಕ್ತಿಯಿಂದೊಡಗೂಡಿ ಅನುಸರಣೆ ಮಾಡುವದು ಭಾರತೀಯ ಧರ್ಮದ, ಅದರ ಹಿಂದಿನ ಸಾವಿರಾರು ರೂಪಗಳನ್ನು, ಅದರ ಒಂದು ಸಾಮಾನ್ಯವಾದ ಸತ್‌ನ್ನು(ಮೂಲಸತ್ವವನ್ನು) ಒಂದುಗೂಡಿಸುವ ಬಂಧವಾಗಿರುತ್ತದೆ.

**CWSA 20: 183-84** – ಶ್ರೀ ಅರವಿಂದರು

*



# ಸನಾತನ ಧರ್ಮ ಮತ್ತು ಮಾನವೀಯತೆ

## ಹಿಂದೂ ಪರಿಕಲ್ಪನೆಯಲ್ಲಿ ಮಾನವನ ಅಸ್ತಿತ್ವ

ನಮ್ಮ ಶಾಸ್ತ್ರಗಳು ಯಾವಾಗಲೂ ಮನುಜನನ್ನು ಮತ್ತು ಓರ್ವ ದೈವೀಶಕ್ತಿಯನ್ನು ಸಮ–ಸಮಾನವಾಗಿ, ದೈವೀಶಕ್ತಿಯನ್ನಾಗಿಯೇ ಮತ್ತು ವಿಶ್ವಾತ್ಮದ ಹಂತದ–ಪುರುಷ – ಎಂದೇ ಗುರುತಿಸಿದೆ. ಈ ಮೂಲಕ ಮಾನವೀಯತೆಯು ಯಾವಾಗಲೂ ದೇವರ ಸಂಗಡವೇ ಏಕೀಭವಿಸಿರುತ್ತದೆ ಎನ್ನುವ ವಿಷಯದ ಪ್ರತಿಪಾದನೆಗೆ ಹೆಚ್ಚು ಒತ್ತು ಕೊಟ್ಟಿದೆ. ನರ ಮತ್ತು ನಾರಾಯಣ ಇವರು ಶಾಶ್ವತ–ಜೋಡಿಯಾಗಿದ್ದರೂ, ಅವರಿಬ್ಬರೂ ಬೇರೆ ಬೇರೆ ಎನ್ನುವ ಹಂತವಿದ್ದರೂ ಸಹಿತ, ಅವರಿಬ್ಬರೂ ಒಂದು, ಶಾಶ್ವತವಾಗಿ ಅವರಿಬ್ಬರೂ ಭಿನ್ನ, ಶಾಶ್ವತವಾಗಿ ಸಮಾನವಾಗಿದ್ದಾರೆ. ಪಂಡಿತರಿಂದ ವ್ಯಾಖ್ಯಾನಿಸಲ್ಪಟ್ಟಿರುವ ನಾರಾಯಣನು ಜಲತತ್ತ್ವಗಳಲ್ಲಿ ನೆಲೆಸಿರುವನು, ಆದರೆ, ನನ್ನ ಆಲೋಚನೆಯ ಪ್ರಕಾರ, ನಾರಾಯಣ ಎಂದರೆ ಮಾನವೀಯತೆಯ ಸಾರ – ಮತ್ತು ಸರ್ವಸ್ವವಾಗಿದೆ. ಎಲ್ಲೆಲ್ಲಿ ನರನ ಅಸ್ತಿತ್ವ ಇರುತ್ತದೆಯೋ ಅಲ್ಲೆಲ್ಲ ನಾರಾಯಣನೂ ಇದ್ದೆ ಇರುತ್ತಾನೆ; ಈ ದ್ವೈತವನ್ನು ವಿಭಜಿಸಲು ಸಾಧ್ಯವೇ ಇಲ್ಲ. ಇದೇ ವಿಚಾರದಲ್ಲಿ ನಾನು ಕೆಲವೊಮ್ಮೆ ಆಲೋಚಿಸುವದೇನೆಂದರೆ, ಕ್ರಿಸ್ತನು ತನ್ನನ್ನು ತಾನು ಮಾನವನ ಪುತ್ರ, ಅಂದರೆ "ಪುರುಷನ ಪುತ್ರ" (ತಂದೆಯ ಮಗ) ಎಂದೇ ಕರೆದುಕೊಳ್ಳುತ್ತಿದ್ದನು. ಅದಕ್ಕಿಂತ ಮುಖ್ಯವಾಗಿ ನನ್ನ ಕಲ್ಪನೆಗೆ ಕಂಡುಬಂದ ಸಂಗತಿ ಎಂದರೆ ಈ ಮಾನವಜನ್ಯ ಜ್ಞಾನ (Anthropos) ಎನ್ನುವದು ಸಂದೇಹಾಸ್ಪದವಾದ ಗ್ರೀಕ್ ತುಲ್ಯಾರ್ಥದಂತೆ ಇದ್ದು, ಇದು ಸಿರಿಯನ್ ಶಬ್ದದ ಶಾಬ್ದಿಕ ಮತ್ತು ಅನಭಿಜ್ಞವಾದ (Anthropos) ಅನುವಾದವಾಗಿದ್ದು, ಆ ಶಬ್ದವೂ ಸಹಿತ "ಪುರುಷ"ನನ್ನೆ ಸಂಕೇತಿಸುತ್ತಿದೆ.

ಅದು ಯಾವುದೇ ತೆರನಾಗಿದ್ದರೂ ಸಹಿತ, ಮತ್ತು ಅದೇ ರೀತಿಯಲ್ಲಿ ಗಮನಿಸಿದರೂ, – ಮಾನವನು ಸಂಪೂರ್ಣವಾಗಿ ದೈವೀ ನೆಲೆಯ ಅವಕಾಶಗಳಲ್ಲಿಯೇ ಇರುತ್ತಾನೆ ಎನ್ನುವದರಲ್ಲಿ ಯಾವುದೇ ಸಂಶಯವಿರುವದಿಲ್ಲ – ಅವನು ಕೇವಲ ಭೌತಿಕ ವಿಕಸನದ ಒಂದು ಸಂಗತಿಯಾಗಿರುವದಿಲ್ಲ, ಅವನು ಅವನಲ್ಲಿಯೇ ಒಂದು ದೈವೀ ನೆಲೆಯ ವಿಕಸನದ ವಲಯದಲ್ಲಿ ಇರುತ್ತಾನೆ. ಏಕೆಂದರೆ ಇದು ಅವನಿಂದಲೇ ಪ್ರಾರಂಭಗೊಂಡಿದ್ದು ಮತ್ತು ಅವನಲ್ಲಿಯೇ

ಲಯಗೊಳ್ಳುತ್ತದೆ. ಯಾವಾಗ ಮನುಜನ ಸೃಷ್ಟಿಯಾಯಿತೋ ಆಗಲೇ ದೇವನೂ ಸಹಿತ ತೃಪ್ತನಾಗಿರುತ್ತಾನೆ – ಇಲ್ಲಿ ಈರ್ವರೂ ಪ್ರಾಣಿ ಸ್ವರೂಪವನ್ನು ನಿರಾಕರಿಸಿರುತ್ತಾರೆ. – ಜೊತೆಗೆ ಸುಕೃತಮೇವ ಎನ್ನುವದಕ್ಕಾಗಿಯೇ ಆರ್ತಿಯಿಂದ ಹಂಬಲವನ್ನು ಹೊಂದಿರುತ್ತಾರೆ, ಸಂಘಟನೆಗೊಂಡಿರುತ್ತಾರೆ. ಹೀಗಾಗಿ ಮಾನವನು ಸಮರ್ಪಕವಾಗಿ ಮತ್ತು ಅಚ್ಚರಿದಾಯಕವಾಗಿಯೆ ಸೃಷ್ಟಿಯಾಗಿದ್ದಾನೆ. ಅವನು ದೇವ ಸದೃಶವಾಗಿಯೇ ಸೃಷ್ಟಿಸಲ್ಪಟ್ಟಿದ್ದಾನೆ. ಉಳಿದೆಲ್ಲ ವೈವಿಧ್ಯಮಯ ಜೀವಜಂತುಗಳ ಮತ್ತು ಪ್ರಾಣಿ ಹಂತದಿಂದ ದೇವತ್ವವನ್ನು ಪಡೆಯುವ ದೆಸೆಯಲ್ಲಿ ಒಂದು ನಿಶ್ಚಿತ ನೆಲೆಯಲ್ಲಿ ಸ್ಥಾಪಿತಗೊಂಡ ಅವುಗಳಿಗಿಂತ, ಶಕ್ತಿಪೂರ್ಣವಾಗಿ, ಅದರಲ್ಲೂ ಉಚ್ಚ ನೆಲೆಯಲ್ಲಿ, ಸಂಪೂರ್ಣವಾಗಿ ಭಿನ್ನವಾಗಿ, ಜಡತೆಯಿಂದ ದೂರವಾಗಿ, ಮತ್ತು ಈ ಎಲ್ಲ ಕಾರಣಗಳಿಂದಾಗಿಯೇ, ಸದ್ಯದ ವರ್ತಮಾನದಲ್ಲಿ ಅವನಿರುವ ಸ್ತರವು ದೇವದೂತರ ಹಂತಕ್ಕಿಂತ ಕೊಂಚ ಕೆಳಗಿನ ಸ್ತರದಲ್ಲಿ ಅನಂತಾನಂತವಾಗಿ ಕ್ರೋಢೀಕರಣಗೊಂಡಿದ್ದರೂ ಸಹಿತ, ಅನುಷಂಗಿಕ ಪರಿಣಾಮದ ಹಂತದಲ್ಲಿ ಮತ್ತು ಅವನ ಊರ್ಧ್ವಮುಖೀ ಗಮನದ ತುಡಿತದಲ್ಲಿ ಅವನು ದೇವಗಣಕ್ಕಿಂತಲೂ ಉನ್ನತ ಸ್ತರದಲ್ಲಿಯೇ ಇರುತ್ತಾನೆ. ಇನ್ನುಳಿದಂತೆ ಇರುವ ಅಥವಾ ನಿಶ್ಚಿತ ನೆಲೆಯಲ್ಲಿಯೇ ಸ್ಥಿರಗೊಂಡವುಗಳಿಗಿಂತ, ಪ್ರಾಣಿಗಳಿಗಿಂತ, ದೇವಗಣಗಳಿಗಿಂತ, ಬೃಹತ್ಕಾಯದ ಅತಿಮಾನುಷರಿಗಿಂತ, ದಾನವರಿಗಿಂತ, ಗಂಧರ್ವರೆಲ್ಲರೂ (demygods) ಉನ್ನತೋನ್ನತ ಸ್ತರದೆಡೆಗೆ ಆರೋಹಣಗೈಯುವ ಅವಕಾಶವಿದ್ದರೂ, ಅವುಗಳೆಲ್ಲವೂ ಕಡ್ಡಾಯವಾಗಿ ಮಾನವ ದೇಹವನ್ನೇ ಬಳಸಿಕೊಳ್ಳಬೇಕಾಗುತ್ತದೆ, ಮತ್ತು ಈ ಸ್ಥಿತ್ಯಂತರವನ್ನು ಕಾಣಲು, ಈ ಲೌಕಿಕದ ಜನ್ಮವನ್ನೇ ಆಧರಿಸಿಕೊಳ್ಳಬೇಕಾಗುತ್ತದೆ.

**CWSA 12: 7**

*

**ಧರ್ಮ: ಮಾನವನ ಕ್ರಿಯೆಗಳಿಗಾಗಿರುವ ಶಾಸನ (ನಿಯತಿ)**

ನೈತಿಕ ಮತ್ತು ಅನುಷ್ಠಾನಗೊಳ್ಳುವ, ನೈಸರ್ಗಿಕ ಮತ್ತು ತತ್ವಜ್ಞಾನದಿಂದ ಒಳಗೊಂಡ ಮತ್ತು ಮತೀಯ ಮತ್ತು ದೈವೀ ಪ್ರಾಧಾನ್ಯತೆಯನ್ನು ಹೊಂದಿದ ಒಂದು ಶಬ್ದವೆಂದರೆ “ಧರ್ಮ”ವಾಗಿದೆ. ಜೊತೆಗೆ ಇದನ್ನು ಮೇಲ್ಕಂಡ ಅಭಿಪ್ರಾಯಗಳಲ್ಲಿ ಅಥವಾ ಬಳಸಲ್ಪಡಬಹುದಾಗಿದೆ, ಇಲ್ಲಿ ಇದನ್ನು



ಸಂಪೂರ್ಣವಾಗಿ ನೈತಿಕವಾಗಿ, ಸಂಪೂರ್ಣವಾಗಿ ತತ್ವಜ್ಞಾನವಾಗಿ, ಅಥವಾ ಸಂಪೂರ್ಣ ಮತೀಯ ನೆಲೆಯಲ್ಲಿ ಉಪಯೋಗಿಸಲ್ಪಡುತ್ತಿದೆ. ನೈತಿಕತೆಯ ಹಿನ್ನೆಲೆಯಲ್ಲಿ ಇದೊಂದು ಸದಾಚಾರವಾಗಿದ್ದು, ನಡವಳಿಕೆಯ ನೈತಿಕ ನಿಯಮವಾಗಿದ್ದು, ಅಥವಾ ಮತ್ತೂ ಬಹಿರ್ಮುಖವಾಗಿ ಮತ್ತು ವ್ಯಾವಹಾರಿಕ ಅಥವಾ ಲೌಕಿಕದ ಮಹತ್ವದಿಂದಾಗಿ ಸಾಮಾಜಿಕ ಹಾಗೂ ರಾಜಕೀಯ ನ್ಯಾಯಕ್ಕಾಗಿ, ಅಥವಾ ಮತ್ತೂ ಸರಳೀಕರಿಸಿ ಹೇಳುವದಾದಲ್ಲಿ, ಸಾಮಾಜಿಕ ನ್ಯಾಯದ ಕುರಿತು ಅವಲೋಕನವಾಗಿರುತ್ತದೆ.

ಭಾರತೀಯ ಪರಿಕಲ್ಪನೆಯಲ್ಲಿ ಧರ್ಮವೆನ್ನುವದು ಕೇವಲ ಅತ್ಯುತ್ತಮವಾದ, ಸೂಕ್ತವಾದ, ನೈತಿಕತೆ ಮತ್ತು ನ್ಯಾಯ ಸಮ್ಮತ ನೀತಿಗಳಲ್ಲ; ಅಸ್ತಿತ್ವದಲ್ಲಿರುವ ಇನ್ನುಳಿದ ಜೀವ–ಪ್ರಪಂಚದ ಜೊತೆಗೆ, ನಿಸರ್ಗದ ಜೊತೆಗೆ, ದೇವರ ಜೊತೆಗೆ, ಇರುವ ಸಂಬಂಧದ ಪರಿಪಾಲನಾತ್ಮಕವಾದ ಶಾಸನವಾಗಿದೆ. ಈ ಮೂಲಕವಾಗಿ ದೈವತ್ವವೊಂದು (ದಿವ್ಯ ತತ್ತ್ವವೊಂದು) ತನ್ನಲ್ಲಿ ತಾನೇ ಕಾರ್ಯಪ್ರವೃತ್ತವಾಗಿ ಬೇರೆ ಬೇರೆ ಆಕಾರಗಳಲ್ಲಿ ಮತ್ತು ಕ್ರಿಯೆಯ ನಿಯಮಗಳಲ್ಲಿ ಅನುಷ್ಠಾನ–ಗೊಳ್ಳುತ್ತಿರುವದನ್ನು ಪರಿಗಣಿಸುವ ಮೂಲಕ, ಜೊತೆಗೆ ಅಂತರಂಗಿಕ ಹಾಗೂ ಬಾಹ್ಯ ಜೀವನದಲ್ಲಿ ನಿರ್ಮಿತಿಗೊಳ್ಳುವ ಆಕಾರಗಳ ಬಗೆಗೆ, ಮತ್ತು ಈ ಜಗತ್ತಿನಲ್ಲಿರುವ ಪ್ರತಿಯೊಂದೂ ಅಂಶಕ್ಕೂ ಇರುವ ಸಂಬಂಧವನ್ನು ಸುಸಂಬದ್ಧ–ಗೊಳಿಸುವ ಸಲುವಾಗಿ ಇರುವ ಪರಿಪಾಲನಾತ್ಮಕವಾದ ಶಾಸನವಾಗಿದೆ.

ಇದರ ಮೂಲ ಉದ್ದೇಶದಲ್ಲಿ, ಅಂದರೆ, ನಮ್ಮ ಎಲ್ಲ ಚಟುವಟಿಕೆಗಳನ್ನು ರಹಸ್ಯವಾಗಿಯೇ ನಿಯಮಬದ್ಧಗೊಳಿಸುತ್ತಿರುವ ನಮ್ಮ ಸ್ವಭಾವದ ತಳಹದಿಯ ಶಾಸನ ಇದಾಗಿದೆ. ಈ ಅಭಿಪ್ರಾಯದಲ್ಲಿ, ಪ್ರತಿಯೊಂದು ಜೀವಿಯೂ, ಪ್ರತಿಯೊಂದು ವೈವಿಧ್ಯತೆಯೂ, ವ್ಯಕ್ತಿಗತವಾಗಿ, ಸಾಮೂಹಿಕವಾಗಿ ತಮ್ಮದೇ ಆದ ಧರ್ಮವನ್ನು ಹೊಂದಿವೆ.

ಎರಡನೇಯದಾಗಿ, ಒಂದು ದೈವೀ ಸ್ವಭಾವವು ಇದ್ದು ಅದು ನಮ್ಮಲ್ಲಿಯೇ ಸ್ಥಿತಗೊಂಡು, ರೂಪಣೆಗೊಂಡು ವಿಕಸನಗೊಳ್ಳಬೇಕಿದೆ. ಹೀಗಾಗಿ ಧರ್ಮವೆಂದರೆ, ನಮ್ಮ ಆತ್ಮದಲ್ಲಿ ಅಂತರ್ಗತವಾಗಿ ರೂಪುಗೊಂಡು ಕಾರ್ಯಪ್ರವೃತ್ತವಾಗುವದರ ಮೂಲಕ ವಿಕಸನಗೊಳ್ಳುವ ವ್ಯವಸ್ಥೆಯಾಗಿದೆ.

ಮೂರನೇಯದಾಗಿ, ನಮ್ಮಿಂದ ಹೊಮ್ಮಲ್ಪಡುವ ಚಿಂತನಗಳನ್ನು ಮತ್ತು ಕ್ರಿಯೆಗಳನ್ನು ಮತ್ತು ಪರಸ್ಪರರಲ್ಲಿ ಇರುವ ಸಂಬಂಧಗಳ ಮೂಲಕ, ಪರಸ್ಪರರಿಗೆ ಸಹಾಯ ಮಾಡುತ್ತ ಮಾಡುತ್ತಲೇ ನಮ್ಮ ವಿಕಸನದ ಜೊತೆಗೇ ಮಾನವ ಸಮುದಾಯವೂ ಸಹಿತ ದೈವೀ ಆದರ್ಶದ ಹಂತದೆಡೆಗೆ ಸಾಗುವದಾಗಿರುತ್ತದೆ.

ಸಾಮಾನ್ಯವಾಗಿ ಧರ್ಮವನ್ನು ಶಾಶ್ವತ ಮತ್ತು ಬದಲಾವಣೆಗೊಳಪಡದ – ಸ್ಥಿತಪ್ರಜ್ಞ ಹಂತದಲ್ಲಿದೆ ಎಂದು ಹೇಳಲಾಗುತ್ತಿದೆ. ಹೀಗಾಗಿಯೂ ಇದು ಆಧಾರಭೂತ ತತ್ತ್ವದಲ್ಲಿ ಅಳವಟ್ಟಿರುತ್ತದೆ, ಚಿಂತನಗಳಲ್ಲಿ ಅಂತರ್ಗತವಾಗಿದೆ. ಆದರೆ ಅದರ ಅಭಿವ್ಯಕ್ತಿಯ ಆಯಾಮಗಳಲ್ಲಿ (Form) ಇದು ಸತತವಾಗಿ ಪರಿವರ್ತನೆಗೊಳ್ಳುತ್ತ ಮತ್ತು ವಿಕಸನಗೊಳ್ಳುತ್ತ ಇರುತ್ತದೆ. ಏಕೆಂದರೆ ಮಾನವನಿನ್ನೂ ಈ ಆದರ್ಶದ (ವಿಜ್ಞಾನಮಯ ಸಂಭೂತಿಯ) ಹಂತವನ್ನು ಪಡೆದುಕೊಂಡಿಲ್ಲ, ಅಥವಾ ಆ ಹಂತದಲ್ಲಿ ಜೀವಿಸುತ್ತಿಲ್ಲ, ಆದಾಗ್ಯೂ ಸಹಿತವಾಗಿ ಆ ನೆಲೆಯವರೆಗೆ ಸಾಗುವ ಆಭೀಪ್ಸೆ ಹೊಂದಿದ್ದಾರೆ. ಈ ಮೂಲಕವಾಗಿ ಜ್ಞಾನಾಭಿವೃದ್ಧಿಯ ಮೂಲಕ ಮತ್ತು ಅದನ್ನು ಸೂಕ್ತವಾಗಿ ಅನುಷ್ಠಾನಗೊಳಿಸಿಕೊಳ್ಳುತ್ತಿರುವ ಮೂಲಕ ವಿಕಸನದತ್ತ ಸಾಗಿದ್ದಾನೆ. ಜೊತೆಗೆ ಈ ವಿಕಸನದಲ್ಲಿ ಮತ್ತು ಈ ವಿಕಸನದ ಪ್ರಕ್ರಿಯೆಯಲ್ಲಿ, ಧರ್ಮವು ಯಾವಾಗಲೂ ನಾವು ದೈವೀ ಪರಿಶುದ್ಧತೆಯಲ್ಲಿ, ಸುಸಂಗತಗೊಳ್ಳುವತ್ತ ಇರುವ ಅಂಶವಾಗಿದೆ. ವೈಶಾಲ್ಯತೆಯಲ್ಲಿ, ಪ್ರಕಾಶಮಾನಗೊಳ್ಳುವಲ್ಲಿ, ಸ್ವಾತಂತ್ರ್ಯದಲ್ಲಿ(ಮುಕ್ತತೆಯಲ್ಲಿ), ಶಕ್ತಿಯಲ್ಲಿ, ಬಲದಲ್ಲಿ, ತೋಷದಲ್ಲಿ, ಒಳ್ಳೆಯತನದಲ್ಲಿ, ಐಕ್ಯತೆಯಲ್ಲಿ, ಸೌಂದರ್ಯದಲ್ಲಿ ಮತ್ತು ಅದರ ಛಾಯಾನುಭವದಲ್ಲಿ ನಿರ್ಮಿತಿಗೊಳ್ಳುವ ಹಂತದಿಂದ ದೂರವಿರುವಲ್ಲಿ ಮತ್ತು "ನಾಸ್ತಿ" ತತ್ವದಿಂದ ದೂರವಿರುವಲ್ಲಿ ಮತ್ತು ಯಾವ ಅಂಶಗಳು ವಿಕಸನದ ಹಂತವನ್ನು ತಡೆಯುವ ಮೂಲಕ ನಿರ್ಬಂಧಿಸುತ್ತಿರುವವೋ ಮತ್ತು ಆ ನಿಯತಿಯನ್ನು ಕಡೆಗಣಿಸಿ ರೂಪುಗೊಳ್ಳುತ್ತಿವೆಯೋ, ಅದರಿಂದ ದೂರವಾಗಿ ಯಾವುದೇ ಸಂಗತಿಗಳು ಸಹಿತ ಯಾವುದೇ ಉತ್ಪತ್ತಿಯನ್ನು ರೂಪಿಸಿಲ್ಲವೋ, ಮತ್ತು ಯಾವುದೇ ಉತ್ಪತ್ತಿಯನ್ನು ರೂಪಿಸಲೂ ಸಾಧ್ಯವಿಲ್ಲವೋ, ಅದಕ್ಕಿಂತ ಹೆಚ್ಚಾಗಿ ದೈವೀ ಮೌಲ್ಯಗಳಿಗೆ ಸಹಕಾರಿಯಾಗಿಲ್ಲವೋ, ಅವುಗಳಿಂದ ದೂರವೇ ಇರುತ್ತದೆ. ಆದರೆ ಇವು ಪ್ರತೀಪ (perversion) ಮತ್ತು ಪ್ರತಿಬಂಧಕ (Cotradiction – ಸಂಗತಿಯನ್ನೇ ಮುಂಚೂಣಿಗೆ ತಂದು ಪ್ರದರ್ಶಿಸುವ),



ಪರಿಶುದ್ಧವಲ್ಲದ, ಸಂಕುಚಿತದ, ಬಂಧನದ (ದಾಸ್ಯತ್ವದ), ತಮದಿಂದ ಕೂಡಿದ, ಅಶಕ್ತ, ನೀಚ ಸ್ವಭಾವದ (Vileness), ಮತಭೇದದ ಮತ್ತು ತಾಪನೀಯ ಹಾಗೂ ವಿಭಜನೆಗೊಳ್ಳುವ, ಜೊತೆಗೆ ವಿಕೃತ (Hideous) ಅಸಂಸ್ಕೃತಗೊಂಡ ಹಂತದ ಅವನ ವಿಕಸನದ ಪ್ರಕ್ರಿಯೆಯಲ್ಲಿ ಮಾನವನ ಅಭಿವೃದ್ಧಿಯನ್ನು ಸದಾ ಹಿಂದೆಯೇ ಉಳಿಯುವಂತೆ ಮಾಡುತ್ತವೆ. ಈ ಹಂತವನ್ನೇ "ಅಧರ್ಮ" - 'ಧರ್ಮವಲ್ಲದ್ದು" ಎಂದು ಕರೆಯಲಾಗಿದೆ. ಹೀಗಾಗಿ ಇದು ಧರ್ಮದ ಹಂತದೆಡೆ ಸಾಗುವದನ್ನು ವಿರೋಧಿಸುತ್ತ, ಮತ್ತೆ ಮೇಲಾಗಿ ಧರ್ಮದ ಮೇಲೆಯೇ ಸವಾರಿ ಮಾಡುವದನ್ನು ಇಚ್ಛಿಸುವ ಮೂಲಕವಾಗಿ, ಬೆಳವಣಿಗೆಯಲ್ಲಿ ಹಿಂಜರಿತವನ್ನು ಮತ್ತು ಕುಸಿತವನ್ನು ರೂಪಿಸುವ ಆಶಯ ಹೊಂದಿರುತ್ತದೆ. ಈ ರೀತಿಯ ಪ್ರತಿಕ್ರಿಯಾತ್ಮಕ ಘಟನೆಗಳ ಮೂಲಕ ಅಶುಭದ ಕಡೆಗೆ, ಅಜ್ಞಾನದ ಕಡೆಗೆ ಮತ್ತು ತಮದ ಎಡೆಗೆ ಸಾಗುವದಾಗಿರುತ್ತದೆ.

ಈ ಎರಡರ ಮಧ್ಯದಲ್ಲಿಯೇ ಸನಾತನ ಯುದ್ಧ ಮತ್ತು ಹೋರಾಟ (perpetual struggle)ವೊಂದು ನಡೆದಿರುತ್ತದೆ, ಜಯ–ಅಪಜಯಗಳ ಆಂದೋಲನವು ಕೆಲವೊಮ್ಮೆ ಊರ್ಧ್ವಮುಖಿಯಾಗಿದ್ದರೆ ಮತ್ತೆ ಕೆಲವೊಮ್ಮೆ ಅಧೋಮುಖಿಯಾದ ಬಲಗಳಲ್ಲಿ ಪ್ರವೃತ್ತವಾಗಿರುತ್ತದೆ.

**CWSA 19: 169-72**

**ಆರ್ಯ: ಮಾನವನ ಅಸ್ತಿತ್ವದ ಪರಿಪೂರ್ಣ ಭಾವನಾ ಶಕ್ತಿ**

ಒಂದು ವೇಳೆ "ಆರ್ಯ" ಎನ್ನುವದನ್ನು ಶುದ್ಧಾಂಗವಾಗಿ ಜನಾಂಗೀಯ ಶಬ್ದವೆಂದು ಭಾವಿಸಿಕೊಂಡರೆ, ಬಹುತೇಕವಾಗಿ ಅದರ ವ್ಯುತ್ಪತ್ತಿ(Derrivative)ಯು "ಆರ್" ನಿಂದ ಆಗಿದೆ. ಆರ್ ಎನ್ನುವದು ಸಾಮರ್ಥ್ಯ ಅಥವಾ ವೀರ್ಯವಾನ್ ಎಂದರ್ಥವಿದೆ. ಅದೇ ರೀತಿಯಲ್ಲಿ "ಅರ್' ಎಂದರೆ "ಹೋರಾಟ ಮಾಡು" ಎನ್ನುವ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ಇದೇ ರೀತಿಯಲ್ಲಿ ಗ್ರೀಸ್ ದೇಶದ ಯುದ್ಧದೇವತೆಯಾದ "ಆರ್ಯೇಸ್(Ares), ಏರಿಯಸ್(Aerious), ಎಂದರೆ ರಣಧೀರ ಎಂದರ್ಥವಿದೆ. ಅದು ಬಹುತೇಖವಾಗಿ arête ಎಂದೂ, ಸದಾಚಾರದ, ಲ್ಯಾಟಿನ್ ಭಾಷೆಯ ಮಹತ್ವದ ಸಚ್ಚರಿತ(Virtus) ಎಂದೂ, ಪ್ರಥಮ ಸ್ಥಾನದ, ದೈಹಿಕ ಸಾಮರ್ಥ್ಯದ, ಮತ್ತು ಸ್ಥೈರ್ಯದ ಹಾಗೂ ನೈತಿಕ ಬಲದ ಜೊತೆಗೆ ಉತ್ಕ್ರಾಂತಿಯದಾಗಿದೆ. ಈ ತೆರನಾದ ಅರ್ಥವ್ಯಾಪ್ತಿಯನ್ನೇ

ನಾವೂ ಒಪ್ಪಿಕೊಂಡಿದ್ದೇವೆ. "ನಾವು ಮಹೋನ್ನತ ಚೇತನಕ್ಕಾಗಿ ಹೋರಾಟ ಮಾಡುತ್ತೇವೆ. ಹೀಗಾಗಿ ಜನತೆ ನಮ್ಮನ್ನು ಯುದ್ಧವೀರರು ಎಂದು ಕರೆದಿದ್ದಾರೆ. ಈ ತೆರನಾದ ಪ್ರಜ್ಞೆಯನ್ನು ಪಡೆದುಕೊಳ್ಳಲು, ಇಲ್ಲಿ ಆಯ್ಕೆಯೂ ಇರುತ್ತದೆ. ಜೊತೆಜೊತೆಗೆ ಯಾವುದು ಉತ್ತಮ, ಪವಿತ್ರ, ಹೆಚ್ಚು ಪ್ರಕಾಶಮಾನ, ಪೂರ್ಣ ದೈವೀ ನೆಲೆಯಲ್ಲಿ ಇರುತ್ತದೆ ಎನ್ನುವ ಜ್ಞಾನವನ್ನು ಒಳಗೊಂಡಿರುತ್ತದೆ.

ಅಧಿಕೃತವಾಗಿ, ಇದು ಸರ್ವ ಸಂಗತಿಗಳ, ವಸ್ತುಗಳ, ಭೂತಾನುಕಂಪದ (Charity), ಮತ್ತು ಸರ್ವವಸ್ತುಗಳ ಸಂಮಾನವನ್ನು, ಜೊತೆಜೊತೆಗೆ ಬಹುತೇಕವಾಗಿ ಕಾಣುತ್ತಿರುವ ಮಾರ್ಗವಾಗಿ, ಕುರೂಪಿಯಾದ ಅಥವಾ ಕತ್ತಲೆಯಿಂದ ಕೂಡಿದ, ವಿಶ್ವದೇವತೆಯ ಬಯಕೆಯಂತೆ ಆಯ್ಕೆಗೊಳ್ಳುತ್ತಿರುವ ಪ್ರಕ್ರಿಯೆಯಲ್ಲಿ ಸರ್ವಸ್ವವನ್ನೂ ಸಮಾನವಾಗಿ ಆಯ್ಕೆ ಮಾಡಿಕೊಳ್ಳುತ್ತಿರುವ ಹಂತವಾಗಿದೆ. ಆದರೆ, ಇವುಗಳ ಜೊತೆಗೇ ಸೂಕ್ತವಾದ ಕರ್ಮದ ನಿಯಮಗಳು, ಸೂಕ್ತವಾದ ಕರ್ತವ್ಯದ ನಿಯಮವು ಆಯ್ಕೆಯಾಗಿದ್ದು, ಇದರ ಪ್ರಾಮುಖ್ಯತೆಯು ದೇವಶೀರ್ಷನಲ್ಲಿ ಅಭಿವ್ಯಕ್ತಗೊಳಿಸಲ್ಪಟ್ಟ ಆ ಹಂತದಲ್ಲಿ ಅಂತಸ್ಥಗೊಂಡಿರುತ್ತದೆ. ಮತ್ತು ಆ ಆಯ್ಕೆಯೇ ಯುದ್ಧವನ್ನೂ ಆಹ್ವಾನಿಸುತ್ತದೆ, ಹೋರಾಟವನ್ನೂ ಒಳಗೊಂಡಿರುತ್ತದೆ. ಇದು ಅಷ್ಟೊಂದು ಸುಲಭದಲ್ಲಿ ರೂಪಿಸಲ್ಪಟ್ಟಿರುವದಿಲ್ಲ. ಅಷ್ಟೇ ಸುಲಭದಲ್ಲಿ ಮಾಡಲ್ಪಟ್ಟಿಲ್ಲ. ಹೀಗಾಗಿ ಅಷ್ಟೇ ಸುಲಭದಲ್ಲಿ ಇದನ್ನು ಅನುಷ್ಠಾನಗೊಳಿಸಲೂ ಸಾಧ್ಯವಿಲ್ಲ.

ಯಾರೇ ಆಗಲಿ, ಈ ಹಂತದಲ್ಲಿರುವ ದೈವೀ ನೆಲೆಯ ಆ ಊರ್ಧ್ವ ತಾಣದೆಡೆಗೆ ಏರುತ್ತ ಸಾಗಲು ಇಚ್ಛಿಸುತ್ತಾರೆಯೋ, ಅದರಲ್ಲಿ ಎದುರಾಗಬಹುದಾದ ಸೋಲಿನ ಅಥವಾ ವಿಲಂಬಗತಿಯಿಂದಾಗಿ ನಿವೃತ್ತಿಗೊಳ್ಳುವದಿಲ್ಲವೋ, ಮತ್ತೂ ಮೇಲಾಗಿ ಅದರ ಅಗಾಧತೆಯ ಕಾರಣದಿಂದಾಗಿ, ಅದನ್ನು ಅಳವಡಿಸಿ–ಕೊಳ್ಳಲಾಗದೇ ಸಂಕುಚಿತಗೊಂಡು ಕುಸಿಯುವದಿಲ್ಲವೋ, ಅವನು ಆರ್ಯನ್ ಆಗಿದ್ದಾನೆ; ಆ ಊರ್ಧ್ವಾತಿಊರ್ಧ್ವ ನೆಲೆಯಲ್ಲಿ ಇರುವ ವಿಷಯಕ್ಕೆ ಅವನ ಬಲ ಮತ್ತು ಸ್ಥೈರ್ಯಕ್ಕಿಂತ ಅಗಾಧವಾದ ವ್ಯಾಪ್ತಿತ್ವ ಪ್ರಾಪ್ತಗೊಳ್ಳುತ್ತದೆಯೋ ಅವನು ಆರ್ಯನ್ ಆಗಿದ್ದಾನೆ. ಇವನು ಭಗವದ್ಗೀತೆ ಹೇಳುವಂತೆ "ದೈವೀ ನೆಲೆಯ ಹೋರಾಟಗಾರನಾಗಿ ಮತ್ತು ವಿಜಯಶಾಲಿಯಾಗಿ, ಪರಿಶುದ್ಧ ಮಾನವನಾಗಿದ್ದಾನೆ; ಪರಿಪಕ್ವ(aristos), ಸರ್ವೋತ್ತಮನಾಗಿದ್ದಾನೆ". "ಶ್ರೇಷ್ಠನಾಗಿದ್ದಾನೆ".



ವಸ್ತುತಃ ಇದರ ಸೂಕ್ತವಾದ ಆಧಾರಭೂತ ಅರ್ಥದಲ್ಲಿ "ಆರ್ಯ" ಎಂದರೆ, – ಮಾನವನು ವಾಸವಾಗಿರುವ ಹಂತದಲ್ಲಿ ಎದುರಾಗಬಹುದಾದ ಎಲ್ಲ ಬಾಹ್ಯ ವಿರೋಧಗಳನ್ನು ಮತ್ತು ಆಂತರಿಕ ತುಮುಲಗಳನ್ನು ಸಮರ್ಥವಾಗಿ ಎದುರಿಸಿ, ಅವುಗಳಿಂದ ಸಂಪೂರ್ಣವಾಗಿ ಹೊರ ಬರುವ ಮತ್ತು ಯಶಸ್ವಿಯಾಗುವ ವ್ಯಕ್ತಿ "ಆರ್ಯ"ನಾಗಿದ್ದಾನೆ. ಇಲ್ಲಿ ಸ್ವಯಂ–ವಿಜಯ(ಆತ್ಮ ಶೋಧನೆ)ವೇ ಅವನ ಸ್ವಭಾವದ ಪ್ರಪ್ರಥಮ ನಿಯಮವಾಗಿರುತ್ತದೆ. ಜನ ಸಾಮಾನ್ಯರು ತಮ್ಮ ಅಸಾಮರ್ಥ್ಯ ಅಥವಾ ಅಶಕ್ತತೆಯಲ್ಲಿರುವಂತೆ, ಹಾಗೂ ದೈಹಿಕ ಮಹತ್ವವೇ ಪ್ರಾಮುಖ್ಯವಾಗಿರುವಂತೆ ಇರದೇ, ಅಂದರೆ ಭೂಮಿಯ (ಮೃಣ್ಮಯದ) ಭಾವದಿಂದ ಇವನು ಮುಕ್ತನಾಗಿರುತ್ತಾನೆ. ಇದು ಅವನು ಯಾವುದೇ ಒಳತೋಟಿಯಿಂದ ಕುಸಿಯದೇ ಅಥವಾ ಮೃತಸದೃಶ ಯಾಂತ್ರಿಕದ ಬದುಕಿಗಿಂತ, ಮತ್ತು ತಾಮಸದಿಂದ ಸೀಮಿತಗೊಂಡ ವ್ಯವಸ್ಥೆಯಿಂದ ಸದಾ ಮುಕ್ತನಾಗಿಯೇ ಉಳಿಯುವ ಸ್ಥಿತಿಯಲ್ಲಿ ಇರುತ್ತಾನೆ.

ಈ ರೀತಿಯಲ್ಲಿ ಆರ್ಯನ್ ಇಂತಹ ಜೀವನದಿಂದ ಮುಕ್ತನಾಗಿ ಮತ್ತು ಅದರ ಹಿಡಿತದಿಂದ ಬಿಡುಗಡೆ ಪಡೆದು, ಅಲ್ಲಿರುವ ಕ್ಷುಧಾ–ಲಾಲಸೆಗಳಿಗೆ ಪಕ್ಕಾಗದೇ, – ಅವುಗಳ ರಾಜಸ ಸ್ವಭಾವಕ್ಕೆ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳದೇ 'ಮುಕ್ತತ್ವದ' ಹಂತಕ್ಕೆ ಬರುತ್ತಾನೆ. ಅವನು ಮನಸ್ಸು ಅಥವಾ ಪ್ರವೃತ್ತಿಗಳೆರಡರಲ್ಲೂ ಯಾವುದೆ ಕಾರಣಕ್ಕೂ ವ್ಯಾಕುಲಗೊಳ್ಳುವದಿಲ್ಲ; ಅಂಧಕಾರದಿಂದ ಕವಿದ ಅಜ್ಞಾನದ ಕೋಶದಲ್ಲಿ ಜೀವಿಸುವದಿಲ್ಲ. ಪರಂಪರಾಗತವಾದ ಪೂರ್ವ ಗ್ರಹಿಕೆಯಿಂದ ಪೀಡಿತನಾಗಿರುವದಿಲ್ಲ. ಸಂಪ್ರದಾಯದ ರೀತಿ–ರಿವಾಜುಗಳಿಂದ ಗೊಂದಲಗೊಳ್ಳುವದಿಲ್ಲ. ಮತ್ತೊಬ್ಬರನ್ನು ಸಂತೋಷಗೊಳಿಸುವ ಸಲುವಾಗಿ ಒಪ್ಪಂದಗೊಳ್ಳುವ ನಿರ್ಧಾರಗಳನ್ನು ಒಪ್ಪುವದಿಲ್ಲ. ಆದರೆ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಹೇಗೆ ಆಯ್ಕೆ ಮಾಡಿಕೊಳ್ಳಬೇಕು ಎನ್ನುವದನ್ನು ಅರಿತುಕೊಂಡಿರುತ್ತಾನೆ. ಅದರಲ್ಲೂ ಉದಾತ್ತವಾಗಿರುವದಕ್ಕೆ, ವೈಶಾಲ್ಯತೆಯಿಂದ ಕೂಡಿರುವದಕ್ಕೆ, ಅಂತಹ ನಿರ್ಧಾರಣೆಯ ವಿಷಯದಲ್ಲಿ ನಿಖರತೆಯನ್ನು ಹೊಂದಿ, ಆತ್ಮವಿಶ್ವಾಸದಿಂದ ಕೂಡಿದ್ದರೂ ಸಹಿತ ಜಾಣ್ಮೆಯ ವಿಷಯದಲ್ಲಿ ನಮ್ರತೆಯ ಮೂಲಕ ಹೊಂದಾಣಿಕೆಯ ಸ್ವಭಾವವನ್ನು ಒಳಗೊಂಡಿರುತ್ತಾನೆ. ಅವನು ಸರ್ವ ನೆಲೆಯಲ್ಲಿಯೂ ಸತ್ಯವನ್ನು ಬಯಸುತ್ತಾನೆ. ಸೂಕ್ತತೆಯನ್ನು

ನಿರೀಕ್ಷಿಸುತ್ತಾನೆ. ಪ್ರತಿಯೊಂದು ಅಂಶವೂ ಸಹಿತ ಮುಕ್ತವಾಗಿ ಔನತ್ಯದಲ್ಲಿಯೇ ಇರಬೇಕು ಎನ್ನುವದನ್ನು ಹಂಬಲಿಸುತ್ತಾನೆ.

ಸ್ವಯಂ–ರಕ್ಷಣೆಯು ಈ ಆತ್ಮಶೋಧನೆಯ ಹೋರಾಟದ ಗುರಿಯಾಗಿರುತ್ತದೆ. ಹೀಗಾಗಿ ಅವನು ಯಾವುದರ ಮೇಲೆ ವಿಜಯ ಸಾಧಿಸಿದ್ದಾನೆಯೋ, ಅಂತಹವುಗಳನ್ನು ನಾಶ ಮಾಡುವದಿಲ್ಲ. ಆದರೆ ಅವುಗಳನ್ನು ಉತ್ಕರ್ಷಗೊಳಿಸುವದರ ಜೊತೆಗೆ ಪಕ್ವಗೊಳಿಸುತ್ತಾನೆ. ಪ್ರದತ್ತವಾಗಿರುವ ದೇಹ, ಮನಸ್ಸು ಮತ್ತು ಜೀವನಗಳು, ಇವು ಈಗಿರುವ ನೆಲೆಗಿಂತಲೂ ಊರ್ಧ್ವದ ನೆಲೆಯ ವಿಷಯವೆಂದರಿತು, ಅಂತಹ ಸತ್ಯದ ಕುರಿತು ಮತ್ತು ಅವೆಲ್ಲವೂ ಆ ಹಂತವನ್ನು ಮತ್ತೆ ತಲುಪಲು ಸಹಕಾರಿಯಾಗಿಯೇ ಕೊಡಲ್ಪಟ್ಟಿರುವ ಅಂಶಗಳು ಎನ್ನುವದು ಅವನಿಗೆ ತಿಳಿದಿದೆ. ಆದ್ದರಿಂದ ಇವುಗಳೆಲ್ಲವೂ ಭಾವಾಭೂತ (Transended)ಗೊಂಡು ಮತ್ತು ಮುಕ್ತತ್ವವನ್ನು ಹೊಂದುವ, ಈ ಮೂಲಕವಾಗಿ ಅಲ್ಲಿ ರೂಪಿತಗೊಂಡಿದ್ದ ಸೀಮಿತತನವನ್ನು ನಿವಾರಿಸುವ ಮತ್ತು ಅವುಗಳಿಗಿರುವ ಸಂತೃಪ್ತತಾ ಹಂತಗಳನ್ನೂ ತಿರಸ್ಕರಿಸುವ ಮೂಲಕವೇ ಸಾಯುಜ್ಯಗೊಳಿಸಿಕೊಳ್ಳುವನು.

ಅಲ್ಲದೇ ಅವನಿಗೆ ಅರಿವಿರುವ ಸಂಗತಿ ಎಂದರೆ, ಈ ಜಗತ್ತಿನಲ್ಲಿ ಔನತ್ಯವೆನ್ನುವದು ಒಂದು ಶೂನ್ಯ ವ್ಯವಸ್ಥೆಯಲ್ಲ. ಅದು ತನ್ನನ್ನು ತಾನೇ ಇಲ್ಲಿ ಮೇಲಿಂದ ಮೇಲೆ ಅಭಿವ್ಯಕ್ತಗೊಳಿಸುತ್ತದೆ, – ಒಂದು ದೈವೀ ವಿಶ್ವಾಸ, ಪ್ರಜ್ಞೆ ಚೇತನ), ಪ್ರೇಮ, ತನ್ನಲ್ಲಿ ತಾನೇ ತಾನಾಗಿ ಪ್ರಕಟಗೊಳ್ಳುವ ಮೋಕ್ಷ, ಅದು ಲಭ್ಯವಾದ ನಂತರದಲ್ಲಿ ಅದನ್ನು ಅರಸುತ್ತಿರುವವನ ಸಾಮಾನ್ಯ ಜೀವನ ವಿಧಾನದ ಮೃಣ್ಮಯದ ಜೀವ–ವ್ಯವಸ್ಥೆ, ಮತ್ತು ಅವನ ಸುತ್ತಲೂ ಇರುವ ಸರ್ವ ವಾತಾವರಣವು ಅದನ್ನು ಸ್ವೀಕರಿಸಲು ಸಮರ್ಥವಾಗಿರುತ್ತದೆ. ಹೀಗಾಗಿ ಅವನು "ಅದರ" ಸೇವಕನಾಗಿದ್ದಾನೆ. ಪ್ರೇಮಿಯಾಗಿದ್ದಾನೆ. ಅದರ ಆಭಿಪ್ಸೆ ಹೊಂದಿದ್ದಾನೆ. ಅವನು ತನ್ನ ಕಾರ್ಯದಲ್ಲಿ, ಪ್ರೇಮದಲ್ಲಿ, ತೋಷದಲ್ಲಿ ಮತ್ತು ಮಾನವ ಸಮುದಾಯದ ಜ್ಞಾನದಲ್ಲಿ ಇದನ್ನು ಧಾರೆಯಾಗಿಸಿಕೊಳ್ಳುತ್ತಾನೆ. ಹೀಗಾಗಿ ಆರ್ಯನ್ ಯಾವಾಗಲೂ ಕ್ರಿಯಾಶೀಲನಾಗಿದ್ದು ಮತ್ತು ಹೋರಾಟಗಾರನೂ ಆಗಿದ್ದಾನೆ. ಇದಕ್ಕಾಗಿ ಅವನು, ಆ ಔನತ್ಯವನ್ನು ತಲುಪುವ ಸಲುವಾಗಿ ಮತ್ತು ಅದರ ಸಲುವಾಗಿ ಸೇವೆಯಲ್ಲಿ ತೊಡಗಿಕೊಳ್ಳುವದರ ಸಲುವಾಗಿ ಎಂದಿಗೂ ಮಾನಸಿಕ ಮತ್ತು ಶಾರೀರಿಕವಾಗಿ ತೊಂದರೆದಾಯಕವಾದ ಸಂಗತಿಗಳನ್ನು



ಎದುರಿಸುವ ಪ್ರಸಂಗವಿರುವದಿಲ್ಲ. ಯಾವುದೇ ಅಡೆತಡೆಗಳು ಬಂದರೂ ಸಹಿತ ಅವುಗಳನ್ನು ಸಮರ್ಥವಾಗಿ ಎದುರಿಸುವ ಮೂಲಕ ನಿವಾರಣೆಗೊಳಿಸಿ–ಕೊಳ್ಳುತ್ತಾನೆ. ಅವನು ಆಯಾಸ(fatigue)ದಿಂದ ನಿವೃತ್ತಿಯನ್ನು (Cessation) ಬಯಸುವದಿಲ್ಲ. ಯಾವಾಗಲೂ ಅವನಂತರಂಗದಲ್ಲಿರುವ ಆ ವೈರಾಜ್ಯದ ಆಗಮನಕ್ಕೆ ಮತ್ತು ಅದು ಜಗತ್ತಿನಲ್ಲಿಯೂ ಪ್ರಕಟಗೊಳ್ಳುವದಕ್ಕೆ ಹೋರಾಟ ನಡೆಸಿರುತ್ತಾನೆ.

**CWSA 13: 442-43**

*

**ಮೋಕ್ಷ ಅಥವಾ ಅಂತರಾತ್ಮದ ಮುಕ್ತಿ: ಮಾನವನ ಗುರಿ**

ನಿರಾಶಾವಾದಿಗಳು ಯಾವಾಗಲೂ ಮೋಕ್ಷವನ್ನು ವಿನಾಶ ಇಲ್ಲವೇ ಪ್ರಳಯ(Annihillation) ಎಂದೇ ಗುರುತಿಸಿ ವಿಸರ್ಜನೆಯ ಪರ್ಯಾಯ ಪದವನ್ನಾಗಿಸಿದ್ದಾರೆ. ಆದರೆ ಇದರ ನಿಜವಾದ ಅರ್ಥ "ಸ್ವಾತಂತ್ರ್ಯ"ವಾಗಿದೆ. ಯಾರು ಎಲ್ಲ ಬಂಧನಗಳಿಂದ ಬಂಧಿತರಾಗಿಲ್ಲವೋ, ಅವನು ಸ್ವತಂತ್ರನಾಗಿದ್ದು ಮುಕ್ತಾತ್ಮನಾಗಿರುತ್ತಾನೆ. ಆದರೆ, ಆತ್ಮವು ಸಂಪೂರ್ಣವಾಗಿ ಮುಕ್ತವಾಗುವದಕ್ಕಿಂತ ಮೊದಲು, ಬಂಧನದ ಅಂತಿಮ ಸ್ತರವಾಗಿರುವ ಭಾವಾವೇಶವು(passion) ತಂತಾನೆ ಪರಿತ್ಯಜ್ಯಗೊಳ್ಳಬೇಕಿದೆ. ತದನಂತರದಲ್ಲಿ ಅಂತಿಮ ಜ್ಞಾನವಾಗಿ ಯಾವುದೇ ಬಂಧನಗಳಿಲ್ಲದ ಸಾಕ್ಷಾತ್ಕಾರವು ಸಾಧ್ಯವಾಗುತ್ತದೆ. ಇಲ್ಲಿ ಸ್ವಾತಂತ್ರ್ಯದ ಬಗೆಗೆ ಯಾವುದೇ ಆಶೆ–ಆಕಾಂಕ್ಷೆಗಳು ಇರುವದಿಲ್ಲ; ಆತ್ಮವೂ ಸಹಿತ ಸದಾಕಾಲವು ಪರಿಪೂರ್ಣ ಮುಕ್ತತ್ವದ ಹಂತದಲ್ಲಿ ಇರುತ್ತದೆ. ಅಲ್ಲಿ ಬಂಧನ ಎನ್ನುವದೇ ಒಂದು ಭ್ರಮೆಯಾಗಿರುತ್ತದೆ. ಹೀಗಾಗಿ ಭ್ರಮೆಯಿಂದ ಬಿಡುಗಡೆ ಪಡೆಯುವದು ಎನ್ನುವದೇ ಇಲ್ಲಿ ವಿಭ್ರಮೆಯೇ ಆಗುತ್ತದೆ. ನಾವಿಲ್ಲಿ ಲೌಕಿಕದಲ್ಲಿ ಕೇವಲ ಕ್ರಿಯೆಗಳಿಗಾಗಿ ಮಾತ್ರವೆ ಬಂಧಿತರಾಗಿಲ್ಲ. ಪ್ರದರ್ಶನಕ್ಕಾಗಿಯೂ ಬಂಧಿತರಾಗಿಲ್ಲ. ವಿಡಂಬನಾತ್ಮಕವಾಗಿಯೇ ರೂಪಿಸಲ್ಪಟ್ಟಿರುವ ಬಂಧಗಳು (knots) ಎಂತಹ ಸ್ಥಿತಿಯಲ್ಲಿ ಇರುತ್ತವೆ ಎಂದರೆ, ನಮ್ಮಿಷ್ಟಕ್ಕೆ ನಾವೇ ಅವುಗಳಿಂದ, ಸಂತೋಷದಿಂದ ಬಿಡುಗಡೆಗೊಳ್ಳುವಂತೆ ಇರುತ್ತವೆ.

ಇದೆಲ್ಲವೂ ಏನೆ ಆಗಿದ್ದರೂ ಸಹಿತ, ಈ ಬಂಧನಗಳು ಹಲವು ವಿಧವಾಗಿದ್ದು, ಜೊತೆಗೆ ಗೂಢವೂ ಆಗಿರುತ್ತವೆ. ಅತ್ಯಂತ ಗಮನಾರ್ಹವಾದ ಮತ್ತು ಕಠಿಣಮಯ

ವಿಷಯವೆಂದರೆ, ಈ ಎಲ್ಲ ಬಂಧನಗಳೂ "ಅಹಂಪ್ರತ್ಯಯ(egoism)ನಿಂದ ಆವೃತಗೊಂಡಿವೆ. ಅಲ್ಲಿಂದಲೇ ರೂಪುಗೊಂಡಿವೆ. ಜೊತೆಗೆ ನಮ್ಮಲ್ಲಿ ವೈಯಕ್ತಿಕವಾಗಿ ಅಸ್ತಿತ್ವದಲ್ಲಿರುವ ವಿಭ್ರಮೆಯೂ (Delusion) ಸಹಿತ ಅಪಾರ ಪ್ರಮಾಣದಲ್ಲಿ ಇರುತ್ತದೆ. ವಿಶ್ವಾತ್ಮವಾಗಿರುವದರ ಬದಲಿ "ಏಕ-ಜೀವಿ"ಯಾಗಿ, ಭವ-ಜೀವಿಯಾಗಿ, ಏಕಮೇವಾದ್ವಿತೀಯನಂತೆ ಇರುವ ಕಲ್ಪನೆಯಲ್ಲಿ ಉಳಿಯುತ್ತೇವೆ. ಆದರೆ ಕಾಲಾತೀತವಾಗಿ, ಅವಕಾಶವಾಗಿ, ಮತ್ತು ಕಾರಣತ್ವದಿಂದ ಆಚೆ ಇರುವವನಾಗಿ, ನಾವೆಲ್ಲರೂ ಸ್ವಭಾವದಲ್ಲಿ ಮತ್ತು ಅಸ್ತಿತ್ವದಲ್ಲಿ ಬ್ರಹ್ಮವೇ ಆಗಿದ್ದೇವೆ. ಒಂದೇ ಆರ್ಣವದ (ಅವಕಾಶದಲ್ಲಿರುವ ಸಾಗರ) ಅಲೆಗಳಾಗಿದ್ದೇವೆ. ಆದರೆ ಪ್ರತಿಯೊಬ್ಬರೂ ಸಹಿತ ಆ ದೈವತ್ವದ ವ್ಯಾಪಕತ್ವದಲ್ಲಿ ಬ್ರಹ್ಮವೇ ಆಗಿದ್ದೇವೆ. ಅದಕ್ಕಾಗಿಯೇ ನಾವು ವಿಭಿನ್ನರನ್ನಾಗಿಯೂ, ವೈವಿಧ್ಯಮಯವಾಗಿಯೂ ಮತ್ತು ಸೀಮಿತಗೊಂಡ ವ್ಯವಸ್ಥೆಯಲ್ಲಿಯೇ ಇರುವಂತೆಯೇ ನಾಮ-ರೂಪಗಳಲ್ಲಿ ಈ ಲೋಕದ ಲೀಲೆಗಳ ಮೂಲಕ ಅಸ್ತಿತ್ವ ಪಡೆದುಕೊಳ್ಳುವ ವಿಶ್ವ ನಾಟಕದ ಪ್ರದರ್ಶನಕ್ಕೆ ಸಲ್ಲುವಂತಾಗಿದೆ.

ಕೇವಲ ಬ್ರಹ್ಮವೇ ಮಾತ್ರವಿದ್ದು ಅಲ್ಲಿ ಬೇರೆ ಏನೂ ಅಸ್ತಿತ್ವದಲ್ಲಿ ಇರುವದಿಲ್ಲ ಎನ್ನಲಾಗುತ್ತದೆಯೇ? ಈ ತೆರನಾದ ಅಹಂಭಾವತ್ವದ ವಿಭ್ರಮೆಯು ಆಗಮಿಸಿದಲ್ಲಿ, ನಾವು ಈ ರೀತಿಯಾಗಿ ಉತ್ತರ ಕೊಡಬೇಕಾಗುತ್ತದೆ – "ಅಲ್ಲಿ ಬೇರೆಯದೇ ಅಸ್ತಿತ್ವವಿರುತ್ತದೆ. ಆದರೆ ಅದು ಕೇವಲ ಆವಿಷ್ಕಾರದಲ್ಲಿ ಮಾತ್ರವೇ ಇರುತ್ತದೆ. ಏಕೆಂದರೆ, ಇದು ನೈಜವಾದುದಲ್ಲ. ಯಾವ ತೆರನಾಗಿ ಒಬ್ಬ ನಟನು ವಿಭಿನ್ನ ಪಾತ್ರಗಳನ್ನು ಪ್ರದರ್ಶಿಸುತ್ತಾನೆಯೋ ಹಾಗೆ ಇರುತ್ತದೆ. ಆದರೆ ಈ ಪಾತ್ರಗಳು "ಅವನಲ್ಲ." ಆದರೆ ಒಂದು ಆ ಒಂದು ಕ್ಷಣದಲ್ಲಿ ಆ ಪಾತ್ರದಲ್ಲಿ "ಅವನೂ" ಇದ್ದಾನೆ. ಜೊತೆಗೆ ಅವನ ಅಭಿವ್ಯಕ್ತಿಯ ರೂಪವೂ ಇರುತ್ತದೆ. ಅವನ ಪ್ರತಿಯೊಂದೂ ಪಾತ್ರದಲ್ಲಿ ಅವನಿದ್ದೇ ಇರುತ್ತಾನೆ. ಅದೇ ರೀತಿಯಲ್ಲಿ ಬ್ರಹ್ಮವು ತನ್ನನ್ನು ತಾನೇ ಕಾಲದಲ್ಲಿ, ಅವಕಾಶದಲ್ಲಿ ಮತ್ತು ಕಾರಣತ್ವದಲ್ಲಿ ವ್ಯಾಪ್ತಿಗೊಳಿಸಿಕೊಂಡಿರುತ್ತಾನೆ. "ಅವನನ್ನು" ಯಾವುದೂ ನಿಬಂಧಿಸುವದಿಲ್ಲ. ಆದರೆ ಅವನಲ್ಲಿ ಅಸ್ತಿತ್ವ ಪಡೆದುಕೊಂಡಿರುತ್ತವೆ. ಇವು ಯಾವುದೇ ಕ್ಷಣದಲ್ಲೂ ಲಯವಾಗಬಹುದು. ಬದಲಾವಣೆ ಹೊಂದಬಹುದು. ಮತ್ತು ಕಾಲದಲ್ಲಿಯೂ, ಅವಕಾಶದಲ್ಲಿಯೂ ಜೊತೆಗೆ ಕಾರಣತ್ವದಲ್ಲಿಯೂ ಸಹಿತ ಅವನು ತನ್ನನ್ನು ತಾನೇ ಹಲವು ನಾಮ-ರೂಪಗಳಲ್ಲಿ ಸಂಲಗ್ನಗೊಳಿಸಿಕೊಂಡಿರುತ್ತಾನೆ. ಹೀಗಾಗಿ ಇವು



ಬ್ರಹ್ಮನ ವೈಶ್ವಿಕ-ಅಸ್ತಿತ್ವದ ಅಂಶಗಳಾಗಿವೆ. ಇವು ನಿಜವಾಗಿಯೂ ಆವಿರ್ಭಾವವಾದಂತೆ ಇದ್ದರೂ ಸಹಿತ, ಈ ಆವಿರ್ಭಾವದ ಆಚೆ ಅವುಗಳಿಗೆ ಅಸ್ತಿತ್ವ ಇರುವದಿಲ್ಲ.

**CWSA 12: 6** **– ಶ್ರೀ ಅರವಿಂದರು**

*

.... ಮಾನವನ ಕ್ರಿಯೆಗಳು ಪ್ರತಿಕ್ರಿಯೆಗಳನ್ನು ಆಧಾರವಾಗಿರಿಸಿಕೊಂಡಿವೆ. ಮತ್ತೊಂದು ಕಡೆಗೆ, ಈ ದೈವೀ ಕ್ರಿಯೆಯು ಪ್ರತಿಯೊಂದು ವಸ್ತುವಿಗೆ ಮತ್ತು ಜೀವಿಗೆ ಅತ್ಯಾವಶ್ಯವಾಗಿರುವ "ಧರ್ಮದ ಅಸ್ಮಿತೆ"ಯ (Identity) ಮೂಲಕವಾಗಿ ಯಾದೃಚ್ಛಿಕವಾದ ದೃಷ್ಟಿಕೋನದ ಮೂಲಕವೇ ನಿಬದ್ಧಗೊಳಿಸಲ್ಪಟ್ಟಿರುತ್ತದೆ. ಇದೊಂದು ನಿರಂತರವಾದ ವ್ಯಕ್ತಭಾವವಾಗಿದ್ದು (ಅನುಭವವಾಗಿದ್ದು), ಸ್ವಯಂಪ್ರವರ್ತಿತಗೊಳ್ಳುತ್ತದೆ, ಸುಲಭ ಗ್ರಾಹ್ಯವೂ ಆಗಿರುತ್ತದೆ. ಅದರದೇ ಆದ ಅಸ್ಮಿತೆಯೊಂದಿಗೆ, ಅಂದರೆ ಪ್ರತಿಯೊಂದೂ ಜೀವಿಯ ಧರ್ಮದಂತೆಯೇ ಪ್ರಕಟಗೊಳ್ಳುತ್ತದೆ. (ಇಲ್ಲಿ ನಾನು "ಧರ್ಮ" ಎನ್ನುವ ಪದವನ್ನು ಬಳಸುತ್ತಿದ್ದೇನೆ. ಏಕೆಂದರೆ ಇದು ನಿಯತಿಯಲ್ಲ; "ಸತ್ಯ"ವೂ ಅಲ್ಲ. ಆದರೆ ಇವೆರಡೂ ಸಂಯೋಗಗೊಂಡ ಸ್ಥಿತಿ ಇದಾಗಿದೆ). ಇದರ ಈ ತೆರನಾದ ವ್ಯವಸ್ಥೆಯಿಂದಾಗಿ, ಶೀಘ್ರಾತಿಶೀಘ್ರವಾಗಿ ಸೀಳುದಾರಿಯಲ್ಲಿ ಗುರಿಯ ಕಡೆಗೆ ಇಚ್ಛಿಸುತ್ತಿದ್ದಲ್ಲಿ, ಇಲ್ಲಿ ಬಹುತೇಕವಾಗಿ ಅನುಕೂಲದಾಯಕವಾದ ಸಂನಿವೇಶಗಳ ತಿರುವು ಇರುತ್ತದೆ. ಸಾಂದರ್ಭಿಕವಾಗಿ ಈ ಕ್ರಿಯೆಯು ಯಾವಾಗಲೂ ಈ ತಿರುವಿನಲ್ಲಿಯೇ ಆಕೃತಿಗೊಳ್ಳುತ್ತದೆ. ಇದರ ಪರಿಣಾಮವೆಂದರೆ, ಇಂತಹದೇ ದೈವೀ ಚೇತನದ ಕ್ರಿಯೆಯು ಸಂಪೂರ್ಣವಾಗಿ ಬೇರೆಯದೇ ಆದ ರೂಪದಲ್ಲಿರುತ್ತದೆ. ಕೆಲವೊಮ್ಮೆ ತದ್ವಿರುದ್ಧವಾಗಿರುತ್ತದೆ. ಆದರೆ ಈ ವಿಷಯವನ್ನು ಹೇಗೆ ವಿವರಿಸುವದು? .... ಒಂದು ಸಂದರ್ಭದಲ್ಲಿ ಆ "ಬ್ರಹ್ಮ" (Master) ಈ ವ್ಯಕ್ತಿಯನ್ನು ಪ್ರೇಮದಿಂದ ಕಾಣುವದಿಲ್ಲ. ಇದು ಇಷ್ಟೇ ಸರಳವಾದ ವಿಷಯವಾಗಿದೆ.

**ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 22, 1964**

**ಸನಾತನ ಧರ್ಮವೆನ್ನುವದು ನಮ್ಮ ಜೀವನದಲ್ಲಿ ದೇವರನ್ನು ಸಾಕ್ಷಾತ್ಕಾರ–ಗೊಳಿಸಿಕೊಳ್ಳುವದಕ್ಕೆ ಇರುವದು**

ಭವಿಷ್ಯದಲ್ಲಿನ ಬದಲಾವಣೆಗಾಗಿ ಹಿಂದೂ ಸಮಾಜವು ಕಡ್ಡಾಯವಾಗಿ ಒಂದು ನವೀನ ದೃಷ್ಟಿಕೋನದ ವೈಶ್ವಿಕ ಮಾನಕವನ್ನು ರೂಪಿಸಿಕೊಂಡು ಸಾಗಬೇಕಾಗಿದೆ. ಹಿಂದೂಗಳಾಗಿರುವ, ಹಿಂದೂಗಳಾಗಿಯೇ ಮುಂದುವರೆಯುವ ನಾವು ಈ ವಿವರಗಳನ್ನು ನಮ್ಮಲ್ಲಿಯೇ ಕಂಡುಕೊಳ್ಳಬೇಕಾಗಿದೆ. ಈಗ ನಾವು ಒಂದೇ ಮಾನಕವನ್ನು ಹೊಂದಿದ್ದು ಅದು ಏಕಕಾಲಕ್ಕೆ ವೈಶ್ವಿಕವಾಗಿಯೂ ಮತ್ತು ಪ್ರತ್ಯೇಕವಾಗಿಯೂ ಇದ್ದು, ಶಾಶ್ವತವಾದ ಮತವಾಗಿದೆ. ಇದೇ ಆಧಾರಭೂತವೂ ಆಗಿದ್ದು, ಚಿರಂತವೂ ಆಗಿದೆ ಮತ್ತು ಭಾರತದಲ್ಲಿ ಅಂತರ್ನಿಹಿತಗೊಂಡಿರುತ್ತದೆ. ಇದೇ ಔನತ್ಯದೆಡೆಗೆ ಸಾಗುತ್ತಿರುವ, ಕ್ಷರಾಕ್ಷರ (mutable) ಸಂಗತಿಯೂ ಆಗಿದ್ದು ಬಹು ಆಯಾಮವನ್ನು ಹೊಂದಿದ್ದು, ಇದನ್ನೇ ನಾವು ಹಿಂದೂ ಧರ್ಮ (Hinduism) ಎಂದು ಕರೆಯುತ್ತೇವೆ. ನೀವು ಯಾವುದನ್ನು ಇಷ್ಟಪಡುತ್ತೀರೋ ಅದಕ್ಕೆ ಕವಚ ಜೀವಿಯಂತೆ (Limpet) ತೀವ್ರವಾಗಿ ಅಂಟಿಕೊಂಡಿರುವದು ಧರ್ಮವಲ್ಲ. ಹಾಗೆಂದು ಧರ್ಮವನ್ನು ಲಕ್ಷಿಸದೇ ಮತ್ತೊಂದೆಡೆಗೆ ಪುಟ–ನೆಗೆಯುವದೂ ಅಲ್ಲ.

ಈ ಶಾಶ್ವತವಾದ, ಧರ್ಮವು ನಮ್ಮ ಆಂತರ್ಯದಲ್ಲಿ ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವದರ ಸಲುವಾಗಿ (ಮತ್ತು ಬಾಹ್ಯ–ಬದುಕಿನಲ್ಲಿಯೂ ಸಹಿತ) ಜೊತೆಜೊತೆಗೆ ಕೇವಲ ವ್ಯಕ್ತಿಗತವಾಗಿ ಅಲ್ಲದೇ ಸಮಾಜಕ್ಕಾಗಿಯೂ ಸಹಿತ ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವದಾಗಿದೆ. ಈ ಕಾರಣಕ್ಕಾಗಿಯೇ "ಏಷ ಧರ್ಮಃ ಸನಾತನ" ಎಂದಿರುವದು. ದೇವರು ಯಾವಾಗಲೂ ಪುರಾತನನೂ (Antiquity) ಅಲ್ಲ; ನೂತನವೂ (Novelty) ಅಲ್ಲ. ಅವನು ಮಾನವ ಧರ್ಮಶಾಸ್ತ್ರವೂ ಅಲ್ಲ; ವಿದ್ಯಾರಣ್ಯವೂ ಅಲ್ಲ; ರಘುನಂದನನೂ ಅಲ್ಲ; ಮೇಲಾಗಿ ಅವನು ಯುರೋಪಿನವನೂ ಅಲ್ಲ.

ದೇವರು ಎಂದರೆ ಸಾರಭೂತವಾಗಿ ಸಚ್ಚಿದಾನಂದವಾಗಿದ್ದು, ಸತ್ಯದಲ್ಲಿ, ಪ್ರೇಮದಲ್ಲಿ, ಶಕ್ತಿಯಲ್ಲಿ – ಸಂತ್ಯವಾಗಿ (ಸತ್ಯದ ಛಂದಃಸ್ವರೂಪ), ಸಾಮರ್ಥ್ಯವಾಗಿ, ಮತ್ತು ಪ್ರೇಮವಾಗಿದ್ದಾನೆ. ಮಾನವರಲ್ಲಿ ಸದಾ ಪ್ರೇಮ ಭಾವವನ್ನು ಹೆಚ್ಚಳ ಮಾಡುವವನಾಗಿದ್ದಾನೆ. ದಿವ್ಯನಾಗಿದ್ದಾನೆ. ಇದು ವೈವಸ್ವತ ಮನುವಿನ ನಿಯಮವಾಗಿದೆ. ಇದು ಸನಾತನ ಧರ್ಮವಾಗಿದ್ದು ಹಿಂದೂ ಶಾಸ್ತ್ರವಾಗಿರುತ್ತದೆ.



ಇಲ್ಲಿ ಮುಖ್ಯವಾಗಿ ದೇವರು ತ್ರಿಗುಣಾತ್ಮಕ–ಸೌಷಮ್ಯವಾ (Triple-harmony) ಗಿದ್ದು, ಕೇವಲ ಒಂದೇ ಆಯಾಮದಲ್ಲಿ ಇರುವದಿಲ್ಲ. ಏಕಮುಖಿಯಾಗಿಯೂ ಇರುವದಿಲ್ಲ. ನಮ್ಮ ಪ್ರೇಮವು, ನಮ್ಮನ್ನು ಅಶಕ್ತರನ್ನಾಗಿಸಬಾರದು; ಅಂಧರನ್ನಾಗಿಸಬಾರದು; ಮಂದಮತಿಗಳನ್ನಾಗಿಸ–ಬಾರದು. ನಮ್ಮಲ್ಲಿರುವ ಬಲವು – ಸಾಮರ್ಥ್ಯವು ನಮ್ಮನ್ನು ಕಠಿಣರನ್ನಾಗಿಸ–ಬಾರದು, ಮತ್ತು ಉಗ್ರರನ್ನಾಗಿಸಬಾರದು. ನಮ್ಮ ತತ್ತ್ವಗಳು ನಮ್ಮನ್ನು ದುರಭಿಮಾನರನ್ನಾಗಿಸಬಾರದು. ಮತ್ತೆ ಅತಿಭಾವುಕರನ್ನಾಗಿಸಬಾರದು.

ಇದನ್ನು ಶಾಂತವಾಗಿ, ಸಹನೆಯಿಂದ, ನಿಷ್ಪಕ್ಷಪಾತವಾಗಿ ಯೋಚಿಸಬೇಕಿದೆ. ಸರ್ವವನ್ನೂ ಪ್ರೇಮಿಸುವಲ್ಲಿ, ಉದ್ದೇಶಪೂರ್ವಕವಾಗಿ ಆದರೆ ಜಾಣ್ಮೆಯಿಂದ ಪ್ರೇಮಿಸುವದನ್ನು ಕಲಿಯೋಣ; ಸಾಮರ್ಥ್ಯ–ದೊಂದಿಗೆ, ಉದಾತ್ತತೆಯೊಂದಿಗೆ ಮತ್ತು ಶ್ರದ್ಧಾಪೂರ್ವಕವಾಗಿ ಕ್ರಿಯೆಯಲ್ಲಿ ತೊಡಗೋಣ. ಇಷ್ಟೆಲ್ಲ ಆದ ನಂತರದಲ್ಲಿಯೂ ನಾವು ತಪ್ಪುಗಳನ್ನು ಮಾಡಿದರೆ, ಆಗ ದೇವರೂ ಏನನ್ನೂ ಮಾಡಲಾರ. ಅದಕ್ಕಾಗಿ ನಾವು ನಿರ್ಧಾರಕ್ಕೆ ಬರುವಾ; ಕಾರ್ಯಪ್ರವೃತ್ತರಾಗುವಾ. ಅದರ ಫಲಾಫಲವನ್ನು "ಅವನು" ನಿರ್ಧರಣೆ ಮಾಡುತ್ತಾನೆ. "ಅವನು" ಏನನ್ನೇ ನಿರ್ಧರಿಸಲಿ ಅದು ನಮಗೆ ಒಳ್ಳೆಯದಕ್ಕೇ ಆಗಿರುತ್ತದೆ.

**CWSA 12: 53-54** **– ಶ್ರೀ ಅರವಿಂದರು**

*

## ಶ್ರೀ ಅರವಿಂದರು, ಭಾರತ ಮತ್ತು ಸನಾತನ ಧರ್ಮ

**ಹಿಂದೂ ಧರ್ಮದ ಸತ್ಯಗಳ ಸಾಕ್ಷಾತ್ಕಾರ**

ಆ ಸಮಯದಲ್ಲಿ ಏನಾಗಿತ್ತು ಎಂದು ಹೇಳುವದಕ್ಕೆ ನಾನು ಉತ್ಸುಕನಾಗಿಲ್ಲ. ಆದರೆ ಈಗ ದಿನದಿಂದ ದಿನಕ್ಕೆ, "ಅವನು" ತನ್ನ ಅಚ್ಚರಿದಾಯಕವಾದ ಸಂಗತಿಗಳನ್ನು ತೋರಿಸುತ್ತಿದ್ದಾನೆ. ಈ ಮೂಲಕವಾಗಿ ಹಿಂದೂ ಧರ್ಮದ

ಸತ್ಯಗಳನ್ನು ಸಾಕ್ಷಾತ್ಕಾರಗೊಳಿಸುವ ಮೂಲಕ ಅವುಗಳನ್ನು ತಿಳಿಸಲು ಅನುಕೂಲವಾಗಿದೆ. ಈ ಮೊದಲಂತೂ ನನ್ನಲ್ಲಿ ಹಲವಾರು ಸಂಶಯಗಳೇ ತುಂಬಿದ್ದವು. ನಾನು ಸಂಪೂರ್ಣವಾಗಿ ವಿದೇಶೀ–ವಿಚಾರಧಾರೆಯಲ್ಲಿಯೇ ಬೆಳೆಯುವಂತಹ ಸ್ಥಿತಿ ಇತ್ತು. ಅಲ್ಲಿನ ವಾತಾವರಣವು ಸಹಿತ ಅದೇ ತೆರನಾಗಿ ವಿದೇಶೀ ನೆಲೆಯಲ್ಲಿಯೇ ರೂಪಿಸಲ್ಪಟ್ಟಿತ್ತು. ಹಿಂದೂ ಧರ್ಮದಲ್ಲಿರುವ ಹಲವಾರು ಸಂಗತಿಗಳಿಂದಾಗಿ ನಾನೂ ಸಹಿತವಾಗಿ ಅದೊಂದು ಕಾಲ್ಪನಿಕ ಸಂಗತಿ ಎಂದೇ ಪರಿಭಾವಿಸಿದ್ದೆ. ಅಲ್ಲಿ ಇರುವದು ಕೇವಲ ಕನಸು ಮಾತ್ರ; ಹೆಚ್ಚಾಗಿ ವಿಭ್ರಮೆಗಳೇ ಜಾಸ್ತಿ, ಮತ್ತು ಮಾಯೆಯಿಂದ ಆವೃತವಾಗಿದೆ ಎಂದೇ ಭಾವಿಸಿದ್ದೆ.

ಆದರೆ, ಇದೀಗ, ದಿನದಿಂದ ದಿನಕ್ಕೆ ಹಿಂದೂ ಧರ್ಮದ ಸತ್ಯಗಳು ನನ್ನ ಅರಿವಿಗೆ, ಅನುಭವಕ್ಕೆ ಬರುತ್ತಿರುವ ಸಂಗತಿಯಿಂದಾಗಿ, ನಾನು ಮನೋಗತ ಮಾಡಿಕೊಂಡಿರುವದೇನೆಂದರೆ, ಹಾಗೂ ಹೃದ್ಗತವಾಗಿರಿಸಿಕೊಂಡಿರುವ ಸಂಗತಿ ಮತ್ತೂ ಮೇಲಾಗಿ ನಾನು ದೈಹಿಕವಾಗಿ ಇವುಗಳನ್ನು ಅನುಭವಿಸುತ್ತಿರುವ–ದರಿಂದಾಗಿ, ಇವುಗಳೆಲ್ಲವೂ ನನಗಾಗಿ ಜೀವಂತ ಅನುಭವಗಳಂತೆ ಕಾಣುತ್ತಿವೆ. ಸರ್ವ ವಸ್ತುಗಳ ಬಗೆಗೆ ಯಾವುದೇ ಲೌಕಿಕ ವಿವರಣೆಯನ್ನಾಗಲೀ (ಭೌತಿಕ ವಿವರಣೆ) ಅಥವಾ ವೈಜ್ಞಾನಿಕ ವಿವರಣೆಯನ್ನು ಬೇಡದೇ, ತಂತಾನೇ ಪೂರ್ತಿಯಾಗಿ ಅರ್ಥವನ್ನು ಕಂಡುಕೊಳ್ಳುತ್ತಿದ್ದೇನೆ. ಪ್ರಪ್ರಥಮ ಬಾರಿಗೆ ನಾನು “ಅವನನ್ನು” ಸಂಪರ್ಕಿಸಿದಾಗ, ಆಗ ಅದು ಕೇವಲ ಭಕ್ತಿಯ ಪರಾಕಾಷ್ಠೆಯಾಗಿರಲಿಲ್ಲ. ಅದೂ ಅಲ್ಲದೇ ಸಂಪೂರ್ಣ ಜ್ಞಾನಿಯ ನೆಲೆಯದ್ದೂ ಆಗಿರಲಿಲ್ಲ. ಬಹುದಿನಗಳ ಹಿಂದೆಯೇ ಅಂದರೆ ಬಡೋದಾದಲ್ಲಿ ಇದ್ದಾಗಲೇ, ನಾನು “ಅವನ” ಸಂಪರ್ಕಕ್ಕೆ ಬಂದಿದ್ದೆನು. ಇಂದು ಸ್ವದೇಶೀ ಚಳವಳಿ ಪ್ರಾರಂಭಗೊಳ್ಳುವದಕ್ಕಿಂತ ಮುಂಚೆಯೇ ನಡೆದ ಘಟನೆ. ಹೀಗಾಗಿ “ಅವನ” ಮೂಲಕವೇ ಈ ಜನ–ಸಮುದಾಯದ ನೆಲೆಗೆ ತಲುಪಿದ್ದೇನೆ.

ನಾನು ದೇವರನ್ನು ಸಂಪರ್ಕಿಸಿದ ಆ ಸಮಯದಲ್ಲಿ, ಆಗ ನಾನು ಕೇವಲ ಪ್ರಚಲಿತವಿದ್ದ ವಿಶ್ವಾಸವನ್ನು ಮಾತ್ರ ಅವನ ವಿಷಯದಲ್ಲಿ ಹೊಂದಿದ್ದೆನು. ನನ್ನಲ್ಲಿ ನಿರೀಶ್ವರವಾದವೇ ತುಂಬಿತ್ತು; ನಾಸ್ತಿಕನೋರ್ವ ನನ್ನಲ್ಲಿ ನೆಲೆಸಿದ್ದ; ಸಂದೇಹವಾದಿಯಾಗಿದ್ದೆ. ಯಾವ ಕಾರಣಕ್ಕೂ ದೇವನೊಬ್ಬನಿದ್ದಾನೆ ಎನ್ನುವ ಮನೋಭಾವವೇ ನನ್ನಲ್ಲಿ ಇರಲಿಲ್ಲ. ಅವನ ಅಸ್ತಿತ್ವವನ್ನೇ ನಾನು



ಅನುಭವಿಸುತ್ತಿರಲಿಲ್ಲ. ಆದರೂ ಸಹಿತ, ಒಂದು ವಿಶಿಷ್ಟ ಅಂಶವು ನನ್ನನ್ನು ವೇದಗಳ ಸತ್ಯದೆಡೆಗೆ ಸೆಳೆಯಿತು. ಯೋಗದಲ್ಲಿ ಎಲ್ಲಿಯೋ ಒಂದು ಕಡೆಗೆ ಸಮರ್ಥವಾದ – ಬಲಶಾಲಿಯಾದ – ಚಿರಸತ್ಯವೊಂದು ಇದೆ, ಇರಲೇಬೇಕು ಎನ್ನುವದು ನನ್ನ ಅನುಭವಕ್ಕೆ ಬಂದಿತು. ಆ ಶಕ್ತಿಯೂ ಸಹಿತ ವೇದಾಂತವನ್ನೇ ಆಧಾರಭೂತವನ್ನಾಗಿಸಿಕೊಂಡಿದೆ ಎಂದೂ ತಿಳಿಯಿತು.

ಹೀಗಾಗಿ ನಾನು ಯೋಗದೆಡೆಗೆ ಸಂಪೂರ್ಣ ಪರಿವರ್ತನಾಗಿ ಅದನ್ನು ಆಚರಣೆಗೊಳಸಿಕೊಳ್ಳುವದರ ಮೂಲಕ ಮತ್ತು ಅನುಷ್ಠಾನಗೊಳಿಸಿಕೊಳ್ಳುವದರ ಮೂಲಕ, ನನ್ನ ಚಿಂತನ–ವಿಚಾರಗಳು ಸೂಕ್ತವಾಗಿವೆ ಎನ್ನುವದನ್ನು ಕಂಡುಕೊಂಡೆ. ನಾನು ಇದನ್ನು ನನ್ನ ಆತ್ಮಶಕ್ತಿಯಿಂದಲೇ ಕೈಗೊಂಡು. ಮತ್ತು “ಅವನಲ್ಲಿ” ಪ್ರಾರ್ಥನೆ ಸಲ್ಲಿಸುವದರ ಮೂಲಕವಾಗಿಯೇ ಅನುಭವಕ್ಕೆ ತಂದುಕೊಂಡಿದ್ದೇನೆ.

“ಒಂದು ವೇಳೆ ನೀನೇ ಕರ್ತೃವಾಗಿದ್ದಲ್ಲಿ ಆಗ ನನ್ನ ಹೃದಯವೂ ಅದನ್ನು ಅರಿತಿರಲೇಬೇಕು. “ ನಾನು ಮುಕ್ತಿಯನ್ನು ಬಯಸುತ್ತಿಲ್ಲ ಎನ್ನುವದು ನಿನಗೆ ತಿಳಿದಿದೆ. ಇನ್ನುಳಿದವರು ಯಾವುದನ್ನು ಆಶಿಸುತ್ತಾರೋ, ಅದನ್ನು ನಾನು ಆಶಿಸುತ್ತಿಲ್ಲ. ಈ ದೇಶವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ, ಉನ್ನತೀಕರಣ–ಗೊಳಿಸುವದರ ಸಲುವಾಗಿ ಮಾತ್ರ ನನಗೆ ಶಕ್ತಿಯನ್ನು ದಯಪಾಲಿಸು ಎಂದು ಕೇಳುತ್ತಿದ್ದೇನೆ. ಈ ಜನತೆಯ ಸಲುವಾಗಿಯೇ ಬದುಕಿ ಮತ್ತು ಅವರ ಸಲುವಾಗಿಯೇ ಕಾರ್ಯ ನಿರ್ವಹಿಸುವಂತಹ ಸಾಮರ್ಥ್ಯ ನೀಡು ಎಂದು ಬೇಡಿಕೊಳ್ಳುತ್ತೇನೆ. ನಾನು ಯಾರನ್ನು ಪ್ರೇಮಿಸುತ್ತೇನೆಯೋ, ಪ್ರೀತಿಸುತ್ತೇನೆಯೋ, ಯಾರ ಸಲುವಾಗಿ ಪ್ರಾರ್ಥನೆಯನ್ನು ಮಾಡುತ್ತೇನೆಯೋ, ಅಂತಹ ಜೀವನಕ್ಕೇ ವಿಧೇಯನಾಗಿರುವಂತೆ ಮತ್ತು ಸಮರ್ಪಣೆಗೊಳಿಸಿಕೊಳ್ಳುವಂತೆ ಜೀವನವನ್ನು ನನಗೆ ದಯಪಾಲಿಸು ಎಂದು ಪ್ರಾರ್ಥಿಸುತ್ತೇನೆ.

ನಾನು ಯೋಗದ ಸಾಕ್ಷಾತ್ಕಾರದ ಸಲುವಾಗಿ ಸುದೀರ್ಘವಾದ ಹೋರಾಟವನ್ನೇ (ಪ್ರಯತ್ನವನ್ನೇ) ಮಾಡಿದ್ದೇನೆ. ಮತ್ತು ಕೆಲ ಅಂಶಗಳಲ್ಲಿ ಇದನ್ನು ಪಡೆದುಕೊಂಡಿದ್ದೇನೆ. ಆದರೆ ನಾನು ಅತಿಶಯವಾಗಿ ಅಭೀಪ್ಸೆ ಹೊಂದಿರುವ, ತೃಪ್ತಿಯ ಹಂತವನ್ನು ಇನ್ನೂ ತಲುಪಿಲ್ಲ.

**CWSA 8: 9-10**

*

**ಭಾರತದ ಪುನರುತ್ಥಾನವು ಸನಾತನ ಧರ್ಮದ ಪುನರುತ್ಥಾನವಾಗಿದೆ**

ಈ ಧರ್ಮವನ್ನು ನಾನು ಜಗತ್ತಿನ ಎದುರು ಉನ್ನತ ಸ್ಥಿತಿಗೆ ಉತ್ತರಿಸುತ್ತಿದ್ದೇನೆ. ಇದನ್ನು ನಾನು ಪರಿಪೂರ್ಣವಾಗಿ ಮಾಡಿದ್ದೇನೆ ಮತ್ತು ಋಷಿಗಳು, ಸಂತರು ಮತ್ತು ಅವತಾರಿಗಳ ಮುಖಾಂತರ ಅಭಿವೃದ್ಧಿಪಡಿಸಿದ್ದೇನೆ. ರಾಷ್ಟ್ರ–ರಾಷ್ಟ್ರಗಳಲ್ಲಿ ನನ್ನ ಕಾರ್ಯವನ್ನು ಮಾಡುವದಕ್ಕಾಗಿ ಅದು ಮುಂದುವರೆಯುತ್ತದೆ. ನನ್ನ ಸಂದೇಶವನ್ನು ಸಾರುವದಕ್ಕಾಗಿ ನಾನು ಈ ದೇಶವನ್ನು ಉನ್ನತ ಸ್ಥಿತಿಗೆ ಉತ್ತರಿಸುತ್ತಲಿದ್ದೇನೆ. ಇದು ಸನಾತನ ಧರ್ಮ, ಇದು ಶಾಶ್ವತವಾದ ಧರ್ಮ. ಅದು ನಿಜವಾಗಿಯೂ ನಿನಗೆ ಮೊದಲು ಗೊತ್ತಿರಲಿಲ್ಲ. ಆದರೆ ಈಗ ನಾನು ನಿನಗೆ ತೋರಿಸಿಕೊಟ್ಟಿದ್ದೇನೆ. ನಿನ್ನೊಳಗಿನ ಅಜ್ಞೇಯತಾವಾದಕ್ಕೆ (ದೇವರ ಅಸ್ತಿತ್ವವು ತಮಗೆ ನಿಲುಕವದಿಲ್ಲ ಎಂಬ ವಾದ) ಮತ್ತು ಸಂದೇಹತಾವಾದಕ್ಕೆ ಉತ್ತರಿಸಿದ್ದೇನೆ. ಯಾಕಂದರೆ ನಿನ್ನ ಆಂತರ್ಯದಲ್ಲಿ (ಒಳಗೆ) ಮತ್ತು ಬಾಹ್ಯದಲ್ಲಿ (ಹೊರಗೆ) ನಾನು ಸ್ಥೂಲ ಮತ್ತು ಆತ್ಮಿಕ ಸಾಕ್ಷ್ಯಗಳನ್ನು ನೀಡಿದ್ದೇನೆ. ಅವು ನಿನಗೆ ತೃಪ್ತಿ ನೀಡಿವೆ. ನೀನು ಮುಂದೆ ಹೋದಾಗ ನಿನ್ನ ದೇಶಕ್ಕೆ ಯಾವಾಗೂ ಈ ಶಬ್ದವನ್ನು ಹೇಳು, ಅವು (ಭಾರತ ಮತ್ತು ಸನಾತನ ಧರ್ಮ) ಸನಾತನ ಧರ್ಮಕ್ಕಾಗಿ ಏಳುತ್ತವೆ. ಅವು ತಮಗಾಗಿ ಅಲ್ಲ, ಆದರೆ ಜಗತ್ತಿಗಾಗಿ ಏಳುತ್ತವೆ. ಜಗತ್ತಿನ ಸೇವೆಗೋಸ್ಕರ ನಾನು ಅವುಗಳಿಗೆ ಸ್ವಾತಂತ್ರ್ಯವನ್ನು ಕೊಡುತ್ತಿದ್ದೇನೆ. ಆದ್ದರಿಂದ ಯಾವಾಗ ಭಾರತವು ಏಳುತ್ತಿದೆ ಎಂದು ಹೇಳಲಾಗುವದೋ ಆವಾಗ ಸನಾತನ ಧರ್ಮವು ಏಳುತ್ತಿದೆ ಎಂದು ಹೇಳಲಾಗುತ್ತಿದೆ. ಭಾರತವು ಮಹಾನ್ ಆಗುವದೆಂದರೆ ಸನಾತನ ಧರ್ಮವೆ ಮಹಾನ್ ಆಗುವದು. ಯಾವಾಗ ಭಾರತವು ವಿಶಾಲವಾಗುತ್ತದೆ ಮತ್ತು ಬೆಳೆಯುತ್ತದೆ ಎಂದರೆ ಸನಾತನ ಧರ್ಮವೇ ವಿಶಾಲವಾಗುವದು ಮತ್ತು ಜಗತ್ತಿನಲ್ಲಿ ಪಸರಿಸುವದು ಎಂದು ಹೇಳಲಾಗುತ್ತದೆ. ಧರ್ಮಕ್ಕಾಗಿ, ಧರ್ಮದಿಂದ ಭಾರತಕ್ಕೆ ಅಸ್ತಿತ್ವವಿದೆ. ಧರ್ಮವನ್ನು ವೃದ್ಧಿಗೊಳಿಸುವದೆಂದರೆ ದೇಶವನ್ನು ವೃದ್ಧಿಗೊಳಿಸುವದು ಎಂದರ್ಥ. ನಾನು ಸರ್ವವ್ಯಾಪಿಯಾಗಿದ್ದೇನೆ ಮತ್ತು ಎಲ್ಲ ಮನುಷ್ಯರಲ್ಲಿ ಮತ್ತು ಎಲ್ಲ ವಸ್ತು–ಸಂಗತಿಗಳಲ್ಲಿ ಇದ್ದೇನೆ ಎಂಬುದನ್ನು, ನಾನು ಈ ಚಲನೆಯಲ್ಲಿ ಇದ್ದೇನೆ ಮತ್ತು ದೇಶಕ್ಕಾಗಿ ಶ್ರಮಪಡುವವರಲ್ಲಿ ಅಷ್ಟೇ ಅಲ್ಲ ಆದರೆ ಅವುಗಳನ್ನು ವಿರೋಧಿಸುವವರಲ್ಲಿ ಮತ್ತು ಮಾರ್ಗದಲ್ಲಿ ಅಡ್ಡಗಟ್ಟುವವರಲ್ಲಿಯೂ ನಾನು



ಕಾರ್ಯಮಾಡುತ್ತೇನೆ ಎಂಬುದನ್ನು ನಿನಗೆ ತೋರಿಸಿಕೊಟ್ಟಿದ್ದೇನೆ. ನಾನು ಎಲ್ಲರಲ್ಲಿ ಮತ್ತು ಎಲ್ಲೆಡೆಗೆ ಕಾರ್ಯಮಾಡುತ್ತೇನೆ. ಜನತೆ ತಾವು ಏನನ್ನೂ ಮಾಡಲಾರವೆಂದು ವಿಚಾರಿಸಬಹುದು ಅಥವಾ ವರ್ತಿಸಬಹುದು, ಆದರೆ ಅವರು ನನ್ನ ಉದ್ದೇಶಕ್ಕೆ ಸಹಾಯ ಮಾಡುವರು. ಅವರೂ ಕೂಡ ನನ್ನ ಕಾರ್ಯವನ್ನು ಮಾಡುತ್ತಿರುತ್ತಾರೆ, ಅವರು ನನ್ನ ವೈರಿಗಳಲ್ಲ, ಆದರೆ ನನ್ನ ಉಪಕರಣಗಳಾಗಿರುತ್ತಾರೆ. ನಿನ್ನ ಎಲ್ಲ ಕ್ರಿಯೆಗಳಲ್ಲಿ ಯಾವ ಕಡೆಗೆ ಎಂಬುದನ್ನು ಅರಿಯದೆ ನೀನು ಮುಂದೆ ಸಾಗುತ್ತಿರುವಿ. ನೀನು ಒಂದನ್ನು ಮಾಡಬಯಸುತ್ತಿ ಮತ್ತು ಬೇರೆಯದನ್ನು ಮಾಡುತ್ತಿ. ನೀನು ಒಂದು ಪರಿಣಾಮದತ್ತ ಗಮನವಿಡುವಿ ಮತ್ತು ನಿನ್ನ ಪ್ರಯತ್ನಗಳು ಬೇರೆಯೇ ಆಗಿರುವ ಅಥವಾ ವಿರೋಧಕಾರಕ–ವಾಗಿರುವದಕ್ಕೆ ಸಾಧಕವಾಗುತ್ತವೆ. ದೈವೀ ಶಕ್ತಿಯು ಮುಂದೆ ಸಾಗಿದೆ ಮತ್ತು ಜನರಲ್ಲಿ ಪ್ರವೇಶ ಶಕ್ತಿಯು ಮುಂದೆ ಸಾಗಿದೆ ಮತ್ತು ಜನರಲ್ಲಿ ಪ್ರವೇಶ ಮಾಡಿದೆ. ದೀರ್ಘಕಾಲದಿಂದ ಈ ಉನ್ನತಿಗಾಗಿ ಪ್ರಯತ್ನಪಡುತ್ತಿದ್ದೇನೆ ಮತ್ತು ಸಮಯ ಬಂದಿದೆ ಮತ್ತು ನಾನೇ ಅದನ್ನು ಸಿದ್ಧಿಯತ್ತ ಕೊಂಡೊಯ್ಯುತ್ತೇನೆ.

**CWSA 8: 10-11**

*

**ಭಾರತವು ಸನಾತನ ಧರ್ಮದೊಂದಿಗೆ ಜನಿಸಿತ್ತು**

ನನ್ನೊಳಗಿನ ಶಕ್ತಿಯೊಂದಿಗೆ ನಾನು ಈ ಮೊದಲೊಮ್ಮೆ ಮಾತನಾಡಿದೆನು ಮತ್ತು ಆಗ ನಾನು ಹೇಳಿದ್ದೇನಂದರೆ ಈ ಚಲನೆಯು ರಾಜಕೀಯ ಚಲನೆಯಲ್ಲ ಮತ್ತು ರಾಷ್ಟ್ರೀಯತೆಯು ರಾಜಕಾರಣವಲ್ಲ. ಆದರೆ ಇದು ಒಂದು ಧರ್ಮ, ಒಂದು ಮತ (ಪಂಥ), ಒಂದು ನಂಬುಗೆ. ಇಂದು ಪುನಃ ನಾನು ಅದನ್ನು ಹೇಳುತ್ತೇನೆ; ಆದರೆ ಬೇರೆ ರೀತಿಯಲ್ಲಿ, ರಾಷ್ಟ್ರೀಯತೆ ಒಂದು ಧರ್ಮ, ಪಂಥ, ಒಂದು ನಂಬುಗೆ ಎಂದು ಹೇಳುವದಿಲ್ಲ; ನಾನು ಅದನ್ನು ಸನಾತನ ಧರ್ಮ ಎಂದು ಹೇಳುತ್ತೇನೆ ಮತ್ತು ಅದು ನಮ್ಮ ರಾಷ್ಟ್ರಿಯತೆಯಾಗಿದೆ. ಈ ಹಿಂದು ರಾಷ್ಟ್ರವು ಸನಾತನ ಧರ್ಮದೊಂದಿಗೆ ಹುಟ್ಟಿತು. ಅದರೊಂದಿಗೆ ಅದು (ಹಿಂದು ರಾಷ್ಟ್ರವು) ಚಲಿಸುತ್ತದೆ; ಸನಾತನ ಧರ್ಮವು ಅವನತಿ ಹೊಂದುವದೊ ಆಗ ರಾಷ್ಟ್ರವೂ ಅವನತಿ ಹೊಂದುತ್ತದೆ ಮತ್ತು ಸನಾತನ ಧರ್ಮವು ನಾಶವಾಗುವ ಸ್ಥಿತಿಗೆ ಇಳಿದರೆ, ಸನಾತನ ಧರ್ಮದ ಕೂಡ ಅದೂ (ರಾಷ್ಟ್ರ) ನಾಶವಾಗಬಹುದು.

ಸನಾತನ ಧರ್ಮ, ಅದುವೇ ರಾಷ್ಟ್ರೀಯತೆ. ಈ ಸಂದೇಶವನ್ನೇ ನಾನು ನಿನಗೆ ಹೇಳಬೇಕಾಗಿದೆ.

**CWSA 8: 12**

*

**ಜೀವನದಲ್ಲಿ ಆಳವಡದ (ಜೀವಿಸಲಾಗದ) ಧರ್ಮವು ಅದು ಧರ್ಮವೇ ಅಲ್ಲ**

ನಮ್ಮ ಮುಂದೆ ನಾವು ಇರಿಸಿಕೊಂಡ ಕಾರ್ಯವು ಯಾಂತ್ರಿಕವಲ್ಲ ಆದರೆ ನೈತಿಕ ಮತ್ತು ಆಧ್ಯಾತ್ಮಿಕವಾಗಿರುತ್ತದೆ. ಸರಕಾರದ ಒಂದು ಸ್ವರೂಪವನ್ನು ಬದಲಿಸುವದು ನಮ್ಮ ಗುರಿಯಲ್ಲ. ಆದರೆ ರಾಷ್ಟ್ರವನ್ನು ಕಟ್ಟುವದಾಗಿದೆ. ರಾಜಕಾರಣವು ಆ ಕಾರ್ಯದ ಒಂದು ಭಾಗವಾಗಿದೆ, ಕೇವಲ ಒಂದು ಭಾಗ ಮಾತ್ರ ಆಗಿದೆ. ನಾವು ರಾಜಕಾರಣಕ್ಕೆ ಮಾತ್ರ ಮೀಸಲಾಗಿಸುವದಿಲ್ಲ, ಸಾಮಾಜಿಕ ಪ್ರಶ್ನೆಗಳಿಗಷ್ಟೆ ಅಲ್ಲ, ಮತಧರ್ಮ ಶಾಸ್ತ್ರ ಅಥವಾ ತತ್ವಜ್ಞಾನ ಅಥವಾ ಸಾಹಿತ್ಯ ಅಥವಾ ವಿಜ್ಞಾನಗಳಿಗೂ ಅಲ್ಲ; ಆದರೆ ಇವೆಲ್ಲವುಗಳನ್ನು ಒಂದೆ ಪದಾರ್ಥ (ಅಸ್ತಿತ್ವ)ದಲ್ಲಿ ಒಳಪಡಿಸುತ್ತೇವೆ. ಅದು ಅತ್ಯಂತ ಮಹತ್ವವಾದದ್ದು, ಧರ್ಮ, ರಾಷ್ಟ್ರಧರ್ಮ ಎಂದು ನಾವು ನಂಬುತ್ತೇವೆ ಮತ್ತು ಅದು ವೈಶ್ವಿಕವೆಂದೂ ನಾವು ನಂಬುತ್ತೇವೆ. ಜೀವನದ ಒಂದು ಶಕ್ತಿಶಾಲಿಯಾದ ನಿಯಮ (ಕಟ್ಟಳೆ) ಇರುತ್ತದೆ, ಮಾನವ ಉತ್ಕ್ರಾಂತಿಯ ಒಂದು ಮಹಾನ್ ತತ್ವ, ಆಧ್ಯಾತ್ಮಿಕ ಜ್ಞಾನ ಮತ್ತು ಅನುಭವಗಳ ಒಂದು ಪ್ರಧಾನ ಭಾಗವಾಗಿರುತ್ತದೆ. ಭಾರತವು ಯಾವಾಗಲೂ ಅದರ ಪೋಷಕ, ಆದರ್ಶ ಉದಾಹರಣೆ ಮತ್ತು ಧರ್ಮಪ್ರಚಾರಕ (ಮಿಶನರಿ) ಆಗುವದು ವಿಧಿ ನಿಯಾಮಕವಾಗಿರುತ್ತದೆ. ಇದುವೇ ಸನಾತನ ಧರ್ಮ, ಶಾಶ್ವತವಾದ ಧರ್ಮ. ಪರಕೀಯ ಆಘಾತಗಳ ಒತ್ತಡದಿಂದ ಅದು ಬಹುಮಟ್ಟಿಗೆ ಆ ಧರ್ಮದ ಹಿಡಿತವನ್ನು ಕಳೆದುಕೊಂಡಿದೆಯಷ್ಟೆಯಲ್ಲ ಆದರೆ ಅದರ ಜೀವನದ (ಜೀವಂತ) ಸತ್ಯವನ್ನೂ ಕಳೆದುಕೊಂಡಿದೆ. ಭಾರತದ ಧರ್ಮವು ಜೀವನದಲ್ಲಿ ಅಳವಡದಿದ್ದರೆ ಅದಕ್ಕೆ ಬೆಲೆಯೆ ಇಲ್ಲ. ಅದು ಕೇವಲ ಜೀವನಕ್ಕೆ ಮಾತ್ರ ಅಲ್ಲ ಆದರೆ ಸಮಗ್ರ ಜೀವನಕ್ಕೆ ಅಳವಡಿಸಲ್ಪಡಬೇಕು; ಅದರ ಸಾರ–ಸತ್ವವು ನಮ್ಮ ಸಮಾಜದಲ್ಲಿ, ನಮ್ಮ ರಾಜಕಾರಣದಲ್ಲಿ ನಮ್ಮ ಸಾಹಿತ್ಯದಲ್ಲಿ, ನಮ್ಮ ವಿಜ್ಞಾನದಲ್ಲಿ, ನಮ್ಮ ವೈಯಕ್ತಿಕ ವ್ಯಕ್ತಿತ್ವದಲ್ಲಿ, ಮನೋಭಾವಗಳಲ್ಲಿ ಮತ್ತು ಅಭೀಪ್ಸೆಗಳಲ್ಲಿ ಪ್ರವೇಶ ಮಾಡಬೇಕು ಮತ್ತು ಎರಕಹೊಯ್ಯಡಬೇಕು. ಈ ಧರ್ಮದ ಹೃದಯವನ್ನು ತಿಳಿಯಬೇಕಾದರೆ – ಅದು ಒಂದು ಸತ್ಯವೆನ್ನುವ ಅನುಭವವನ್ನು ಪಡೆಯುವದು, ಅದು ಏರುವ ಎತ್ತರದ ಉನ್ನತ ಭಾವನೆಗಳನ್ನು ಅನುಭವಿಸುವದು



ಕರ್ಮಯೋಗದಿಂದ ನಾವು ಏನನ್ನು ತಿಳಿದುಕೊಳ್ಳುವೆವೊ ಅದೇ ಆಗಿದೆ. ಯೋಗವನ್ನು ಮಾನವ ಜೀವನದ ಆದರ್ಶವಾಗಿ ಮಾಡಲು ಇಂದು ಭಾರತವು ಏಳುತ್ತಿದೆ ಎಂಬುದು ನಮ್ಮ ನಂಬಿಗೆಯಾಗಿರುತ್ತದೆ. ಯೋಗದಿಂದ ಅದು ತನ್ನ ಸ್ವಾತಂತ್ರ್ಯ, ಏಕತೆ ಮತ್ತು ಮಹಾನ್ನತೆಗಳನ್ನು ಸಿದ್ಧಿಕೊಳ್ಳುವ ಶಕ್ತಿಯನ್ನು ಪಡೆಯುತ್ತದೆ; ಯೋಗದಿಂದ ಅದನ್ನು ಕಾಯ್ದುಕೊಳ್ಳುವ ಶಕ್ತಿಯನ್ನು ಪಡೆಯುತ್ತದೆ. ನಾವು ಮುಂಗಾಣುತ್ತಿರುವದು ಆಧ್ಯಾತ್ಮಿಕ ಉತ್ಕ್ರಾಂತಿ ಮತ್ತು ಭೌತಿಕವು ಅದರ ನೆರಳು ಮತ್ತು ಪ್ರತಿಬಿಂಬವಾಗಿರುತ್ತದೆ.

**CWSA 8: 24**

*

**ಕೇವಲ ಆತ್ಮವು ಮಾತ್ರ ರಕ್ಷಿಸಬಲ್ಲದು**

ನಮ್ಮ ಸಮಾಜವನ್ನು ಯುರೋಪದ ಅನುಕರಣಕಾರರನ್ನಾಗಿ ಮಾಡುವ–ದಕ್ಕೋಸ್ಕರ ಕಲ್ಪನೆ(ಯಂತ್ರ ಸಾಧನ)ಗಳನ್ನು ಬದಲಿಸುವದರಿಂದ ನಾವು ಸಾಮಾಜಿಕ ನವೀಕರಣದ ಮೇಲೆ ಪ್ರಭಾವ ಬೀರಬಹುದೆಂದು ನಾವು ನಂಬುವದಿಲ್ಲ. ವಿಧವಾ–ಪುನರ್ವಿವಾಹ, ಜಾತಿಯ ಬದಲಾಗಿ ಶ್ರೇಣಿ, ಪ್ರೌಢವಿವಾಹ, ಅಂತರ್ಜಾತಿ ವಿವಾಹ, ಸಹಭೋಜನ ಮತ್ತು ತನ್ನದೇ ಸರ್ವೋತ್ತಮ ಎಂದು ಹೇಳುವ ಸಮಾಜ ಸುಧಾರಕರ ಮಾತುಗಳು ಯಾಂತ್ರಿಕ ಬದಲಾವಣೆಗಳಾಗಿರುತ್ತವೆ. ಅವುಗಳ ಅರ್ಹತೆ ಅಥವಾ ಅನರ್ಹತೆ ಏನೇ ಇದ್ದರೂ ಅವು ಸ್ವತಃ ರಾಷ್ಟ್ರದ ಆತ್ಮವನ್ನು ಜೀವಂತವಾಗಿ ರಕ್ಷಿಸಲಾರವು ಅಥವಾ ಅವನತಿ ಮತ್ತು ಅವಸಾನದ ಗತಿಯನ್ನು (ಹರಿವನ್ನು) ತಡೆಯಲಾರವು. ಕೇವಲ ಆತ್ಮವು ಮಾತ್ರ ರಕ್ಷಿಸುತ್ತದೆ ಮತ್ತು ಹೃದಯದಲ್ಲಿ ಮಹಾನ್ ಮುಕ್ತರು ರಾಜಕೀಯವಾಗಿ ಮಹಾನ್‌ರೂ ಮುಕ್ತರೂ ಆಗಬಲ್ಲೆವು. ಪಶ್ಚಿಮ (ದೇಶ)ದಿಂದ ಆಮದುಕೊಂಡ ಕ್ಷುಲ್ಲಕ ಮತ್ತು ಕೆಳಮಟ್ಟದ ಧಾರ್ಮಿಕ ವಿಚಾರಗಳ ಮಿತಿಯಲ್ಲಿ ಹೊಸ ಪಂಥಗಳನ್ನು ಗುಣಿಸುವ(ಹೆಚ್ಚು ಮಾಡುವ)ದರಿಂದ ಅಥವಾ ಹಿಂದುತ್ವದ ಶರೀರ ಮತ್ತು ಉಡುಪುಗಳನ್ನು ಸ್ಮರಣೀಯವಾಗಿ ಮಾಡುವ ಸಂಘಟನೆಗಳನ್ನು ಹುಟ್ಟು ಹಾಕುವದರಿಂದ ನಾವು ನಮ್ಮ ಆಧ್ಯಾತ್ಮಿಕ ಆರೋಗ್ಯ, ಶಕ್ತಿ ಮತ್ತು ದೊಡ್ಡಸ್ತಿಕೆ(ಮಹತ್ತತೆ)ಗಳನ್ನು ಮತ್ತೆ ಮರಳಿ ಪಡೆಯುತ್ತೇವೆ ಎಂದು ನಾವು ನಂಬುವದಿಲ್ಲ. ಸ್ವತಂತ್ರ ವಿಚಾರ ಮತ್ತು ಭೌತಿಕತೆಗಳೊಳಗಿಂದ ಒಂದು ಹೊಸ ಧಾರ್ಮಿಕ ವಿಚಾರ ಮತ್ತು ಅನುಭವಗಳ ಸಮನ್ವಯದತ್ತ,

ಅಸಹಿಷ್ಣುತೆಯಿಂದ ಮುಕ್ತವಾದ, ಆದರೂ ನಂಬುಗೆ ಮತ್ತು ಕಟ್ಟಾಸಕ್ತಿಯಿಂದ ಕೂಡಿದ ಒಂದು ಧಾರ್ಮಿಕ ಜಗತ್ತಿನತ್ತ, ಧರ್ಮದ ಎಲ್ಲರೂ ರೂಪುಗಳನ್ನು ಸ್ವೀಕರಿಸುತ್ತ (ಒಪ್ಪಿಕೊಳ್ಳುತ್ತ) ಯಾಕಂದರೆ ಆ ಏಕ (ಒಂದು)ದಲ್ಲಿ ಅದಕ್ಕೆ ಅವಿಚಲ ವಿಶ್ವಾಸವಿದೆ – ಬದಲಾವಣೆಯ ಕಾಲದಲ್ಲಿ ಹಾಯ್ದು ಚಲಿಸುತ್ತದೆ. ವಿಜ್ಞಾನ ಮತ್ತು ನಂಬುಗೆಗಳನ್ನು ಒಪ್ಪಿಕೊಳ್ಳುವ, ಈಶ್ವರವಾದ, ಕ್ರಿಶ್ವಾನಿಟಿ (ಕ್ರೈಸ್ತ ಧರ್ಮ), ಮಹಮ್ಮದೀಯ ಧರ್ಮ ಮತ್ತು ಬೌದ್ಧ ಧರ್ಮಗಳನ್ನು ಅಪ್ಪಿಕೊಳ್ಳುವ, ಆದರೂ ಇವಾವವೂ ಅಲ್ಲದರತ್ತ ಜಗದಾತ್ಮವು ಚಲಿಸುತ್ತದೆ. ನಮ್ಮದು (ಧರ್ಮ) ಅತ್ಯಂತ ಸಂದೇಹವಾದದಿಂದ ಮತ್ತು ಅತ್ಯಂತ ನಂಬುಗೆಯಿಂದ ಕೂಡಿದ್ದು, ವಾದವೇಕೆಂದರೆ, ಅದು ಪ್ರಶ್ನೆಗಳನ್ನು ಕೇಳುತ್ತದೆ ಮತ್ತು ಹೆಚ್ಚಾಗಿ ಪ್ರಯೋಗಗಳನ್ನು ಮಾಡಿ ನೋಡುತ್ತದೆ. ಅತ್ಯಂತ ನಂಬುಗೆಯದು ಯಾಕಂದರೆ ಅದಕ್ಕೆ ಆಳಾತಿ ಆಳದ ಅನುಭವಗಳಿವೆ ಮತ್ತು ಅತ್ಯಂತ ವೈವಿಧ್ಯಪೂರ್ಣ ಮತ್ತು ಸಕಾರಾತ್ಮಕ ಆಧ್ಯಾತ್ಮಿಕ ಜ್ಞಾನವಿದೆ – ಆ ಹಿಂದು ಧರ್ಮವು ಒಂದು ತತ್ವ ಸಿದ್ಧಾಂತವಲ್ಲ ಅಥವಾ ತತ್ವ ಸಿದ್ಧಾಂತಗಳ ಒಟ್ಟುಗೂಡುವಿಕೆಯೂ ಅಲ್ಲ. ಆದರೆ ಅದು ಜೀವನದ ನಿಯಮ (ಕಟ್ಟಳೆ) ಆಗಿದೆ. ಅದು ಸಾಮಾಜಿಕ ಚೌಕಟ್ಟು ಅಲ್ಲ, ಆದರೆ ಗತಕಾಲದ ಮತ್ತು ಭವಿಷತ್ಕಾಲದ ಸಾರಸತ್ವ (spirit) ಆಗಿದೆ. ಅದು ಏನನ್ನೂ ನಿರಾಕರಿಸುವದಿಲ್ಲ. ಆದರೆ ಪ್ರತಿಯೊಂದನ್ನೂ ಪರೀಕ್ಷಿಸುವಂತೆ ಮತ್ತು ಪ್ರಯೋಗ ಮಾಡುವಂತೆ ಒತ್ತಾಯಿಸುತ್ತದೆ ಮತ್ತು ಪರೀಕ್ಷಿಸಿದ ನಂತರ ಮತ್ತು ಪ್ರಯೋಗ ಮಾಡಿದ ನಂತರ ಅದನ್ನು ಆತ್ಮದ ಉಪಯೋಗಕ್ಕೆ ತಿರುಗಿಸುತ್ತದೆ; ಈ ಹಿಂದೂ ಧರ್ಮದಲ್ಲಿ ನಾವು ಭವಿಷ್ಯದ ಜಗದ್ಧರ್ಮ(ಜಗತ್ತಿನ ಧರ್ಮ)ದ ಮೂಲಾಧಾರವನ್ನು ಕಾಣುತ್ತೇವೆ. ಈ ಸನಾತನ ಧರ್ಮಕ್ಕೆ ವೇದ, ವೇದಾಂತ, ಗೀತೆ, ಉಪನಿಷತ್, ದರ್ಶನ, ಪುರಾಣ, ತಂತ್ರಗಳು ಮೊದಲಾದ ಅನೇಕ ಶಾಸ್ತ್ರಗಳಿವೆ. ಅದು ಬಾಯಿಬಲ್ ಅಥವಾ ಕುರಾನಗಳನ್ನೂ ನಿರಾಕರಿಸುವದಿಲ್ಲ. ಆದರೆ ಅದರ ನಿಜವಾದ, ಅತ್ಯಂತ ಅಧಿಕಾರಯುಕ್ತ ಶಾಸ್ತ್ರವು ಹೃದಯದಲ್ಲಿ ಇರುತ್ತದೆ. ಅಲ್ಲಿ ಶಾಶ್ವತನು (ಭಗವಂತನ) ವಾಸವಾಗಿರುತ್ತಾನೆ. ನಾವು ನಮ್ಮ ಆಂತರಿಕ ಅನುಭವಗಳಲ್ಲಿ ನಾವು ಜಗತ್ತಿನ ಶಾಸ್ತ್ರಗಳ ಸಾಕ್ಷಿ ಮತ್ತು ಸ್ರೋತ (ಉಗಮ ಸ್ಥಳ)ಗಳನ್ನು, ಜ್ಞಾನದ ಪ್ರೀತಿಯ ಮತ್ತು ಸನ್ನಡತೆಗಳ ಕಟ್ಟಳೆಯನ್ನು ಮತ್ತು ಕರ್ಮಯೋಗದ ಮೂಲಾಧಾರ ಮತ್ತು ಪ್ರೇರಣೆಗಳನ್ನು ಕಾಣುತ್ತೇವೆ.

**CWSA 8: 25-26**

*





… ಇಲ್ಲಿರುವ ಶ್ರೀಮಾತೆಯವರ ಮತ್ತು ಸಾರಸತ್ವ Xನ ನಡುವಿನ (ಮತ್ತು ಶ್ರೀಮಾತೆ ಮತ್ತು ಅವರನ್ನು ಒಪ್ಪಿಕೊಳ್ಳುವ ಉಳಿದೆಲ್ಲರ ನಡುವಿನ) ಸಂಬಂಧವು ಅಂತರಾತ್ಮಿಕ ಮತ್ತು ಆಧ್ಯಾತ್ಮಿಕ ಮಾತೃತ್ವವಾಗಿರುತ್ತದೆ. ಭೌತಿಕ (ಜನ್ಮಕೊಟ್ಟ) ತಾಯಿ ಮತ್ತು ಅವಳ ಮಗುವಿನ ನಡುವಿನ ಸಂಬಂಧಕ್ಕಿಂತ ಅದು ಅತಿ ಮಹತ್ತರವಾದುದಾಗಿರುತ್ತದೆ; ಮಾನವ ಮಾತೃತ್ವ (ಹೆತ್ತ ತಾಯಿ) ಕೊಡಬಹುದಾದ ಎಲ್ಲವನ್ನೂ ಅದು ಕೊಡುತ್ತದೆ; ಆದರೆ ಬಹಳ ಹೆಚ್ಚಿನ ರೀತಿಯಲ್ಲಿ ಕೊಡುತ್ತದೆ, ಮತ್ತು ಅದು ತನ್ನಲ್ಲಿ ಅನಂತವಾದ ಹೆಚ್ಚಿನದನ್ನು ಒಳಗೊಂಡಿರುತ್ತದೆ.

**CWSA 32: 108** – ಶ್ರೀ ಅರವಿಂದರು

*

**ಗುರಿ ಮತ್ತು ನಮ್ಮೆದುರಿಗೆ ಇರುವ ಕಾರ್ಯ**

ಮಾನವಕುಲಕ್ಕಾಗಿ ಭಾರತವನ್ನು ಕಟ್ಟುವ ಕಾರ್ಯದಲ್ಲಿ ನೆರವಾಗುವದೇ ನಮ್ಮ ಗುರಿಯಾಗಿದೆ – ಇದು ನಾವು ನಂಬಿರುವ ಮತ್ತು ಅನುಸರಿಸುವ ರಾಷ್ಟ್ರೀಯತ್ವವಾಗಿರುತ್ತದೆ. ನಾವು ಮಾನವ ಕುಲಕ್ಕೆ ಹೇಳುತ್ತೇವೆ, “ಭೌತಿಕ

ಅಸ್ತಿತ್ವ(ಇರುವಿಕೆ)ದಿಂದ ಮೇಲೆದ್ದು ಹೆಚ್ಚು ಉನ್ನತವಾದ, ಹೆಚ್ಚು ಆಳವಾದ ಮತ್ತು ಹೆಚ್ಚು ವಿಶಾಲವಾದ ಜೀವನದತ್ತ – ಯಾವುದಕ್ಕಾಗಿ ಮನುಕುಲವು ಹಂಬಲಿಸುತ್ತಿದೆಯೋ ಆ ಜೀವನದತ್ತ ನೀವು ದೊಡ್ಡ ಹೆಜ್ಜೆಯನ್ನು ಹಾಕಲೇಬೇಕಾದ ಸಮಯ ಬಂದಿದೆ. ಮನುಕುಲಕ್ಕೆ ಕಾಡಿದ ಸಮಸ್ಯೆಗಳನ್ನು ಆಂತರಿಕ ಸಾಮ್ರಾಜ್ಯವನ್ನು ಗೆಲ್ಲುವದರಿಂದ ಮಾತ್ರ ಬಿಡಿಸಲು ಸಾಧ್ಯವಿರುತ್ತದೆ. ಪ್ರಕೃತಿಯ ಶಕ್ತಿಗಳನ್ನು ನೆಮ್ಮದಿ ಮತ್ತು ಐಶಾರಾಮಗಳ ಸೇವೆಗೆ ಬಿಗಿಯಾಗಿ ಕಟ್ಟಿಹಾಕುವದರಿಂದ ಸಾಧ್ಯವಿಲ್ಲ, ಆದರೆ ಬೌದ್ಧಿಕ ಮತ್ತು ಆತ್ಮಿಕ ಶಕ್ತಿಗಳ ಮೇಲೆ ಪ್ರಭುತ್ವವನ್ನು ಹೊಂದುವದರಿಂದ ಮತ್ತು ಮನುಷ್ಯನ ಸ್ವಾತಂತ್ರ್ಯವನ್ನು ಆಂತರಿಕವಾಗಿ ಮತ್ತು ಬಾಹ್ಯಕವಾಗಿ ಸಮರ್ಥಿಸುವದರಿಂದ ಮತ್ತು ಒಳಗಿನಂದ ಬಾಹ್ಯ ಪ್ರಕೃತಿಯನ್ನು ಬಯಸುವದರಿಂದ ಮಾತ್ರ ಸಾಧ್ಯವಾಗುತ್ತದೆ. ಆ ಕಾರ್ಯ ಏಶಿಯಾದ ಪುನರುತ್ಥಾನವಾಗುವ ಆವಶ್ಯಕತೆ ಇರುತ್ತದೆ, ಆದ್ದರಿಂದ ಏಶಿಯಾ (ಖಂಡ)ವು ಮೇಲೇಳುತ್ತದೆ. ಆ ಕಾರ್ಯಕ್ಕೆ ಭಾರತದ ಸ್ವಾತಂತ್ರ್ಯ ಮತ್ತು ಮಹತ್ತರತೆಯು ಆವಶ್ಯಕವಾಗಿರುತ್ತದೆ. ಆದ್ದರಿಂದ ಅದು (ಭಾರತವು) ತನ್ನ ಉದ್ದೇಶಿತ ಸ್ವಾತಂತ್ರ್ಯವನ್ನು ಮತ್ತು ಮಹತಿಯನ್ನು ಪ್ರತಿಪಾದಿಸುತ್ತದೆ ಮತ್ತು ಎಲ್ಲ ಮಾನವಕುಲದ, ಇಂಗ್ಲಂಡನ್ನು ಹೊರತುಪಡಿಸಿಯಲ್ಲ – ಹಿಡಿತದ ದೃಷ್ಟಿಯಿಂದ ಅದು (ಭಾರತವು) ತನ್ನ ಹಕ್ಕನ್ನು ಸಮಗ್ರವಾಗಿ ಪ್ರತಿವಾದಿಸತಕ್ಕದ್ದು.

ನಾವು ರಾಷ್ಟ್ರಕ್ಕೆ ಹೇಳುತ್ತೇವೆ, “ನಾವು ನಾವೇ ಆಗಬೇಕೆ ವಿನಃ ಯುರೋಪದವರಾಗಬಾರದೆಂಬುದು ಭಗವಂತನ ಸಂಕಲ್ಪವಾಗಿರುತ್ತದೆ. ನಾವು ನಮ್ಮ ಸ್ವಂತದ್ದನ್ನು ಬಿಟ್ಟು ಬೇರೆಯ ಸತ್ತೆಯನ್ನು (being) ಅನುಸರಿಸಿ ನಮ್ಮ ಜೀವನವನ್ನು ಪುನಃ ಪಡೆಯುವದಕ್ಕಾಗಿ ಪ್ರಯತ್ನಿಸಿದ್ದೇವೆ. ನಾನು ಮರಳಿ ಬರಬೇಕು ಮತ್ತು ಜೀವನದ ಮೂಲ ಸ್ರೋತವನ್ನು ಉಗಮ ಸ್ಥಾನವನ್ನು ಮತ್ತು ಶಕ್ತಿಯನ್ನು ನಮ್ಮೊಳಗೇ ಹುಡುಕಿಕೊಳ್ಳತಕ್ಕದ್ದು. ನಾವು ನಮ್ಮ ಭೂತ ಕಾಲವನ್ನು ಅರಿತುಕೊಳ್ಳತಕ್ಕದ್ದು ಮತ್ತು ನಮ್ಮ ಭವಿಷತ್ ಜೀವನಕ್ಕಾಗಿ ಅದನ್ನು ಪುನಃ ಸಂಪಾದಿಸತಕ್ಕದ್ದು. ಈಗ ನಮ್ಮ ಕಾರ್ಯವೆಂದರೆ, ಮೊದಲಿಗೆ ನಮ್ಮನ್ನು ನಾವು ಅರಿಯುವದು ಮತ್ತು ಎಲ್ಲವನ್ನು ಭಾರತದ ಶಾಶ್ವತ ಜೀವನ ಮತ್ತು ಸ್ವಭಾವಕ್ಕನುಗುಣವಾಗಿ ಪುನಃ ರೂಪಿಸುವದು ಆಗಿರುತ್ತದೆ. ಆದ್ದರಿಂದ ನಮ್ಮ ಧರ್ಮದ, ನಮ್ಮ ಸಮಾಜದ, ನಮ್ಮ ತತ್ವಜ್ಞಾನದ, ರಾಜಕಾರಣದ, ಸಾಹಿತ್ಯದ, ಕಲೆಯ, ನ್ಯಾಯಶಾಸ್ತ್ರದ, ವಿಜ್ಞಾನದ, ವಿಚಾರದ, ನಮ್ಮದಾಗಿದ್ದ ಮತ್ತು



ನಮ್ಮದಾಗಿರುವ ಎಲ್ಲದರ ಹೃದಯವನ್ನು ಓದುವದು ಕರ್ಮಯೋಗಿಯ ಉದ್ದಿಷ್ಯವಾಗಿರುತ್ತದೆ. ಅದರಿಂದಾಗಿ ನಾವು ನಮ್ಮಷ್ಟಕ್ಕೆ ಮತ್ತು ನಮ್ಮ ರಾಷ್ಟ್ರಕ್ಕೆ ‘ಇದು ನಮ್ಮ ಧರ್ಮ’ ಎಂದು ಹೇಳಲು ಸಮರ್ಥರಾಗುವೆವು. ನಾವು ಐರೋಪ್ಯ ಸಂಸ್ಕೃತಿಯನ್ನು ಭಾರತೀಯ ವಿಚಾರ ಮತ್ತು ಜ್ಞಾನಗಳ ದೃಷ್ಟಿಕೋನದಿಂದ ಪುನರ್ವಿಮರ್ಶೆ ಮಾಡಬೇಕು ಮತ್ತು ನಮ್ಮ ಮೇಲೆ ಹಿಡಿತ ಸಾಧಿಸುತ್ತಿರುವ ಪಾಶ್ಚಿಮಾತ್ಯ ಮೊಹರನ್ನು ಕಿತ್ತೆಸೆಯಲು ಪ್ರಯತ್ನಿಸಬೇಕು. ನಾವು ಪಶ್ಚಿಮ–(ದೇಶ)ದಿಂದ ಏನನ್ನು ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ಭಾರತೀಯರಾಗಿ ತೆಗೆದುಕೊಳ್ಳುವೆವು ಮತ್ತು ಒಮ್ಮೆ ಸಂಶೋಧಿಸಲ್ಪಟ್ಟ ಧರ್ಮವನ್ನು ನಮ್ಮ ವೈಯ್ಯಕ್ತಿಕ ಕ್ರಿಯೆಗಳಲ್ಲಿ, ನಮ್ಮ ಸಾಮಾಜಿಕ ಜೀವನದಲ್ಲಿ ನಮ್ಮ ರಾಜಕೀಯ ಪ್ರಯತ್ನಗಳಲ್ಲಿ ಕೇವಲ ಅದನ್ನು ತೋರ್ಪಡಿಸುದಷ್ಟೇ ಅಲ್ಲ. ಆದರೆ ಅದನ್ನು ಜೀವಿಸುವದಕ್ಕಾಗಿ ನಾವು ಸರ್ವ ಪ್ರಯತ್ನವನ್ನು ಮಾಡುತ್ತೇವೆ.

**CWSA 8: 26-27**

*

**ಭಾರತದ ತ್ರಿವಿಧ ಸಂದೇಶಗಳು**

ನಾವು ಇಲ್ಲಿ ತೀರ ಸಂಕ್ಷೇಪವಾಗಿ ಭಾರತದ ತ್ರಿವಿಧ (ಮೂರು ಬಗೆಯ) – ಭೌತಿಕ, ಆಧ್ಯಾತ್ಮಿಕ ಮತ್ತು ನೈತಿಕ ಸಂದೇಶಗಳನ್ನು ವಿವರಿಸುತ್ತೇವೆ. ಭಾರತವು ಮನುಷ್ಯನಲ್ಲಿ ಭೌತ ಜಗತ್ತು ಮತ್ತು ಅದರ ಕೀಲಿ ಕೈಕೂಡ ಇದೆ ಎಂಬುದನ್ನು ನಂಬುತ್ತದೆ ಮತ್ತು ಅವ(ಮನುಷ್ಯ)ನಿಲ್ಲದೆ ಅದು ಭೌತಿಕದ ಮೂಲ ಮತ್ತು ತಳಹದಿಯಾಗುತ್ತದೆ. ಯುರೋಪವು ಇದನ್ನು ಮಂದವಾಗಿ ಸಂಶೋಧಿಸಲು ಪ್ರಾರಂಭಿಸುತ್ತಿದೆ. ಅದಕ್ಕೆ (ಯುರೋಪಕ್ಕೆ) ಮಹಾದ್ವಾರಗಳ ಆಚೆಗೆ ಇರುವ ಜಗತ್ತಿನ ಸುಳುವು ಸಿಕ್ಕಿದೆ. ಅದರ ಕೈಗಳು ಅದರ (ಮಹಾದ್ವಾರಗಳಾಚೆ ಇರುವ ಭೌತಿಕದ) ಕೀಲಿಗಾಗಿ ತಡವರಿಸುತ್ತಿವೆ. ಅದಕ್ಕೆ ಇನ್ನೂ ಆ ಕೀಲಿ ಸಿಕ್ಕಿಲ್ಲ. ಅಮರತ್ವವು (ಸಮರ್ಥಿಸಲ್ಪಟ್ಟಿದೆ) ಮತ್ತು ಒಪ್ಪಿಕೊಳ್ಳಲಾಗಿದೆ. ದೇವರಲ್ಲಿ ನಂಬಿಗೆಯಿಡಲು ಅದರಿಂದ ಸುಲಭವಾಗುತ್ತದೆ. ಆಧ್ಯಾತ್ಮಿಕ ಸಂದೇಶವೇನೆಂದರೆ, ವಿಶ್ವದ ಆತ್ಮವು ಒಂದೇ ಆಗಿರುತ್ತದೆ ಮತ್ತು ನಮ್ಮ ಆತ್ಮಗಳು ಪರಸ್ಪರ ಬಂಧುಗಳಾಗಿರುವವಷ್ಟೇ ಅಲ್ಲ, ಒಂದೇ ವಸ್ತು ಮತ್ತು ಪ್ರಕೃತಿಯಿಂದ (ಸ್ವಭಾವದಿಂದ) ಆದವುಗಳಷ್ಟೇ, ಆದರೆ ಮಹತ್ತರವಾದ ಏಕತೆಯಲ್ಲಿ ವಾಸಿಸುತ್ತವೆ ಮತ್ತು ಅದರ (ಏಕತೆಯ) ಕಡೆಗೆ ಚಲಿಸುತ್ತವೆ. ಇದರಿಂದ

ಸಿದ್ಧವಾಗುವದೇನಂದರೆ (ದೈವೀ) ಪ್ರೀತಿಯ ಅತ್ಯಂತ ಉಚ್ಚತರವಾದ ನಿಯಮವಾಗಿರುತ್ತದೆ ಮತ್ತು ಉತ್ಕ್ರಾಂತಿಯು ಅದರತ್ತಲೇ ಚಲಿಸತಕ್ಕದ್ದು. ಆನಂದ, ಸಂತೋಷ, ನಲಿವು ಇವು ಲೀಲೆಯ ಉದ್ದೇಶಗಳಾಗಿವೆ ಮತ್ತು ಪ್ರೀತಿಯ ಸಿದ್ಧಿಯು ಸಂತೋಷ ಮತ್ತು ನಲಿವುಗಳ ಉತ್ತುಂಗಶಿಖರವಾಗಿದೆ. ಆದ್ದರಿಂದ ಸ್ವ–ಸಮರ್ಪಣೆಯು (ಸ್ವತಃತ್ಯಾಗದ) ಮೂಲಭೂತ ನಿಯಮವಾಗಿದೆ. ಗೀತೆಯಲ್ಲಿ ಹೇಳುವಂತೆ, ತ್ಯಾಗ(ಆತ್ಮಾರ್ಪಣೆ)ದ ನಿಯಮದಿಂದ ಎಲ್ಲರ ತಂದೆಯು ಜಗತ್ತನ್ನು ಆರಂಭದಲ್ಲಿ ಒಂದು ಸ್ಥಿತಿಗೆ ತಂದನು ಮತ್ತು ಎಲ್ಲ ನೀತಿ, ಎಲ್ಲ ನಡತೆ, ಎಲ್ಲ ಜೀವನ ಸಂಕಲ್ಪಿತ ಅಥವಾ ಅಪ್ರಜ್ಞೆಯ ಬಲಿದಾನ(ತ್ಯಾಗ)ವಾಗಿದೆ. ಇದನ್ನು ಅರಿತುಕೊಳ್ಳುವದು ಮತ್ತು ಯಾವೊಬ್ಬನು ತನ್ನ ಸ್ವಂತದ ಆಶೆ–ಆಕಾಂಕ್ಷೆಗಳನ್ನು ತ್ಯಾಗ ಮಾಡುವುದು ನೈತಿಕ ಜ್ಞಾನದ ಆರಂಭವಾಗಿದೆ. ಕೆಳದರ್ಜೆಯ ಮತ್ತು ಅರ್ಧ–ಅನಾಗರಿಕ ನೀತಿತತ್ವವು ಕೇವಲ ಲಾಭವನ್ನು ಬಯಸುತ್ತದೆ ಮತ್ತು ಸ್ವಾರ್ಥವನ್ನು ನೈತಿಕತೆಗೆ ತಳಹದಿಯನ್ನಾಗಿ ಮಾಡುತ್ತದೆ.

**CWSA 8: 55**

*

**ಆರ್ಯ–ಚಿಂತನಗಳ ಪುನರ್–ಮನನ, ಆರ್ಯನ ವ್ಯಕ್ತಿತ್ವ**

ಪ್ರತಿಯೊಬ್ಬರಿಗೂ ಈ ಮೂಲಕ ತಿಳಿಸಿಕೊಡಬೇಕಾಗಿರುವ ಸಂಗತಿ ಎಂದರೆ, ಅದರಲ್ಲೂ ವಿಶೇಷವಾಗಿ "ಭಾರತೀಯ ಕಾರ್ಯಗಳಿಗಾಗಿ", ಜಗತ್ತಿನ ಕಾರ್ಯಗಳಿಗಾಗಿ, ದೇವರ ಕಾರ್ಯಗಳಿಗಾಗಿ ಜಾಗೃತಗೊಳ್ಳುತ್ತಿರುವ ಯುವ ಸಮುದಾಯಕ್ಕೆ ತಿಳಿಸಬೇಕಾಗಿರುವದೇನೆಂದರೆ, "ಈ ಆದರ್ಶಗಳನ್ನು ಕೇವಲ ವೈಭವೀಕರಿಸದೇ, ಎಷ್ಟೇ ಅಲ್ಪ ಪ್ರಮಾಣದಲ್ಲಿಯಾದರೂ ಸಹಿತ ಅದನ್ನು ಪೂರ್ಣಗೊಳಿಸಿ. ಒಂದು ವೇಳೆ ನಿಮ್ಮ ಮನೋ–ಬಯಕೆಯು ಯುರೋಪಿಯನ್ ವಿಚಾರಧಾರೆಗಳಿಂದ ಅಥವಾ ಜೀವನವನ್ನು ಕೇವಲ ಲೌಕಿಕ–ವ್ಯಾವಹಾರಿಕ ಪ್ರಾಧಾನ್ಯತೆಯಲ್ಲಿಯೇ ಗಮನಿಸುವದರಿಂದ, ಆ ಆದರ್ಶಗಳನ್ನು ಆಚರಿಸಲು ಸಾಧ್ಯವಾಗುವದಿಲ್ಲ.

ಭೌತಿಕವಾಗಿ ನೀವು ಏನೂ ಅಲ್ಲವೇ ಅಲ್ಲ; ಆದರೂ ಸಹಿತ ಆಧ್ಯಾತ್ಮದಲ್ಲಿ ಮಾತ್ರ ಸರ್ವಸ್ವವೇ ಆಗಿದ್ದೀರಿ. ಏಕೆಂದರೆ, ಕೇವಲ ಭಾರತೀಯ ಮಾತ್ರ



ಸರ್ವಸ್ವವನ್ನೂ ವಿಶ್ವಾಸದಿಂದ ಕಾಣುತ್ತಾನೆ, ಪ್ರತಿಯೊಂದನ್ನೂ ಸ್ಥೈರ್ಯದಿಂದ ಸ್ವೀಕರಿಸುತ್ತಾನೆ, ಪ್ರತಿಯೊಂದನ್ನು ತ್ಯಾಗ ಮಾಡಬಲ್ಲ. ಆದ್ದರಿಂದ ಮೊದಲು ಭಾರತೀಯರಾಗಿ. ನಮ್ಮ ಪೂರ್ವಜರಿಂದ ರೂಪಿಸಲ್ಪಟ್ಟರುವ ನಮ್ಮ ಅಪರೂಪದ ಪಿತ್ರಾರ್ಜಿತಗಳನ್ನು ಪುನರ್–ಸಂಪಾದಿಸಿಕೊಳ್ಳಿ; ಆರ್ಯ ಚಿಂತಗಳನ್ನು ಪುನರ್ ಮನನ ಮಾಡಿಕೊಳ್ಳಿ, ಆರ್ಯ ಪದ್ಧತಿಯ ಶಿಸ್ತು, ಆರ್ಯ–ವ್ಯಕ್ತಿತ್ವ, ಆರ್ಯ–ಜೀವನ ಶೈಲಿಗಳನ್ನು ಪುನಃ ಪಡೆದುಕೊಳ್ಳಿ. ವೇದಾಂತವನ್ನು, ಗೀತೆಯನ್ನು ಮತ್ತು ಯೋಗವನ್ನು ಮತ್ತೆ ಮರಳಿ ರೂಢಿಸಿಕೊಳ್ಳಿ. ಇವುಗಳನ್ನು ಕೇವಲ ನಿಮ್ಮ ಭಾವನಾತ್ಮಕ ನೆಲೆಯಲ್ಲಿ ಅಥವಾ ಬೌದ್ಧಿಕ ಸ್ತರದಲ್ಲಿ ಮಾತ್ರವೇ ಪಡೆಯದೇ ನಿಮ್ಮ ಜೀವನದ ಅವಿಭಾಜ್ಯ ಅಂಗಗಳಾಗಿಸಿಕೊಳ್ಳಿ.

ನೀವು ಅವುಗಳನ್ನು ಬದುಕಿಸಿದರೆ, ಆ ಮೂಲಕ ನೀವು ಸಮರ್ಥರೂ ಮತ್ತು ಉದಾತ್ತರೂ, ಶಕ್ತಿವಂತರೂ, ಅಜೇಯರೂ ಆಗುವದಲ್ಲದೇ ಅಂಜಿಕೆಯೇ ಇರದ ವ್ಯಕ್ತಿಗಳಾಗುತ್ತೀರಿ. ಆಗ ನಿಮಗೆ ಜೀವನವಾಗಲಿ ಅಥವಾ ಸಾವೇ ಆಗಲಿ ನಿಮ್ಮನ್ನು ಯಾವ ಕಾರಣಕ್ಕೂ ಭಯಪಡಿಸುವದಿಲ್ಲ. ಭಯಾನಕವಾಗಿಯೂ ಇರುವದಿಲ್ಲ. ತೊಂದರೆಗಳು ಮತ್ತು ಅಸಾಧ್ಯವೆನ್ನುವದು ನಿಮ್ಮ ಅಭಿವ್ಯಕ್ತಿತನದಲ್ಲಿ ಸಂಪೂರ್ಣವಾಗಿ ಮಾಯವಾಗಿ ಬಿಡುತ್ತದೆ.

ಇದರಲ್ಲಿ ಇರುವ ತೇಜವೇ ಅದರ ಬಲವಾಗಿದ್ದು, ಸಾಮರ್ಥ್ಯವಾಗಿದ್ದು ಅದು ನಿತ್ಯ–ನಿರಂತರವಾಗಿರುತ್ತದೆ. ಕಳೆದು ಹೋಗಿರುವ ಸಾಮ್ರಾಜ್ಯವನ್ನು ನಿಮ್ಮಷ್ಟಕ್ಕೇ ನೀವೇ ಕಡ್ಡಾಯವಾಗಿ ಮರಳಿ ಪಡೆದುಕೊಳ್ಳಲೇಬೇಕು. ಹೀಗಾಗಿ ಇದೇ ಅಂತಂಗದ ವೈರಾಜ್ಯ(ಸ್ವರಾಜ್ಯ)ವೂ ಆಗಿದೆ. ಇದೆಲ್ಲವೂ ನೀವು ಬಾಹ್ಯ ಪ್ರಪಂಚದ ಸಾಮ್ರಾಜ್ಯದಲ್ಲಿ ವಿಜಯಶಾಲಿಯಾಗುವದಕ್ಕಿಂತ ಮುಂಚೆಯೇ ಘಟಿಸಬೇಕಾಗಿದೆ.

ಇಲ್ಲಿಯೇ ಮಾತೆಯೂ ಅಧಿವಾಸವಾಗಿದ್ದು, ಮತ್ತು ಸಾಮರ್ಥ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥನೆಯನ್ನು ಕೇಳಲು ಹಂಬಲಿಸುತ್ತಿದ್ದಾಳೆ. ಅವಳಲ್ಲಿ ವಿಶ್ವಾಸವಿಡಿ. ಅವಳಿಗಾಗಿ ಸೇವೆ ಮಾಡಿ. ನಿಮ್ಮ ಹೆಬ್ಬಯಕೆಗಳನ್ನು ಅವಳಿಗೆ ಸಮರ್ಪಿಸಿ. ರಾಷ್ಟ್ರದ ಮಹಾನ್–ಭಾವದ ಎದುರು ನಿಮ್ಮ ಅಹಂಭಾವವನ್ನು ತೊರೆಯಿರಿ. ಮಾನವೀಯತೆಯ ಸೇವೆಯಲ್ಲಿ ನಿಮ್ಮ ವ್ಯಕ್ತಿಗತವಾದ ಸ್ವಾರ್ಥಪರತೆಯನ್ನು ಬಿಟ್ಟುಬಿಡಿ.

ನಿಮ್ಮಲ್ಲಿಯೇ ಅಂತರ್ಗತವಾಗಿರುವ ಎಲ್ಲ ಶಕ್ತಿಮೂಲಗಳನ್ನು ನೀವಾಗಿಯೇ ನಿಮ್ಮಲ್ಲಿ ಪುನರ್–ಪ್ರತಿಷ್ಠಾಪಿಸಿಕೊಳ್ಳಿ, ಜೊತೆಗೆ ಮತ್ತೂ ಹೆಚ್ಚಿನ ಶಕ್ತಿಯು ಆಗ ತಾನೇ ತಾನಾಗಿ ಅಧಿಕಗೊಳ್ಳುತ್ತದೆ. ಸಾಮಾಜಿಕ ಸುಬದ್ಧತೆ, ಉತ್ಕರ್ಷದ ಪ್ರಜ್ಞಾವಂತಿಕೆ, ರಾಜಕೀಯ ಸ್ವಾತಂತ್ರ್ಯ, ಮಾನವೀಯ ಚಿಂತನಗಳಲ್ಲಿ ಪ್ರಬುದ್ಧತೆಗಳ ಮೂಲಕ, ಈ ಜಗತ್ತಿನಲ್ಲಿಯೇ ಮುಂಚೂಣಿ ಸ್ಥಾನವನ್ನು ಪಡೆದುಕೊಳ್ಳಿ.

**CWSA 8: 27-28** – ಶ್ರೀ ಅರವಿಂದರು

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 6ನೇ ಸೆಪ್ಟೆಂಬರ್ 2018ರ ಗುರುವಾರದಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ತತ್ಸಂಬಂಧ ಮಧ್ಯಾಹ್ನ 1.50 ರಿಂದ 2.00ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ನಂತರ ಶಾಲಾ ಆಡಳಿತ ಮಂಡಳಿ ವತಿಯಿಂದ ವಿವಿಧ ಕ್ರೀಡೆ ಮತ್ತು ಮನರಂಜನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶಿಕ್ಷಕ ಮತ್ತು ಶಿಕ್ಷಕೇತರ ವೃಂದದವರು ಉತ್ಸಾಹದಿಂದ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಶ್ರೀ ಪುಟ್ಟು ಪರಶುರಾಮ ಕುಲಕರ್ಣಿ, ಗೌರವ ಸಂಪಾದಕರು, ಅಖಿಲ ಭಾರತ ಪತ್ರಿಕೆ ಇವರು ಆಗಮಿಸಿ ಆಧುನಿಕ ಸಮಾಜದಲ್ಲಿ ಶಿಕ್ಷಕರ ಪಾತ್ರ ಕುರಿತು ಉಪಯುಕ್ತವಾಗಿ ಮಾತನಾಡಿದರು. ಶಾಲೆ ಚೇರಮನ್‌ರಾದ ಡಾ॥ ಅಜಿತ್ ಸಬ್ನೀಸ್ ಶಿಕ್ಷಕರನ್ನು ತಮ್ಮ ಮಾತಿನಲ್ಲಿ ಹುರಿದುಂಬಿಸಿದರು. ತದನಂತರ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗೆ ಸಿಹಿ ಹಂಚಿ ಗೌರವಿಸಲಾಯಿತು. ವಂದನಾರ್ಪಣೆ–ಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

*